# ವಿ ಷ ಯ ಸೂ ಚಿ

# ಸಮಾಜವಾದದಲ್ಲಿ ಆಸಕ್ತಿ ಎಂದರೆ ಭವಿಷ್ಯದಲ್ಲಿ ಆಸಕ್ತಿ

1917ರಲ್ಲಿ ರಶಿಯಾದಲ್ಲಿ ಜರುಗಿದ ಅಕ್ಟೋಬರ್ ಮಹಾಕ್ರಾಂತಿ ಮತ್ತು ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದದ ಯಶಸ್ಸಿನ ನಂತರ, ಮಾನವ ಇತಿಹಾಸದಲ್ಲಿ ಸಮಾಜವಾದಿ ಜಗತ್ತಿನ ರಚನೆಯು ಅತ್ಯಂತ ಮಹತ್ವಪೂರ್ಣವಾದ ಸಾಮಾಜಿಕ ಪರಿವರ್ತನೆಯಾಗಿದೆ. ಈಗ ಸುಮಾರು ನಲವತ್ತು ವರ್ಷಗಳಿಂದ ಸಮಾಜವಾದಿ ವ್ಯವಸ್ಥೆಯನ್ನು, ಊಹಿಸಬಹುದಾದ ಎಲ್ಲ ಸತ್ವಪರೀಕ್ಷೆಗಳಿಗೀಡಾದ ಸೋವಿಯೆತ್ ಒಕ್ಕೂಟವೊಂದೇ ಪ್ರತಿನಿಧಿಸುತ್ತಿಲ್ಲ, ಪಶ್ಚಿಮದಲ್ಲಿ ಕ್ಯೂಬಾದಿಂದ ಪೂರ್ವದಲ್ಲಿ ವಿಯತ್ನಾಮ್‌ನವರೆಗೆ ನಾನಾ ಖಂಡಗಳಲ್ಲಿನ ಅನೇಕ ದೇಶಗಳು ಪ್ರತಿನಿಧಿಸುತ್ತಿವೆ. ಸೋವಿಯೆತ್ ಒಕ್ಕೂಟವನ್ನಷ್ಟೇ ಅಲ್ಲದೆ, ಅದು ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ದೇಶಗಳಾದ ಜರ್ಮನ್ ಜನವಾದಿ ಗಣರಾಜ್ಯ ಮತ್ತು ಚೆಕೋಸ್ಲೋವಾಕಿಯಗಳನ್ನು, ಹಾಗೂ ಸಮಾಜವಾದಿ ನಿರ್ಮಾಣ ಪಥದಲ್ಲಿ ಅಡಿ ಇರಿಸಿದಾಗ ಇನ್ನೂ ಬಂಡವಾಳಶಾಹಿ ಪೂರ್ವದ ಘಟ್ಟದಲ್ಲಿದ್ದ ದೇಶಗಳಾದಂಥ ಮಂಗೋಲಿಯ ಜನತಾ ಗಣರಾಜ್ಯ ಮತ್ತು ಲಾವೋ ಜನತಾ ಜನವಾದೀ ಗಣರಾಜ್ಯಗಳನ್ನೂ ಒಳಗೊಂಡಿದೆ.

ಜಾಗತಿಕ ಸಮಾಜವಾದಿ ವ್ಯವಸ್ಥೆಯಲ್ಲಿರುವ ರಾಷ್ಟ್ರಗಳ ಭವಿಷ್ಯ, ಶಾಂತಿ, ಸಾಮಾಜಿಕ ಮತ್ತು ಸ್ವಾತಂತ್ರ್ಯ ಪ್ರಗತಿ ಹಾಗೂ ರಾಷ್ಟ್ರೀಯ ಸಾರ್ವಭೌಮತ್ವದ ಬಲ ಸಂವರ್ಧನೆಗೆ ಅವುಗಳ ಆಶಯ, ಸಮಾಜದ ಸಮಾಜವಾದೀ ಪರಿವರ್ತನೆಗೆ ದೃಢವಾಗಿ ಸಂಬಂಧಿಸಿವೆ. ಸಾಮಾಜಿಕ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಅವು ಗಮನಾರ್ಹವಾದ ಸಾಧನೆಗಳನ್ನು ಮಾಡಿವೆ. ಅವು ಅನುಸರಿಸಿರುವ ಮಾರ್ಗವು ಈಗಾಗಲೇ ಹೊಸ ಸಾಮಾಜಿಕವ್ಯವಸ್ಥೆಯ ಅನುಕೂಲಗಳನ್ನು ಪಡೆದುಕೊಳ್ಳಲು ಇನ್ನೂ ವ್ಯಾಪಕವಾದ ಅವಕಾಶಗಳನ್ನು ನೀಡಿದೆ, ಅಗಾಧವಾದ ನಿಕ್ಷೇಪಗಳನ್ನು ರೂಢಿಸಿ, ಉತ್ತಮಗೊಳಿಸುವುದಕ್ಕೆ ಮತ್ತು ಸಮಾಜವಾದಿ ದೇಶಗಳ ಮಧ್ಯೆ ಇರುವ ಹೊಸಬಗೆಯ ಅಂತರರಾಷ್ಟ್ರೀಯ ಸಂಬಂಧಗಳ ಅಪಾರವಾದ ಸೃಜನಾತ್ಮಕ ಚೈತನ್ಯವನ್ನು ಉಪಯೋಗಿಸಿಕೊಳ್ಳುವುದಕ್ಕೆ ನೆರವಾಗಿದೆ.

ಜನತೆ ಮತ್ತು ಇಡೀ ರಾಷ್ಟ್ರಗಳ ನಡುವೆ ಮೂಲಭೂತವಾಗಿ ಹೊಸ ಸಂಬಂಧಗಳನ್ನು ನಿರ್ಮಿಸುವ ಅಸಾಧಾರಣವಾದಂಥ ಕಾರ್ಯವು ಘರ್ಷಣೆಗಳಿಲ್ಲದೆ, ಅನೇಕ ಹೊಸ ಹಾಗೂ ಅನಿರೀಕ್ಷಿತವಾದ ಸಮಸ್ಯೆಗಳ ಉದ್ಭವವಿಲ್ಲದೆ ಮುಂದುವರಿಯುವುದು ಸಾಧ್ಯವಿಲ್ಲ. ಆದರೂ ಇಂದು

ಎಷ್ಟೇ ಅಡ್ಡಿ ಆತಂಕಗಳಿದ್ದಾಗ್ಯೂ, ಗುಣಾತ್ಮಕವಾಗಿ ಹೊಸದಾದ ಮತ್ತು ಆಧುನಿಕ ಕಾಲದಲ್ಲಿ ಅತ್ಯಂತ ಸಮಂಜಸವಾದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿ, ಸ್ಥಾಪನೆಮಾಡಿರುವುದು ಸಮಾಜವಾದಿ ದೇಶಗಳ ಅತಿ ಮುಖ್ಯವಾದ ಲಕ್ಷಣವಾಗಿದೆ. ಅದು ವರ್ಗ ಆಧಿಪತ್ಯ ಮತ್ತು ಅಧೀನತೆಯ ಸಂಬಂಧಗಳ ಸ್ಥಾನದಲ್ಲಿ, ಸಂಗಾತಿಯಂತ ಸಹಕಾರ ಮತ್ತು ಪರಸ್ಪರ ಸಹಾಯ, ವರ್ಗ ಮತ್ತು ಜನಾಂಗ ಮರ್ದನದಿಂದ ಮುಕ್ತವಾದ ಸಂಬಂಧಗಳನ್ನು ತಂದಿತು. ಆಧುನಿಕ ಕಾಲದ ಈ ಮೂಲ ಐತಿಹಾಸಿಕ ಸಂಗತಿಯನ್ನು, ಸಮಾಜವಾದದ ವಿರೋಧಿಗಳು ಮತ್ತು ನಾನಾ ಬಣ್ಣದ ಸಂಶಯಗ್ರಸ್ತರು ಎಷ್ಟೇ ಕಷ್ಟಪಟ್ಟು ಪ್ರಯತ್ನಿಸಿದರೂ ಅಲ್ಲಗಳೆಯಲಾಗದು, ತಿರಸ್ಕರಿಸಲಾಗದು.

ಬಂಡವಾಳಶಾಹಿ ದೇಶಗಳ ನಾನಾ ಜನ ವಿಭಾಗಗಳಲ್ಲಿ ಇತ್ತೀಚೆಗೆ ಸಮಾಜವಾದಿ ದೇಶಗಳ ಬಗ್ಗೆ ಆಸಕ್ತಿ ಹೆಚ್ಚುತ್ತಿರುವುದು, ಮೂಲಭೂತವಾದ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಆ ದೇಶಗಳ ಸಾಧನೆಗಳ ಅಂತರರಾಷ್ಟ್ರೀಯ ಮಹತ್ವಕ್ಕೆ ಒಂದು ಸೂಚಕವಾಗಿದೆ. "ಕ್ಷೇಮಾಭ್ಯುದಯ ರಾಜ್ಯ" ಕುರಿತ ಪಾಶ್ಚಿಮಾತ್ಯ ದೇಶಗಳ ಮಿಥ್ಯೆಗಳು ಮುರಿದು ಬಿದ್ದಿರುವುದರಿಂದಾಗಿ ಹಾಗೂ ಮುಖ್ಯವಾಗಿ ೧೯೭೦ರ ದಶಕದಿಂದೀಚೆಗೆ ಬಂಡವಾಳಶಾಹಿ ಜಗತ್ತಿನಲ್ಲಿ ಉಂಟಾಗಿರುವ ತೀವ್ರವಾದ ಆರ್ಥಿಕ ಬಿಕ್ಕಟ್ಟಿನ ತಳಮಳಗಳಿಂದಾಗಿ ಹೆಚ್ಚಿನಮಟ್ಟಿಗೆ ಈ ಆಸಕ್ತಿಯು ಬೆಳೆದಿದೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಗಳ ಹೊರೆಯು ಪ್ರಧಾನವಾಗಿ ಕಾರ್ಮಿಕ ವರ್ಗ, ಸಮಾಜದ ಎಲ್ಲ ಕೆಳ ಹಾಗೂ ಹೆಚ್ಚಿನ ಮಟ್ಟಿಗೆ ಮಧ್ಯಮ ಸ್ತರದ ಜನರ ಮೇಲೆ ಬೀಳುತ್ತಿದೆ. ಸಮಾಜವಾದಿ ದೇಶಗಳಲ್ಲಿ ಸಾಮಾಜಿಕ ಮತ್ತು ಜನಾಂಗೀಯ ಮರ್ದನಗಳನ್ನು ಹೇಗೆ ತೊಡೆದುಹಾಕಲಾಗಿದೆ ಎಂಬುದನ್ನೂ ಮತ್ತು ಜರೂರು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅವುಗಳ ಅನುಭವವನ್ನು ತಿಳಿದುಕೊಳ್ಳಲು ಬಂಡವಾಳಶಾಹಿ ದೇಶಗಳಲ್ಲಿನ ಪ್ರಜಾಸತ್ತಾತ್ಮಕವಾದಿ ನಾಗರಿಕರು ನಿಕಟವಾದ ಗಮನವನ್ನು ನೀಡುತ್ತಿರುವುದಕ್ಕೆ ಬಹುಮಟ್ಟಿಗೆ ಇದು ಕಾರಣವಾಗಿದೆ. ಪಶ್ಚಿಮ ರಾಷ್ಟ್ರಗಳ ಅತ್ಯಂತ ವಿಭಿನ್ನ ಹಾಗೂ ವ್ಯಾಪಕವಾದ ರಾಜಕೀಯ ಮತ್ತು ಸಾರ್ವಜನಿಕ ವಲಯಗಳಲ್ಲಿ ಸಮಾಜವಾದಿ ದೇಶಗಳ ಬೆಳವಣಿಗೆ ಮತ್ತು ಅವುಗಳ ನಡುವಣ ಸಂಬಂಧಗಳು ಹೆಚ್ಚು ಹೆಚ್ಚಾಗಿ ತೀವ್ರವಾದ ಅಧ್ಯಯನಕ್ಕೆ ವಿಷಯವಾಗುತ್ತಿವೆ. ಅಲ್ಲಿನ ನಾನಾ ವಿಧವಾದ ಸೈದ್ಧಾಂತಿಕ ಮತ್ತು ರಾಜಕೀಯ ಪ್ರವೃತ್ತಿಗಳು ಹಾಗೂ ಪಕ್ಷಗಳ ನಡುವೆ ತೀವ್ರವಾದ ಹೋರಾಟಕ್ಕೆ ಹೆಚ್ಚು ಹೆಚ್ಚಾಗಿ ಕೇಂದ್ರ ಬಿಂದುವಾಗುತ್ತಿದೆ. ಹಾಗಾಗಿ ಇಂದು ಪಶ್ಚಿಮ ಯೂರೋಪಿನ ಮತ್ತು ಅಮೆರಿಕಾದ ಎಲ್ಲ ಪ್ರಮುಖ ರಾಜಕೀಯ ನಾಯಕರುಗಳೂ ಸಮಾಜವಾದಿ ದೇಶಗಳು ಮತ್ತು ಇಡೀ ಸಮಾಜವಾದಿ ಜಗತ್ತಿನ ಬಗ್ಗೆ ತಮ್ಮ ಧೋರಣೆ ಏನೆಂಬುದನ್ನು ವಿವರಿಸುವುದು ಅಗತ್ಯವೆಂದು ಪರಿಗಣಿಸಿದ್ದಾರೆ. ಪ್ರಪಂಚದ ರಾಜಕಾರಣದ ಮೇಲೆ ಸಮಾಜವಾದದ ಅಗಾಧವಾದ ಪ್ರಭಾವಕ್ಕೆ ಈ ಅಂಶವೊಂದೇ ಸಾಕ್ಷಿಯಾಗಿದೆ.

ಪ್ರಪಂಚದಲ್ಲಿ ಸಮಾಜವಾದಿ ಪರಿವರ್ತನೆಯನ್ನು ಯಾವ ರೀತಿಯಲ್ಲಿಯೂ ಬಯಸದಿರುವವರು ಮತ್ತು ಮಾರ್ಕ್ಸ್, ಎಂಗೆಲ್ಸ್ ಹಾಗೂ ಲೆನಿನ್‌ರ ವಿಚಾರಗಳನ್ನು

ಒಪ್ಪದಿರುವವರು ಕೂಡ ಇಂದು ಸಮಾಜವಾದದಲ್ಲಿ ಆಸಕ್ತಿ ತೋರುತ್ತಿದ್ದಾರೆ. ಅವರಲ್ಲನೇಕರು 1980ರ ದಶಕದಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿಯು ಅಪಾಯಕಾರಿ ರೀತಿಯಲ್ಲಿ ಹದಗೆಡುತ್ತಿರುವುದರ ಬಗ್ಗೆ ತೀವ್ರವಾಗಿ ಕಳವಳಗೊಂಡಿದ್ದಾರೆ ಮತ್ತು ಸಮಾಜವಾದೀ ದೇಶಗಳನ್ನು ಕುರಿತು ಹೆಚ್ಚು ತಿಳಿದುಕೊಳ್ಳಲು ಮತ್ತು ಪ್ರಪಂಚದ ರಾಜಕೀಯದಲ್ಲಿ ಅವುಗಳ ಪಾತ್ರವನ್ನು ಅರ್ಥಮಾಡಿಕೊಳ್ಳಲು ಬಯಸುತ್ತಿದ್ದಾರೆ. ಇದು ಅರ್ಥವೇದ್ಯವೇ. ಏಕೆಂದರೆ, ಸೋವಿಯೆತ್ ಒಕ್ಕೂಟವು ತನ್ನ ಸಹಚರ ಹಾಗೂ ಮಿತ್ರ ರಾಷ್ಟ್ರಗಳ ಜೊತೆ ಸೇರಿಕೊಂಡು, ಸುಮಾರು 40 ವರ್ಷಗಳಿಂದಲೂ ಸಾಮ್ರಾಜ್ಯಶಾಹಿಗಳು ಇನ್ನೊಂದು ಹೊಸ ಜಾಗತಿಕ ಯುದ್ಧವನ್ನು ಪ್ರಾರಂಭಿಸುವುದನ್ನು ತಡೆಯುವುದರಲ್ಲಿ ಸಫಲಗೊಂಡಿದೆ. ಮಾನವ ಕುಲದ ಭವಿಷ್ಯದ ದೃಷ್ಟಿಯಿಂದ ಇದು ಅಸಾಧಾರಣವಾದ ಸಂಕೀರ್ಣತೆ ಹಾಗೂ ಪ್ರಾಮುಖ್ಯವಾದ ಕಾರ್ಯವಾಗಿದೆ. ಇತರ ಸಮಾಜವಾದಿ ದೇಶಗಳು ಮತ್ತು ಎಲ್ಲ ಶಾಂತಿಪ್ರಿಯ ಶಕ್ತಿಗಳ ಜೊತೆಯಲ್ಲಿ ಕೂಡಿಕೊಂಡು ಅದು. ಪ್ರಪಂಚದ ನಾನಾ ಬಿಕ್ಕಟ್ಟಿನ ಕ್ಷೇತ್ರಗಳಲ್ಲಿ ಉದ್ರಿಕ್ತತೆಯ ಕಾವು ನೆಲೆಗಳನ್ನು ತೊಡೆದು ಹಾಕಲು ಮತ್ತು ಸಾಮಾಜಿಕ ವ್ಯವಸ್ಥೆಗಳ ಪರಿಗಣನೆ ಇಲ್ಲದೆ, ಎಲ್ಲ ಜನತೆ ಮತ್ತು ದೇಶಗಳ ಮಧ್ಯೆ ನಿಜವಾಗಿ ಸಮಾನವಾದ, ಶಾಶ್ವತವಾದ ಮತ್ತು ಫಲಪ್ರದವಾದ ಸಹಕಾರವನ್ನು ಸ್ಥಾಪಿಸಲು ಸಕಲ ಪ್ರಯತ್ನಗಳನ್ನೂ ಮಾಡುತ್ತಿದೆ. ಈ ಪ್ರಯತ್ನಗಳ ಪರಿಣಾಮವಾಗಿ ಬಹಳ ಕಾಲದಿಂದ ಕಾಲ್ಪನಿಕವೆಂಬಂದಾಗಿ ತೋರುತ್ತಿದ್ದ ಅಂತರರಾಷ್ಟ್ರೀಯ ವಿವಾದಗಳನ್ನು ಬಗೆಹರಿಸುವ ಸಾಧನವಾಗಿ ಯುದ್ಧವನ್ನು ತೊಡೆದುಹಾಕುವ ಸಾಧ್ಯತೆಯು ಉಂಟಾಗಿದೆ.

ಆದರೆ. ಕೇವಲ ಸ್ವಾರ್ಥದಿಂದ ಸಮಾಜವಾದವನ್ನು ಕುರಿತ ಸತ್ಯ ಸಂಗತಿಗಳನ್ನು ಮುಚ್ಚಿಡಬಯಸುವ, ವಿಕೃತಗೊಳಿಸಬಯಸುವ ಪ್ರಭಾವಶಾಲಿ ಸಾಮಾಜಿಕ ಶಕ್ತಿಗಳು ಮತ್ತು ವರ್ಗಗಳು ಪ್ರಪಂಚದಲ್ಲಿವೆ. ಆದರಿಂದಾಗಿ, ಪಶ್ಚಿಮ ರಾಷ್ಟ್ರಗಳಲ್ಲಿರುವ ಅನೇಕ ಜನರಿಗೆ ಜಾಗತಿಕ ಸಮಾಜವಾದಿ ಸಮುದಾಯ ಮತ್ತು ಅವರಲ್ಲಿ ಸೋವಿಯೆತ್ ಒಕ್ಕೂಟದ ಪಾತ್ರವನ್ನು ಕುರಿತ ನಿಜ ಸಂಗತಿಗಳು ತಿಳಿಯದೇ ಇವೆ. ಆದಕ್ಕಾಗಿಯೆ ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನರಿಂದ ರೂಪಿಸಲ್ಪಟ್ಟು ವೈಜ್ಞಾನಿಕ ಆಧಾರಗಳ ಮೇಲೆ ನೆಲೆಗೊಂಡಿರುವ ಮತ್ತು ಈಗ ನೂರಾರು ಮಿಲಿಯ ಜನರು ಅನುಸರಿಸುತ್ತಿರುವ ಸಮಾಜವಾದಿ ಅಭಿವೃದ್ಧಿ ಪಥವನ್ನು ಕುರಿತು ವಿಷಯಗಳನ್ನು ತಿಳಿದುಕೊಳ್ಳಲು ಮತ್ತು ತಮ್ಮದೇ ಆದ ಅಭಿಪ್ರಾಯವನ್ನು ರೂಪಿಸಿಕೊಳ್ಳಲು ಬಯಸುವವರಿಗೆ ನೆರವಾಗುವುದು ಈ ಪುಸ್ತಕದ ಉದ್ದೇಶವಾಗಿದೆ.

# ಜಾಗತಿಕ ಸಮಾಜವಾದಿ ವ್ಯವಸ್ಥೆಯ ಉದಯ

## ನಲವತ್ತು ವರ್ಷಗಳ ಹಿಂದೆ ಯೂರೋಪು

ಪೂರ್ವ ಯೂರೋಪಿನ ಅನೇಕ ದೇಶಗಳಲ್ಲಿ ಐತಿಹಾಸಿಕ ಬೆಳವಣಿಗೆಗಳಿಂದಾಗಿ ಜನವಾದಿ ಮತ್ತು ಸಮಾಜವಾದಿ ಕ್ರಾಂತಿಗಳ ವಿಜಯಕ್ಕೆ ಅಗತ್ಯವಾದ ಆಧಾರವು, 1940ರ ದಶಕದ ನಡುವಿನ ಕಾಲದಲ್ಲೇ ಸಿದ್ಧವಾಗಿತ್ತು. ಈ ಕ್ರಾಂತಿಗಳು ಅಸ್ತಿತ್ವದಲ್ಲಿದ್ದ ಆಂತರಿಕ ವರ್ಗ ವೈರುಧ್ಯಗಳ ಯಥಾರ್ಥವಾದ ಪರಿಣಾಮವಾಗಿದ್ದುವು. ಶೋಷಕ ವರ್ಗಗಳು ಅನುಸರಿಸುತ್ತಿದ್ದ ನೀತಿಗಳು ಆ ಎಲ್ಲ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದುವು ಮತ್ತು ಸಾಕಷ್ಟು ಭಿನ್ನತೆಗಳಿಂದ ಕೂಡಿದ್ದುವು. ಬಲ್ಗೇರಿಯ, ಪೋಲೆಂಡ್, ರುಮೇನಿಯ ಮತ್ತು ಚೆಕೊಸ್ಲೋವಾಕಿಯಗಳಲ್ಲಿ, ಸಾಮ್ರಾಜ್ಯಶಾಹಿ ಶಕ್ತಿಗಳ ಒತ್ತಾಯದಡಿಯಲ್ಲಿ ಈ ವರ್ಗಗಳಿಗೆ ತಮ್ಮ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸಾಧ್ಯವಿರಲಿಲ್ಲ. ಆಂಗ್ಲೋ-ಅಮೆರಿಕನ್ ಆಳುವ ವಲಯಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರೋತ್ಸಾಹ ನೀಡಿ ಸೋವಿಯೆತ್ ಒಕ್ಕೂಟದ ವಿರುದ್ಧವಾಗಿ ಹೋರಾಡಲು ಎತ್ತಿಕಟ್ಟಿದ್ದ ಜರ್ಮನ್ ಸಾಮ್ರಾಜ್ಯಶಾಹಿ ಅಧಿನಾಯಕತ್ವವು ಯೂರೋಪಿನ ಜನತೆಗೆ ಭೀಕರವಾದ ದುರಂತ ತರುವುದರಲ್ಲಿ ಪರ್ಯವಸಾನಗೊಂಡಿತು.

ಬಲ್ಗೇರಿಯ, ಹಂಗೆರಿ ಮತ್ತು ರುಮೇನಿಯ ಮೊದಲಾದ ದೇಶಗಳ ಶ್ರೀಮಂತ ವರ್ಗಗಳು ರಾಷ್ಟ್ರದ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಿಂತ ಹೆಚ್ಚಾಗಿ ತಮ್ಮ ಆಸ್ತಿಯನ್ನು ಕಾಪಾಡಿಕೊಳ್ಳುವುದರಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದುವು. ಅವುಗಳ ಆಳುವ ವಲಯಗಳವರು ಬಹುಮಟ್ಟಿಗೆ ಹಿಟ್ಲರನ ಭಂಟರೂ ಮತ್ತು ಅನುಚರರೂ ಆಗಿದ್ದರು. ಬ್ರಿಟಿಷ್, ಫ್ರೆಂಚ್ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿ ರಾಜಕಾರಣಿಗಳು ಸೋವಿಯೆತ್ ವಿರೋಧಿ ಗುರಿಗಳಿಗಾಗಿ ಪೋಲೆಂಡ್ ಮತ್ತು ಚೆಕೊಸ್ಲೊವಾಕಿಯಗಳಂಥ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಲಿಕೊಟ್ಟದ್ದು ವಿನಾಶಕಾರಿ ಪರಿಣಾಮ ಉಂಟು ಮಾಡಿತು. ಕೊನೆಯದಾಗಿ ಹೇಳಬೇಕೆಂದರೆ, ಬ್ರಿಟಿಷ್, ಫ್ರೆಂಚ್ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಆ ದೇಶಗಳನ್ನು ಪ್ರಪಂಚದ ಪ್ರಥಮ ಸಮಾಜವಾದಿ ರಾಜ್ಯದ ಸುತ್ತ ಕುಖ್ಯಾತವಾದ ಬೋಲ್ಷೆವಿಕ್ ವಿರೋಧಿ ಬೇಲಿಯನ್ನು ನಿರ್ಮಿಸಲು ಸಾಧನವಾಗಿ ಉಪಯೋಗಿಸಿಕೊಳ್ಳುತ್ತಿದ್ದುವು.

ಎರಡನೆಯ ಜಾಗತಿಕ ಯುದ್ಧದ ಕಾಲದಲ್ಲಿ ಪೂರ್ವ ಯುರೋಪಿನ ವಿಷಯದಲ್ಲಿ ಬ್ರಿಟಿಷ್ ಮತ್ತು ಅಮೆರಿಕನ್ ನಾಯಕತ್ವದ ಗುರಿಯು ಫ್ಯಾಸಿಸಂನ ಪರಾಜಯದಿಂದ ಅಲ್ಲಿನ ಅತ್ಯಂತ ಸಂಪ್ರದಾಯವಾದಿ ಮತ್ತು ಕ್ರಾಂತಿ-ವಿರೋಧಿ ಶಕ್ತಿಗಳಿಗೆ ವಿಶೇಷವಾಗಿ ಅನುಕೂಲವಾಗುವಂಥ ಪರಿಸ್ಥಿತಿಗಳನ್ನು ನಿರ್ಮಿಸುವುದಾಗಿತ್ತು. ಪಾಶ್ಚಿಮಾತ್ಯ ರಾಷ್ಟ್ರಗಳು ಈ ಶಕ್ತಿಗಳಿಗೆ ಬಹಿರಂಗವಾಗಿ ಹಾಗೂ ರಹಸ್ಯವಾಗಿ ಹಣಕಾಸು ಮತ್ತು ಸೈನಿಕ ನೆರವನ್ನು ನೀಡಿದುವು. ಪ್ರಥಮ ಸಮಾಜವಾದಿ ದೇಶದ ಪ್ರಾಬಲ್ಯ ಮತ್ತು ಅದರ ಧೀರೋದಾತ್ತ ಸೇನೆಗಳ ನಿಸ್ವಾರ್ಥತೆಯು ಆಗ್ನೇಯ ಮತ್ತು ಮಧ್ಯ ಯುರೋಪಿನ ದೇಶಗಳ ಜನತೆಗೆ ಜರ್ಮನ್ ಸಾಮ್ರಾಜ್ಯಶಾಹಿಯ ಸಂಕೋಲೆಗಳನ್ನು ಕಿತ್ತೊಗೆಯುವುದಕ್ಕೆ ಮತ್ತು ಒಂದು ಸಾಮ್ರಾಜ್ಯಶಾಹಿಯ ಆಕ್ರಮಣಕ್ಕೆ ಪ್ರತಿಯಾಗಿ ಇನ್ನೊಂದು ಬರುವ ಸಾಧ್ಯತೆಯ ಭವಿಷ್ಯವನ್ನು ತೊಡೆದುಹಾಕುವುದಕ್ಕೆ ನಿರ್ಣಾಯಕವಾಗಿ ಸಹಾಯಕವಾದವು.

ಬಹಿರಂಗವಾದ ಕಮ್ಯೂನಿಸ್ಟ್ ವಿರೋಧಿ ರೂಪಗಳಲ್ಲಿಯೋ ಅಥವಾ ಯುರೋಪಿನ ಸಂಸ್ಕೃತಿಯ ಐಕ್ಯತೆ ಕುರಿತ ಕಾಳಜಿಯ ಕಳ್ಳ ನೆಪದಿಂದಲೋ ತಮ್ಮ ಮೇಲೆ ಹೊರಿಸಲಾದ ಸೋವಿಯೆತ್ ವಿರೋಧಿ ಭಾವನೆಯು, ತಮಗೆ ರಾಷ್ಟ್ರೀಯ ದುರಂತಗಳನ್ನು ತಂದಿತು ಮತ್ತು ಅತ್ಯಂತ ಪ್ರತಿಗಾಮಿ ಅಂತರರಾಷ್ಟ್ರೀಯ ಶಕ್ತಿಗಳು ನಡೆಸುತ್ತಿದ್ದ ಪ್ರಜಾಪ್ರಭುತ್ವ ವಿರೋಧಿ ಹೋರಾಟದಲ್ಲಿ ತಮ್ಮನ್ನು ಸಾಧನವಾಗಿ ಬಳಸಿಕೊಳ್ಳಲಾಯಿತು ಎಂಬುದನ್ನು ಸ್ವಂತ ಅನುಭವದಿಂದ ಪೂರ್ವ ಯುರೋಪಿನ ಜನತೆ ಅರಿತುಕೊಂಡರು. ಇದು ಪೂರ್ವ ಯುರೋಪಿನ ದೇಶಗಳಿಗೆ ಮಾತ್ರವೇ ಸೀಮಿತವಾಗಿತ್ತೆಂದೇನಲ್ಲ.

ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಸೋವಿಯೆತ್ ವಿರೋಧಿವಾದದ ನೀತಿಯ ದಿವಾಳಿಕೋರತನ ಮತ್ತು ಜನತೆಯ ಹಾಗೂ ದೇಶಗಳ ಪುರೋಗಾಮಿ ಬೆಳವಣಿಗೆಗೆ ಮತ್ತು ದುಡಿಯುವ ಜನತೆಯ ಮೂಲ ಹಿತಾಸಕ್ತಿಗಳಿಗೆ ಅದರಿಂದಾದ ವಿನಾಶಕಾರಿ ಪರಿಣಾಮಗಳು, ಇವು ಜರ್ಮನ್‌ನ ನಾಜಿಸಮ್‌ನ ವಿರುದ್ಧ ಹೋರಾಟದ ಕಾಲದಲ್ಲಿ ಮತ್ತು ಅದರ ಪರಾಜಯದಲ್ಲಿ ಇಡೀ ಜಗತ್ತಿನಲ್ಲಿ ಪೂರ್ಣವಾಗಿ ಬಯಲಾದುವು. ಪ್ರಪಂಚದಾದ್ಯಂತವೂ ಜನಸಮೂಹಗಳು ಫ್ಯಾಸಿಸಂನ ವಿರುದ್ಧದ ಹೋರಾಟದಲ್ಲಿ ಪ್ರಧಾನವಾದ ಹೊರೆಯನ್ನು ಹೊತ್ತ ಸೋವಿಯೆತ್ ಒಕ್ಕೂಟವನ್ನು ವಿಮೋಚಕನಾಗಿ ಕಂಡು ಸಹಾನುಭೂತಿಯನ್ನು ತೋರಿದುವು. ಅವರ ಈ ಭಾವನೆಗಳು ಪ್ರಪಂಚದಾದ್ಯಂತವೂ ಪ್ರಮುಖ ಪ್ರಜಾಸತ್ತಾತ್ಮಕ ಆಂದೋಲನಕ್ಕೆ ಪ್ರೇರಣೆ ನೀಡಿದ ಮಹಾ ಶಕ್ತಿಯಾಗಿ ರೂಪುಗೊಂಡವು. ಪೂರ್ವ ಯುರೋಪು ಮತ್ತು ಏಶಿಯದ ದೇಶಗಳಲ್ಲಿ ಜನತಾ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಕ್ರಾಂತಿಗಳ ವಿಜಯವು ಈ ಆಂದೋಲನದ ಅತ್ಯಂತ ಸ್ಪಷ್ಟವಾದ, ಸಮಂಜಸವಾದ ಪರಿಣಾಮವಾಗಿದ್ದಿತು. ಸಮಾಜವಾದಿ ಮತ್ತು ಸೋವಿಯೆತ್ ಒಕ್ಕೂಟದೊಂದಿಗೆ ಮೈತ್ರಿ ಹಾಗೂ ಸಹಕಾರದ ಪಥವನ್ನು ಆಯ್ದುಕೊಂಡ ಪೂರ್ವ ಯುರೋಪಿನ ದೇಶಗಳು ಸ್ವತಂತ್ರಗೊಂಡು, ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಗೌರವಾನ್ವಿತವಾಗಿ ಭಾಗಿಗಳಾಗುವುದರಲ್ಲಿ ಸಫಲಗೊಂಡಿವೆ ಎಂಬುದನ್ನು ಇತಿಹಾಸವು ತೋರಿಸಿದೆ.

ಐತಿಹಾಸಿಕ ಬೆಳವಣಿಗೆಯ ಈ ದಿಶೆಯು ಸಮಾಜವಾದದ ವಿರೋಧಿಗಳ ಸೈದ್ಧಾಂತಿಕ ಮಾದರಿಗಳಿಗೆ ಹೊರತಾದುದಾಗಿದೆ. ಅವರು ಇನ್ನೂ ಕೂಡ ಜಾಗತಿಕ ಪ್ರಮಾಣದಲ್ಲಿ ಸಮಾಜ

ವಾದದ ಸ್ಥಾಪನೆಯು ಯಥಾರ್ಥವಾದ ಸ್ವಭಾವವನ್ನು ಮಾನ್ಯಮಾಡಲು ನಿರಾಕರಿಸುತ್ತಾರೆ. ಆದರಿಂದಾಗಿಯೇ ಅವರು ವಾಸ್ತವಾಂಶಗಳನ್ನು ವಿಕೃತಗೊಳಿಸಲು, ನಿಜ ಸಂಗತಿಗಳು ಏನೇ ಇದ್ದಾಗ್ಯೂ, ಕಾಲಗತಿಯನ್ನು ಹಿಮ್ಮೆಟ್ಟಿಸುವ ಸಾಧ್ಯತೆಯಿದೆ ಎಂದು ಎಲ್ಲ ರೀತಿಯಲ್ಲಿಯೂ ಸಾಬೀತು ಮಾಡಲು ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಮುಖ್ಯವಾಗಿ ಈ ಉದ್ದೇಶದಿಂದಲೇ ಅವರು ಯುದ್ಧಾನಂತರದ ಯೂರೋಪು ಮತ್ತು ಅಲ್ಲಿನ ದೇಶಗಳ ಗಡಿಗಳ ನಿಷ್ಕರ್ಷೆಯನ್ನು ಕುರಿತು 1945ರಲ್ಲಿ ಯಾಲ್ಟಾದಲ್ಲಿ ಜರುಗಿದ ಸಮ್ಮೇಳನದಲ್ಲಿ ಸೋವಿಯೆತ್ ಒಕ್ಕೂಟ, ಅಮೆರಿಕ ಮತ್ತು ಬ್ರಿಟನ್ನಿನ ನಾಯಕರುಗಳ ನಡುವೆ ಆದ ಒಪ್ಪಂದಗಳನ್ನು ಅಪಾರ್ಥ ಮಾಡಿ ಹೇಳತೊಡಗಿದ್ದಾರೆ. ಇಂದು ಸಾಮಾಜಿಕ ಪ್ರಗತಿಯ ವಿರೋಧಿಗಳು, ಈ ಐತಿಹಾಸಿಕ ಒಪ್ಪಂದಗಳನ್ನು "ಅನ್ಯಾಯ"ವಾದುದೆಂದು ಹೇಳತೊಡಗಿದ್ದಾರೆ, ಅವು ಯೂರೋಪನ್ನು "ಪ್ರಭಾವ ವಲಯಗಳಾಗಿ" ವಿಂಗಡಿಸಿವೆ ಎಂದು ಆಪಾದಿಸುತ್ತಿದ್ದಾರೆ.

ಆದರೆ, ಯಾಲ್ಟಾದಲ್ಲಿ ಮಾಡಿಕೊಳ್ಳಲಾದ ಸಂಯುಕ್ತ ಒಪ್ಪಂದಗಳು ಯುದ್ಧ ಮತ್ತು ರಾಷ್ಟ್ರೀಯ ಮರ್ದನದ ಮೇಲೆ ವಿಜಯದ ಸಂಕೇತವಾಗಿದ್ದುವು; ಅವು ಜನತೆಯನ್ನು ಮತ್ತು ದೇಶಗಳನ್ನು ಪ್ರಭಾವ ವಲಯಗಳಾಗಿ ವಿಂಗಡಿಸಲಿಲ್ಲ, ಬದಲು ಅಭಿವೃದ್ಧಿಗಾಗಿ ತಮ್ಮ ಪಥವನ್ನು ತಾವೇ ಸ್ವತಂತ್ರವಾಗಿ ಆರಿಸಿಕೊಳ್ಳಲು ಅವುಗಳಿಗೆ ಹಕ್ಕನ್ನು ನೀಡಿದವು.

ಸಹಜವಾಗಿಯೇ, ಸೋವಿಯೆತ್ ಒಕ್ಕೂಟವು ಪೂರ್ವ ಯೂರೋಪಿನ ಭವಿಷ್ಯವನ್ನು ಕಡೆಗಣಿಸಲಿಲ್ಲ. ಅದು ಯಾವತ್ತೂ ಕೂಡ ಪೂರ್ವ ಯೂರೋಪಿನ ದೇಶಗಳು ಜನವಾದಿ ರಾಜ್ಯಗಳಾಗಬೇಕೆಂದೂ, ಹಿಂದಿನಂತೆ ಅವು ಪ್ರಮುಖ ಸಾಮ್ರಾಜ್ಯಶಾಹಿ ದೇಶಗಳ ಕೈಯಲ್ಲಿ ಪೇದೆಗಳಾಗಕೂಡದೆಂದೂ ಪ್ರತಿಪಾದಿಸುತ್ತಿತ್ತು.

ಈ ವಿಷಯದಲ್ಲಿ, ಪೋಲೆಂಡಿನ ಭವಿಷ್ಯದ ಬಗ್ಗೆ ಸೋವಿಯೆತ್ ಒಕ್ಕೂಟದ ನಿಲುವು ಯೋಗ್ಯ ನಿದರ್ಶನವಾಗಿದೆ. 1945ರ ಫೆಬ್ರುವರಿಯಲ್ಲಿ ಹಿಟ್ಲರ್ ವಿರೋಧಿ ಮೈತ್ರಿ ಕೂಟದ ಮೂರು ರಾಷ್ಟ್ರಗಳ ನಾಯಕರುಗಳು ನಡೆಸಿದ ಮಾತುಕತೆಗಳ ದಾಖಲೆಗಳನ್ನು ಗಮನಿಸೋಣ. ಸೋವಿಯೆತ್ ಒಕ್ಕೂಟದ ಜನತಾ ಕಮಿಸ್ಸಾರ'ಗಳ ಮಂಡಲಿಯ ಅಧ್ಯಕ್ಷರು ನೀಡಿದ್ದ ಹೇಳಿಕೆಯೊಂದು ಇಲ್ಲಿ ಉಲ್ಲೇಖಾರ್ಹ: "ಪೋಲೆಂಡ್ ನಮ್ಮ ದೇಶದ ಗಡಿಗೆ ತಾಗಿಕೊಂಡಿದೆ ಎಂಬುದು ನಿಜ, ಆದರೆ ಸಮಸ್ಯೆಯು ಮೂಲವಾಗಿ ಅದಕ್ಕಿಂತ ಆಳವಾದುದಾಗಿದೆ... ಈವರೆಗೆ ಶತ್ರುವು ಅಷ್ಟು ಸುಲಭವಾಗಿ ಏಕೆ ಪೋಲೆಂಡಿನ ಮೇಲೆ ಎರಗಿದ್ದಾನೆ? ಮೊಟ್ಟಮೊದಲನೆಯದಾಗಿ, ಪೋಲೆಂಡ್ ದುರ್ಬಲವಾಗಿದ್ದುದರಿಂದ. ಪೋಲಿಷ್ ಗಡಿಗಳನ್ನು ಯಾಂತ್ರಿಕವಾಗಿ ರಶಿಯನ್ ಸೈನ್ಯಗಳಿಗೆ ಮಾತ್ರವೇ ಅಭೇದ್ಯವಾಗಿಸಲು ಸಾಧ್ಯವಿಲ್ಲ. ಪೋಲೆಂಡಿನ ಸ್ವಂತ ಸೇನೆಗಳು ಮಾತ್ರವೇ ಒಳಗಿನಿಂದ ಗಡಿಗಳನ್ನು ನಂಬಿಕಾರ್ಹವಾಗಿ ಕಾಪಾಡಬಲ್ಲವು. ಆದರಿಂದಾಗಿ ಪೋಲೆಂಡನ್ನು ಬಲಪಡಿಸುವುದು ಅಗತ್ಯ, ಅದಕ್ಕಾಗಿಯೇ ಸೋವಿಯೆತ್ ಒಕ್ಕೂಟವು ಬಲವಾದ ಸ್ವತಂತ್ರ ಪೋಲೆಂಡನ್ನು ನಿರ್ಮಿಸಲು ಆಸಕ್ತವಾಗಿದೆ." ಪೂರ್ವ ಯೂರೋಪಿನ ರಾಷ್ಟ್ರಗಳು ಸಾಧ್ಯವಾದಷ್ಟು ಬೇಗನೆ ಯುದ್ಧದ ಪರಿಣಾಮಗಳನ್ನು ನಿವಾರಿಸಿಕೊಳ್ಳುವುದಕ್ಕೆ ಮತ್ತು ಅವು ತಮ್ಮ ಸ್ವಂತ ಆಧಾರದ ಮೇಲೆ ನಿಲ್ಲುವಂತೆ ಮಾಡುವುದಕ್ಕೆ ನೆರವಾಗಲು ಸೋವಿಯೆತ್ ಒಕ್ಕೂಟವು ಸಾಧ್ಯವಿದ್ದುದೆಲ್ಲವನ್ನೂ ಮಾಡುತ್ತಿತ್ತು.

1940ರ ದಶಕದಲ್ಲಿ ತಮ್ಮ ಸ್ವಂತ ಇಚ್ಛೆಯಿಂದ ಪೂರ್ವ ಯುರೋಪಿನ ಜನತೆಯು ಸಮಾಜವಾದಿ ಅಭಿವೃದ್ಧಿ ಪಥವನ್ನು ಆರಿಸಿಕೊಂಡುವೇ ಹೊರತು ಬೂರ್ಷ್ವಾ ಇತಿಹಾಸ ಕಾರರು ಮತ್ತು ಪ್ರಚಾರಕರು ಕರಾಳವಾಗಿ ಚಿತ್ರಿಸುತ್ತಿರುವಂತೆ ಅದು ಮೇಲಿನಿಂದ ಹೊರಿಸಿದ್ದಲ್ಲ.

ನಾಜೀ ಆಳ್ವಿಕೆಯ ಪತನದ ನಂತರ ಜರುಗಿದ ತೀವ್ರವಾದ ಪರಿವರ್ತನೆಗಳು "ಕ್ರಾಂತಿಗಳು ಮರ್ದಿತ ಮತ್ತು ಶೋಷಿತರ ಉತ್ಸವಗಳು" * ಎಂಬ ಲೆನಿನರ ವಿಚಾರವನ್ನು ಮತ್ತೊಮ್ಮೆ ದೃಢಗೊಳಿಸಿದವು. ಉದಾಹರಣೆಗೆ, 1941ರ ಸೆಪ್ಟೆಂಬರ್ 3ರಂದು ಬಲ್ಗೇರಿಯಾದ ಪತ್ರಿಕೆಯೊಂದು ಹೀಗೆ ಬರೆಯಿತು: "ಗೆರಿಲ್ಲಾ ಹೋರಾಟಗಾರರ ನೇತೃತ್ವದಲ್ಲಿ, ದೂರದ ಬಡಾವಣೆಗಳಿಂದ ಬಂದ ಹರ್ಷಚಿತ್ತರಾಗಿದ್ದ ದುಡಿಯುವ ಜನರು "ಪ.ರಾ." ಎಂದು ಘೋಷಿಸುತ್ತ ಸ್ವಾತಂತ್ರ್ಯದ ಮೊದಲ ದಿನವನ್ನು ಕೊಂಡಾಡಲು ನಗರದ ಮಧ್ಯ ಭಾಗಕ್ಕೆ ಆಗಮಿಸಿದರು... ಜರ್ಮನ್ ಫಾಸಿಸ್ಟರು ಮತ್ತು ಪ್ರಜಾಪ್ರಭುತ್ವ ವಿರೋಧಿ ಸರ್ವಾಧಿಕಾರದ ವಿರುದ್ಧವಾಗಿ ಹೋರಾಡಿದ ಯೋಧರ ನೇತೃತ್ವದಲ್ಲಿ ಗಂಡಸರು, ಹೆಂಗಸರು ಮತ್ತು ಮಕ್ಕಳು ದೇಶಾಭಿಮಾನಿ ರಂಗದ ಭಿತ್ತಿ ಪತ್ರಗಳು ಮತ್ತು ಘೋಷಣೆಗಳನ್ನು ಎತ್ತಿ ಹಿಡಿದಿದ್ದರು. ರಸ್ತೆಗಳಲ್ಲಿ ಹರ್ಷಭರಿತ ಪ್ರದರ್ಶನಕಾರರ ಜೊತೆಗೆ ಸೈನಿಕರು, ಕಾರ್ಮಿಕರು ಮತ್ತು ನೌಕರರು ಸೇರಿಕೊಂಡರು ಮತ್ತು ಮುಗುಳುನಗೆಯಿಂದ ತುಂಬಿದ್ದ ಸಾರ್ವಜನಿಕರು ಕಿಟಕಿಗಳಲ್ಲಿ ತಲೆ ಹಾಕಿ ಗೆರಿಲ್ಲಾ ಯೋಧರನ್ನು ಅಭಿನಂದಿಸುತ್ತಿದ್ದರು. ಸಂತಸದ ಕಣ್ಣೀರು ತುಂಬಿದ್ದ ಜನರು ತಮ್ಮ ಸ್ವಾತಂತ್ರ್ಯ ದಿನದಂದು ಪರಸ್ಪರರನ್ನು ಅಭಿನಂದಿಸುತ್ತಿದ್ದರು."

ಜನತಾ ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಕ್ರಾಂತಿಗಳ ನಾಯಕತ್ವವನ್ನು ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳು ವಹಿಸಿಕೊಂಡಿದ್ದುವು. ಫಾಸಿಸಂನ ವಿರುದ್ಧವಾಗಿ ಧೀರೋದಾತ್ತವಾಗಿ ಹೋರಾಟ ನಡೆಸಿ ಅವು ನಾಯಕತ್ವದ ಹಕ್ಕನ್ನು ಪಡೆದುಕೊಂಡಿದ್ದುವು. ಉದಾಹರಣೆಗೆ, ಯುದ್ಧ ಪೂರ್ವದ ಕಾಲದಲ್ಲಿ ಪಾರ್ಟಿಯನ್ನು ಸೇರಿಕೊಂಡಿದ್ದ ಚೆಕೊಸ್ಲೊವಾಕಿಯಾದ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಲ್ಲಿ ಅರ್ಧದಷ್ಟು ಮಂದಿ ಜರ್ಮನ್ ಫಾಸಿಸ್ಟರ ವಿರುದ್ಧವಾಗಿ ಹೋರಾಡಿ ಮಡಿದಿದ್ದರು. ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಬದಲಾವಣೆಗಳಿಗೆ ಪ್ರೇರಣೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಲು ಕಮ್ಯೂನಿಸ್ಟರು ಸಾಕಷ್ಟು ಸೈದ್ಧಾಂತಿಕ ಹಿನ್ನೆಲೆಯನ್ನು ಹೊಂದಿದ್ದುದೂ ಒಂದು ಮಹತ್ವಪೂರ್ಣ ಸಂಗತಿ. ಈ ವಿಷಯದಲ್ಲಿ ಆ ಕಾಲಘಟ್ಟದಲ್ಲಿ ನಾನಾ ದೇಶಗಳ ಕಮ್ಯೂನಿಸ್ಟ್ ಪಾರ್ಟಿಗಳು ಪಡೆದುಕೊಂಡಿದ್ದ ಅನುಭವವನ್ನು ಸಮೀಕ್ಷೆ ಮಾಡಿ, ವಿಶ್ಲೇಷಣೆ ಮಾಡಿದ್ದ ಕೊಮಿನ್‌ಟರ್ನ್‌ನ (1919-1943) ಕಾರ್ಯವೂ ಕೂಡ ಮಹತ್ವಪೂರ್ಣವಾದುದಾಗಿತ್ತು. ಕೊಮಿನ್‌ಟರ್ನ್‌ನ ಕಾರ್ಯಕ್ರಮವು ಕೇಂದ್ರ ಮತ್ತು ಆಗ್ನೇಯ ಯೂರೋಪಿನ ಕೆಲವು ರಾಷ್ಟ್ರಗಳಲ್ಲಿ ಬೂರ್ಷ್ವಾ-ಪ್ರಜಾಸತ್ತಾತ್ಮಕ ಕ್ರಾಂತಿಗಳು ಹೆಚ್ಚು ಕಡಿಮೆ ಬಹು ವೇಗವಾಗಿ ಸಮಾಜವಾದಿ ಕ್ರಾಂತಿಯಾಗಿ ಪರಿವರ್ತನೆಗೊಳ್ಳುವ ಮತ್ತು ಇತರ ದೇಶಗಳಲ್ಲಿ ಅನೇಕ ಬೂರ್ಷ್ವಾ-ಪ್ರಜಾಸತ್ತಾತ್ಮಕ ಕಾರ್ಯಭಾರಗಳನ್ನು ನಿರ್ವಹಿಸಬೇಕಾಗಿರುವಂಥ ಶ್ರಮಜೀವಿ ಕ್ರಾಂತಿಗಳು ಸಂಭವಿಸುವ ಸಾಧ್ಯತೆಯನ್ನು ಸೂಚಿಸಿದ್ದಿತು.

ಈ ಸೈದ್ಧಾಂತಿಕ ನಿರೂಪಣೆಗಳ ಸತ್ಯವು ಜೀವನದಿಂದಲೇ ರುಜುವಾತುಗೊಂಡಿದೆ. ಹಲವು

---

* ವಿ. ಐ. ಲೆನಿನ್, ಸಂಕಲಿತ ಕೃತಿಗಳು, ಸಂ. ೯ ಪು ೧೧೩.

ವರ್ಷಗಳ ಹಿಂದೆಯೇ ವ್ಲದೀಮಿರ್ ಲೆನಿನ್ ಸಮಾಜವಾದಕ್ಕೆ ವಿಭಿನ್ನ ಮಾರ್ಗಗಳಿರುವುದನ್ನು ಕುರಿತು ಮುನ್ಸೂಚನೆ ನೀಡಿದ್ದರು. ಕಮ್ಯೂನಿಸಮ್‌ನ ಮೂಲ ಸೂತ್ರಗಳನ್ನು "...ಕೆಲವು ವಿಶಿಷ್ಟ ಸನ್ನಿವೇಶಗಳಲ್ಲಿ ಸರಿಯಾಗಿ ಮಾರ್ಪಾಟು ಮಾಡುವ, ರಾಷ್ಟ್ರ ಮತ್ತು ರಾಷ್ಟ್ರದ ಪ್ರಭುತ್ವದ ವಿಭಿನ್ನತೆಗೆ ಸರಿಯಾಗಿ ಅವನ್ನು ಹೊಂದಿಸುವ ಮತ್ತು ಅನ್ವಯಿಸುವ..." * ಆವಶ್ಯಕತೆಯನ್ನು ಅವರು ಒತ್ತಿ ಹೇಳಿದ್ದರು.

ಉದಾಹರಣೆಗೆ, ಬಲ್ಗೇರಿಯಾದಲ್ಲಿ ರಾಜವಂಶದ ನಿರಂಕುಶಾಧಿಕಾರದ ಸರಕಾರ ಇನ್ನೂ ಇದ್ದಾಗ್ಯೂ, ಒಡನೆಯೇ ಕಾರ್ಮಿಕ ವರ್ಗವು ಅಧಿಕಾರಕ್ಕೆ ಬಂದಿತು. ಕಮ್ಯೂನಿಸ್ಟ್ ದೊದೊರ್ ಪಾವ್ಲೋವ್ ಇನ್ನೂ ವಯಸ್ಸಿಗೆ ಬಾರದಿದ್ದ ತ್ಸಾರ್‌ನ ರೀಜೆಂಟ್‌ಗಳಲ್ಲಿ ಒಬ್ಬನಾಗಿದ್ದ.

ಪೋಲೆಂಡಿನಲ್ಲಿ ಕ್ರಾಂತಿಕಾರಿ ಪ್ರಕ್ರಿಯೆಯು ಇನ್ನೊಂದು ರೀತಿಯಲ್ಲಿ ಬೆಳೆಯಿತು. ಅಲ್ಲಿ ಕಮ್ಯೂನಿಸ್ಟರು ಮತ್ತು ಎಡ ಸೋಷಲಿಸ್ಟರು ಜನಸಮೂಹಗಳ ದೃಷ್ಟಿಯಲ್ಲಿ ಕಳಂಕಿತನಾಗಿದ್ದ ಮಿಕೊಲಾಜಿಕ್‌ನ ನೇತೃತ್ವದಲ್ಲಿದ್ದ ಸಂಯುಕ್ತ ರೈತ ಪಕ್ಷದ ಪ್ರತಿಗಾಮಿ ಶಕ್ತಿಗಳನ್ನು ಬಹಿರಂಗವಾದ ರಾಜಕೀಯ ಹೋರಾಟದಲ್ಲಿ ಪರಾಜಯಗೊಳಿಸುವುದರಲ್ಲಿ ಸಫಲರಾದರು ಮತ್ತು ತಮ್ಮ ಕಡೆಗೆ ಬಹ್ವಂಶದ ಜನರನ್ನು ಒಲಿಸಿಕೊಂಡರು. ಪ್ರತಿಗಾಮಿಗಳು ಸಶಸ್ತ್ರ ಭಯೋತ್ಪಾದನೆಯಲ್ಲೂ ನಿರತರಾದರು, ಆದರೆ ಅಂತರ್ಯುದ್ಧವನ್ನು ಪ್ರಾರಂಭಿಸಲು ಅವರಿಂದಾಗಲಿಲ್ಲ.

ರಶಿಯದಲ್ಲಿ ಹಿಂಸಾತ್ಮಕವಾದ ಪ್ರತಿ ಕ್ರಾಂತಿಕಾರಿ ಪ್ರತಿಭಟನೆಯ ಎದುರಿನಲ್ಲಿ ಸೋವಿಯೆತ್ ಸರಕಾರದ ಮೊದಲ ವರ್ಷಗಳಲ್ಲಿ ಶೋಷಕ ವರ್ಗಗಳ ಹಕ್ಕುಗಳನ್ನು ಸೀಮಿತಗೊಳಿಸಬೇಕಾಗಿ ಬಂದಂಥ ಆವಶ್ಯಕತೆ ಇಲ್ಲದೆಯೇ ಪೂರ್ವ ಯೂರೋಪಿನ ಬಹುತೇಕ ದೇಶಗಳಲ್ಲಿ ಜನತೆಯ ಶಕ್ತಿಯು ಪ್ರತಿಕ್ರಾಂತಿಕಾರಿಗಳ ಕೈಗಳನ್ನು ತಡೆಹಿಡಿದು ಸಮಾಜವಾದಿ ಪರಿವರ್ತನೆಗಳನ್ನು ಕಾರ್ಯಗತವಾಗುವಂತೆ ಮಾಡಿತು.

ಕ್ರಾಂತಿಯು ಅದನ್ನು ಕಾಪಾಡಿಕೊಳ್ಳಲು ಸಮರ್ಥವಾದಾಗ ಮಾತ್ರವೇ ಅರ್ಹತೆಯುಳ್ಳದ್ದಾಗಿರುತ್ತದೆ ಎಂಬ ಲೆನಿನರ ವಿಚಾರದ ಸತ್ಯವನ್ನು ಈ ಎಲ್ಲ ದೇಶಗಳ ಅನುಭವವೂ ದೃಢಗೊಳಿಸಿದೆ. 1948ರಲ್ಲಿ ಚೆಕೊಸ್ಲೊವಾಕಿಯದಲ್ಲಿ ಬಲಪಂಥೀಯ ಬೂರ್ಜ್ವಾ ಶಕ್ತಿಗಳು ಸರಕಾರವು ರಾಜೀನಾಮೆ ನೀಡುವಂತೆ ಒತ್ತಾಯ ತಂದು, ಕಮ್ಯೂನಿಸ್ಟೇತರ ಹೊಸ ಸರಕಾರವೊಂದನ್ನು ರಚಿಸಲು, ಆ ಮೂಲಕವಾಗಿ ಕ್ರಾಂತಿಕಾರಿ ಪ್ರಕ್ರಿಯೆಯನ್ನು ತಲೆಕೆಳಗಾಗಿಸಲು ಪ್ರಯತ್ನಿಸಿದಾಗ, ದುಡಿಯುವ ಜನರು ಪ್ರತಿಭಟಿಸಿ, ಪ್ರತಿಕ್ರಾಂತಿಕಾರಿಗಳನ್ನು ಹಿಮ್ಮೆಟ್ಟಿಸಿದರು. ಚೆಕೊಸ್ಲೋವಾಕಿಯದಲ್ಲಿ 1948ರ ಫೆಬ್ರುವರಿಯಲ್ಲಿ ಜನತೆಯ ವಿಜಯವು ಸಮಾಜವಾದಕ್ಕೆ ಮಾರ್ಗವನ್ನು ತೆರೆದ, ನಿಜವಾದ ಪ್ರಜಾಪ್ರಭುತ್ವಕ್ಕೆ ದೊರೆತ ವಿಜಯವಾಗಿತ್ತು.

ಪೂರ್ವ ಜರ್ಮನಿಯಲ್ಲಿ ವಿಶಿಷ್ಟವಾದ ಪರಿಸ್ಥಿತಿಗಳಲ್ಲಿ ಸಮಾಜವಾದದ ನಿರ್ಮಾಣ ಕಾರ್ಯ ಆರಂಭವಾಯಿತು. ಸೋವಿಯೆತ್ ಒಕ್ಕೂಟ ಮತ್ತು ಹಿಟ್ಲರ್ ವಿರೋಧಿ ಮೈತ್ರಿ ಕೂಟದ ರಾಷ್ಟ್ರಗಳು ನಾಜಿ ಜರ್ಮನಿಯ ಮೇಲೆ ಗಳಿಸಿದ ವಿಜಯವು ಜರ್ಮನಿಯ ಜನತೆಯನ್ನು ಫ್ಯಾಸಿಸಂನಿಂದ ವಿಮೋಚನೆಗೊಳಿಸಿತು. 1949ರಲ್ಲಿ ಸ್ಥಾಪನೆಗೊಂಡ ಜರ್ಮನ್ ಜನವಾದಿ ಗಣ

---

* ವಿ ಐ ಲೆನಿನ್, ಸಂಕಲಿತ ಕೃತಿಗಳು, ಸಂ. ೩೧, ಪುಟ ೯೨.

ರಾಜ್ಯವು, ಪೂರ್ವ ಯುರೋಪಿನ ದೇಶಗಳಿಗೆ ಹೋಲಿಸಿದಲ್ಲಿ ಸಾಕಷ್ಟು ಉನ್ನತ ಮಟ್ಟದ ಆರ್ಥಿಕ ಬೆಳವಣಿಗೆಯನ್ನು ಹೊಂದಿದ್ದು ಯುರೋಪಿನ ಆ ಭಾಗದಲ್ಲಿ ಶೋಷಣೆಯಿಲ್ಲದ ಬಂಡ ವಾಳಶಾಹಿಗಳು ಮತ್ತು ಭೂಮಾಲೀಕರಿಲ್ಲದ ಹೊಸ ಜೀವನದ ನಿರ್ಮಾಣವನ್ನು ಕೈಗೊಂಡಿತು. ಸಮಾಜವಾದಿ ಅಭಿವೃದ್ಧಿ ಪಥವನ್ನು ಅನುಸರಿಸಿದ, ಜರ್ಮನ್ ಜನವಾದಿ ಗಣರಾಜ್ಯವು ಇನ್ನೂ ಉನ್ನತವಾದ ಫಲಿತಾಂಶಗಳನ್ನು ಪಡೆಯಿತು. ಅದು ಅಸ್ತಿತ್ವಕ್ಕೆ ಬಂದ ಮೊದಲ ವರ್ಷದಲ್ಲಿ ರಾಷ್ಟ್ರೀಯ ವರಮಾನವು 24,000 ಮಿಲಿಯ ಮಾರ್ಕ್‌ಗಳಾಗಿದ್ದಿತು. ಆದರೆ 1983ರಲ್ಲಿ ಅದು 210,000 ಮಿಲಿಯಕ್ಕೇರಿತು. ಈಗ ಜರ್ಮನ್ ಜನವಾದಿ ಗಣರಾಜ್ಯವು 1949ರಲ್ಲಿ ತಯಾರಿಸುತ್ತಿದ್ದ ಕೈಗಾರಿಕಾ ವಸ್ತುಗಳಿಗಿಂತ 13 ಪಟ್ಟು ಹೆಚ್ಚು ಸರಕನ್ನು ತಯಾ ರಿಸುತ್ತಿದೆ. ಜನತಾ ಸರಕಾರದಡಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಭಾರಿ ಇಂಜಿನಿಯ ರಿಂಗ್ ಮತ್ತು ಹಡಗು ನಿರ್ಮಾಣ ಮೊದಲಾದಂಥ ಹೊಸ ಕೈಗಾರಿಕೋದ್ಯಮಗಳು ಬಂದಿವೆ. ಜರ್ಮನ್ ಜನವಾದಿ ಗಣರಾಜ್ಯವು ಪ್ರಪಂಚದಲ್ಲಿ ಆರ್ಥಿಕವಾಗಿ ಅತ್ಯಂತ ಅಧಿಕ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲೊಂದಾಗಿದೆ.

ಫಾಸಿಸ್ಟ್ ಪರವಾದ ಆಡಳಿತಗಳನ್ನು ಕಿತ್ತೊಗೆದಿದ್ದ ರುಮೇನಿಯಾ ಮತ್ತು ಹಂಗೇರಿಗಳಲ್ಲಿ ಸಮಾಜವಾದದ ನಿರ್ಮಾಣವು ಸಂಕೀರ್ಣವಾದ ಪ್ರಕ್ರಿಯೆಯಾಗಿತ್ತು, ಆದರೆ ಇಂದು ಈ ದೇಶ ಗಳು ಗುರ್ತಿಸಲಾಗದಷ್ಟು ಬದಲಾಗಿವೆ. ಯುದ್ಧಕ್ಕೆ ಮುನ್ನ ಸಾಮಾನ್ಯವಾಗಿ ಕರೆಯುತ್ತಿದ್ದಂತೆ ಅವನ್ನು ಇಂದು ಯಾರೂ "ಯುರೋಪಿನ ಹೊರ ವಲಯಗಳು" ಎಂದು ಕರೆಯುವುದಿಲ್ಲ. ಬುಡಾಪೆಸ್ಟ್ ನಗರ, ಪ್ಯಾರಿಸ್ ಅಥವಾ ಬ್ರುಸೆಲ್ಸ್‌ನಷ್ಟೇ ಆಕರ್ಷಕವಾಗಿದೆ ಎಂಬುದಾಗಿ ಪಾಶ್ಚಾತ್ಯ ಪ್ರವಾಸಿಗರೇ ಹೇಳುತ್ತಾರೆ. ಹಂಗೆರಿಯ ಸಮಾಜವಾದಿ ಕೃಷಿಕ್ಷೇತ್ರವು ಇಂದು ಪ್ರಪಂಚದಲ್ಲೇ ಅತ್ಯುತ್ಪಾದಕವಾದವುಗಳಲ್ಲೊಂದಾಗಿದೆ. ಸಮಾಜವಾದಿ ಕೈಗಾರಿಕೋದ್ಯಮ ಮತ್ತು ಸೋವಿಯೆತ್ ಒಕ್ಕೂಟ ಹಾಗೂ ಇತರ ಸಮಾಜವಾದಿ ದೇಶಗಳೊಂದಿಗೆ ನಿಕಟ ಸಹಕಾರ ರುಮೇನಿಯಾವನ್ನು ಸಂಪೂರ್ಣವಾಗಿ ಪರಿವರ್ತನೆಗೊಂಡಿರುವ ದೇಶವನ್ನಾಗಿಸಿದೆ.

ಯುಗೋಸ್ಲಾವಿಯದ ಜನತೆ ತಮ್ಮ ಸ್ವಾತಂತ್ರ್ಯಕ್ಕಾಗಿ ಮತ್ತು ಸಾಮಾಜಿಕ ಪ್ರಗತಿಯ ಹಕ್ಕಿಗಾಗಿ ಧೀರೋದಾತ್ತವಾಗಿ ಹೋರಾಡಿದರು. ಎರಡನೆಯ ಜಾಗತಿಕ ಯುದ್ಧದ ಕಾಲದಲ್ಲಿ ಸೋವಿಯೆತ್ ಸೇನೆಯೊಂದಿಗೆ ಸೋದರ ಮೈತ್ರಿ ಸಂಬಂಧ ಸ್ಥಾಪಿಸುವುದರಲ್ಲಿ ಯುಗೋಸ್ಲಾ ವಿಯಾದ ದೇಶಪ್ರೇಮಿಗಳು ಮೊದಲಿಗರಾಗಿದ್ದರು. ಸ್ವಯಂಮಾಡಳಿತ ವ್ಯವಸ್ಥೆಯ ಮೇಲೆ ಆಧಾರಿತವಾಗಿರುವ ಸಮಾಜವಾದಿ ಉತ್ಪಾದನೆ ಮತ್ತು ಆರ್ಥಿಕ ಆಡಳಿತೆಯ ಸಂಘಟನೆಯಲ್ಲಿ ಯುಗೋಸ್ಲಾವಿಯ ಅನುಸರಿಸಿದ ವಿಧಾನಗಳು ಸಮಾಜವಾದಿ ಸಮುದಾಯದ ಇತರ ದೇಶ ಗಳಿಗೆ ಹೋಲಿಸಿದಲ್ಲಿ ಅನೇಕ ವಿಧದಲ್ಲಿ ಭಿನ್ನವಾದುವಾಗಿವೆ. ಈ ಹಿಂದೆ ಯುಗೊಸ್ಲಾವಿಯಾ ಮತ್ತು ಇತರ ಸಮಾಜವಾದಿ ದೇಶಗಳ ಮಧ್ಯೆ ಸಂಬಂಧಗಳು ಅಷ್ಟು ಸುಲಲಿತವಾಗಿ ಬೆಳೆದಿರ ಲಿಲ್ಲ. ಈಗ ಯುಗೋಸ್ಲಾವಿಯಾ ಸಮಾಜವಾದಿ ಫೆಡರಲ್ ಗಣರಾಜ್ಯವು ಸೋವಿಯೆತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳೊಂದಿಗಿನ ಸಹಕಾರವನ್ನು ಅವುಗಳ ನಾಯಕರ ನಡುವೆ ಜರುಗಿದ ಶೃಂಗ ಸಭೆಗಳಲ್ಲಿ ನಿಗದಿ ಮಾಡಲಾದ ಪಥದ ಆಧಾರದ ಮೇಲೆ ವ್ಯಾಪಕ ವಾಗಿ, ಪರಸ್ಪರ ಅನುಕೂಲಕರವಾಗಿ ವಿಕಾಸಗೊಳಿಸುತ್ತಿದೆ. ವಿಶೇಷ ಒಪ್ಪಂದಕ್ಕನುಸಾರವಾಗಿ

ಯುಂಗೋಸ್ಲಾವಿಯ ಸಮಾಜವಾದಿ ರಾಷ್ಟ್ರಗಳ ಬಹುಮುಖಿ ಸಂಘಟನೆಯಾಗಿರುವ ಪರಸ್ಪರ ಆರ್ಥಿಕ ಸಹಾಯ ಮಂಡಲಿ(ಸಿಎಂಇಎ)ಯೊಂದಿಗೆ ಸಹಕರಿಸುತ್ತಿದೆ.

## ಏಶಿಯಾದಲ್ಲಿ

## ಸಮಾಜವಾದಿ ಕ್ರಾಂತಿಗಳು

ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನರ ಬೋಧನೆಗಳು ಸಾರ್ವತ್ರಿಕ ಸ್ವಭಾವದ್ದಾಗಿವೆ. ಎಂದರೆ, ಸಮಾಜವಾದವು ಇಡೀ ಮಾನವಕೋಟಿಯ ಭವಿಷ್ಯವಾಗಿದೆ ಮತ್ತು ಕಮ್ಯೂನಿಸ್ಟ್ ನಿರ್ಮಾಣದ ಅವಕಾಶವು ಯೂರೋಪು ಮತ್ತು ಅಮೆರಿಕಾದ ಅಭಿವೃದ್ಧಿ ಹೊಂದಿದ ದೇಶಗಳಿಗೆ ಮಾತ್ರವೇ ಸೀಮಿತವಾಗಿಲ್ಲ. ಆದರೆ ಅದು ಎಲ್ಲ ಖಂಡಗಳ ಜನತೆಯ ಪ್ರಗತಿ ಮತ್ತು ಸಾಮಾಜಿಕ ನ್ಯಾಯದ ಪಥವಾಗಿದೆ ಎಂಬುದನ್ನು 20ನೆಯ ಶತಮಾನದ ಘಟನೆಗಳು ರುಜುವಾತು ಮಾಡಿವೆ.

ರಶಿಯಾದಲ್ಲಿ ಅಕ್ಟೋಬರ್ ಕ್ರಾಂತಿಯ ನಂತರದಲ್ಲಿ, ಚೀಣಾದಲ್ಲಿ ಜನತಾ ಕ್ರಾಂತಿಯ ವಿಜಯವು ಏಶಿಯಾದ ಜಾಗೃತಿಯನ್ನು ಕುರಿತ ಲೆನಿನರ ವಿಚಾರವನ್ನು ದೃಢಗೊಳಿಸಿದ ಅತ್ಯಂತ ಮಹತ್ವಪೂರ್ಣ ಘಟನೆಗಳಲ್ಲೊಂದಾಗಿದೆ. ಸೋವಿಯೆತ್ ಒಕ್ಕೂಟವು ಅಪಾರವಾದ ಕಾಣಿಕೆ ಸಲ್ಲಿಸಿದ್ದ ಚೀಣಾದ ಸುದೀರ್ಘವಾದ ಕ್ರಾಂತಿಕಾರಿ ಯುದ್ಧದ ಅಂತಿಮ ನಿರ್ಣಾಯಕ ಕದನಗಳು, ಎರಡನೇ ಜಾಗತಿಕ ಯುದ್ಧದಲ್ಲಿ ಸೋವಿಯೆತ್ ಒಕ್ಕೂಟದ ವಿಜಯ ಮತ್ತು ಮಿಲಿಟರಿಶಾಹಿ ಜಪಾನಿನ ಪರಾಜಯದ ಸಂದರ್ಭದಲ್ಲೇ ಜರುಗಿದವು. ಅದೇ ಸಮಯದಲ್ಲಿ ಮಧ್ಯ ಮತ್ತು ಆಗ್ನೇಯ ಯೂರೋಪಿನಲ್ಲಿ ಜನತಾ ಪ್ರಜಾಪ್ರಭುತ್ವಗಳು ಉದಯಿಸುತ್ತಿದ್ದವು. ಸೋವಿಯೆತ್ ಸೇನೆಗಳ ಕೈಯಲ್ಲಿ ಜಪಾನಿನ ಕ್ವಾಂಟುಂಗ್ ಸೇನೆಯ ಪರಾಜಯದ ನಂತರ, ಚೀಣಾದ 150 ಮಿಲಿಯ ಜನಸಂಖ್ಯೆಯನ್ನು ಆವರಿಸಿದ್ದ ಪ್ರದೇಶಗಳಲ್ಲಿ ಜನತೆಯ ಅಧಿಕಾರವು ಸ್ಥಾಪನೆಯಾಗಿದ್ದುದು ಮತ್ತು ಜನತಾ ವಿಮೋಚನಾ ಸೇನೆಯು ಬಲಗೊಂಡಿದ್ದುದು ಅತ್ಯಂತ ಮಹತ್ವಪೂರ್ಣವಾದುದಾಗಿತ್ತು. ಚೀಣಾವನ್ನು ಆರ್ಥಿಕವಾಗಿಯೂ ಮತ್ತು ರಾಜಕೀಯವಾಗಿಯೂ ಅಧೀನದಲ್ಲಿರಿಸಿಕೊಳ್ಳಲು ಬಹುಕಾಲದಿಂದಲೂ ಬಯಸುತ್ತಿದ್ದ ಅಮೆರಿಕಾದ ಸಾಮ್ರಾಜ್ಯಶಾಹಿಯ ಬೆಂಬಲ ಪಡೆದಿದ್ದ ಚಿಯಾಂಗ್ ಕೈಶೇಕ್‌ನ ವಿರುದ್ಧವಾಗಿ ಅವರು ಕಠಿಣವಾದ ಹೋರಾಟವನ್ನು ನಡೆಸಬೇಕಾಯಿತು.

ಸೋವಿಯೆತ್ ಒಕ್ಕೂಟವಾದರೋ, 1946 ರ ಮೇ ತಿಂಗಳಲ್ಲಿಯೇ ಮಂಚೂರಿಯಾದಿಂದ ತನ್ನ ಸೇನೆಗಳನ್ನು ವಾಪಸು ಕರೆಸಿಕೊಂಡಿತ್ತು, ಮತ್ತು ಅಮೆರಿಕಾ ಚೀಣಾದ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕುವುದನ್ನು ನಿಲ್ಲಿಸಬೇಕೆಂದು ಒತ್ತಾಯಪಡಿಸುತ್ತಿತ್ತು.

1949 ರ ಏಪ್ರಿಲ್ 23 ರಂದು ಜನತಾ ವಿಮೋಚನಾ ಸೇನೆಯ ದಳಗಳು ನಾಂಜಿಂಗ್ ಅನ್ನು ವಶಪಡಿಸಿಕೊಂಡವು. ಮೇ ತಿಂಗಳಲ್ಲಿ ಶಾಂಘಾಯ್ ನಗರವನ್ನು ವಿಮೋಚನೆಗೊಳಿಸಿದುವು ಮತ್ತು ಶರತ್ಕಾಲದ ವೇಳೆಗೆ ದೇಶದ ಬಹುತೇಕ ಭಾಗಗಳಲ್ಲಿ ಕೂಮಿಂಗ್‌ಟಾಂಗ್ ಆಡಳಿತೆಯನ್ನು ತೊಡೆದು ಹಾಕಿದ್ದುವು. 1949 ರ ಅಕ್ಟೋಬರ್ 1 ರಂದು ಚೀಣಾ ಜನತಾ ಗಣ

ರಾಜ್ಯವು ಸ್ಥಾಪನೆಗೊಂಡಿತು ಮತ್ತು ದೇಶಾದ್ಯಂತವೂ ಹೊಸ ಜನತಾ ಪ್ರಜಾಪ್ರಭುತ್ವ ಅಧಿಕಾರವು ಸ್ಥಾಪನೆಗೊಂಡಿತು. 600 ಮಿಲಿಯ ಜನಸಂಖ್ಯೆ ಮತ್ತು ಹತ್ತು ಮಿಲಿಯ ಚದುರ ಕಿಲೋಮೀಟರುಗಳ ವಿಸ್ತಾರದ ಮಹಾನ್ ದೇಶವೊಂದು ಸಮಾಜವಾದಿ ನಿರ್ಮಾಣ ಪಥದಲ್ಲಿ ಅಡಿಯಿರಿಸಿದ್ದರಿಂದ ಜಾಗತಿಕ ಸಮಾಜವಾದಿ ವ್ಯವಸ್ಥೆಯ ಪ್ರಾಬಲ್ಯವು ಅಪಾರವಾಗಿ ಹೆಚ್ಚಿತು. ಚೀನಾ ಜನತಾ ಗಣರಾಜ್ಯ ಸ್ಥಾಪನೆಗೊಂಡ ಮರುದಿನವೇ ಸೋವಿಯೆತ್ ಒಕ್ಕೂಟ ಮತ್ತು ಇತರ ಸೋದರ ರಾಷ್ಟ್ರಗಳು ಅದಕ್ಕೆ ಮನ್ನಣೆ ನೀಡಿದುವು. 1950 ರ ಫೆಬ್ರುವರಿ 14 ರಂದು ಸೋವಿಯೆತ್ ಒಕ್ಕೂಟ ಮತ್ತು ಚೀನಾಗಳು ಮೈತ್ರಿ ಸಹಯೋಗ ಮತ್ತು ಪರಸ್ಪರ ಸಹಕಾರದ ಕೌಲು ಒಂದಕ್ಕೆ ಸಹಿಹಾಕಿದುವು. ಈ ಕೌಲು ನಿಜವಾಗಿಯೂ ಐತಿಹಾಸಿಕ ಮಹತ್ವವುಳ್ಳದ್ದಾಗಿತ್ತು, ಏಕೆಂದರೆ, ಅದು ಚೀನಾದ ವಿರುದ್ಧವಾಗಿ ಸಾಮ್ರಾಜ್ಯಶಾಹಿಗಳು ಹಸ್ತಕ್ಷೇಪ ನಡೆಸುವುದನ್ನು ತಡೆಯಿತು ಮತ್ತು ದೂರ ಪ್ರಾಚ್ಯದಲ್ಲಿ ಶಾಂತಿಯನ್ನು ಕಾಪಾಡುವುದಕ್ಕೆ ನೆರವಾಯಿತು. ಸಮಗ್ರವಾದ ಸಾಮಾಜಿಕ ಪರಿವರ್ತನೆಯ ಕ್ರಮಗಳನ್ನು ಕೈಗೊಂಡಾಗ, ಚೀನಾದ ಜನತೆಯು ಸರ್ವವ್ಯಾಪಿ ಸೋವಿಯೆತ್ ನೆರವಿನ ಮೇಲೆ ದೃಢವಾಗಿ ಅವಲಂಬಿತವಾಗಿದ್ದಿತು. ಮೊದಲ ಐದು ವರ್ಷಗಳಲ್ಲಿ ಚೀನಾ ಕೈಗಾರಿಕಾಭಿವೃದ್ಧಿಯಲ್ಲಿ ಅಗಾಧವಾದ ಮುನ್ನಡೆಯನ್ನು ಸಾಧಿಸಿತು. ಇಂದಿಗೂ ಕೂಡ ಬಹುಮಟ್ಟಿಗೆ ಅದು ದೇಶದ ಆರ್ಥಿಕ ಸಾಮರ್ಥ್ಯಕ್ಕೆ ಆಧಾರವಾಗಿದೆ. ಸೋವಿಯೆತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳ ಜನರು ಚೀನಾದೊಂದಿಗೆ ಫಲಪ್ರದ ಸಹಕಾರದ ಕಾಲವನ್ನು ಇನ್ನೂ ಸ್ಮರಿಸಿಕೊಳ್ಳುತ್ತಾರೆ. ಅಂಥ ಸಹಕಾರವು ಸಮಾಜವಾದ ಮತ್ತು ಪ್ರಪಂಚದಾದ್ಯಂತವೂ ಸಾಮಾಜಿಕ ಪ್ರಗತಿಯ ಹಿತಾಸಕ್ತಿಗಳಿಗನುಗುಣವಾಗಿರುತ್ತದೆ ಎಂದು ಅವರು ಭಾವಿಸಿದ್ದಾರೆ.

1945 ರಲ್ಲಿ ವಿಯೆತ್ನಾಮಿನ ಕ್ರಾಂತಿಯ ವಿಜಯ ಮತ್ತು 1948 ರಲ್ಲಿ ಕೊರಿಯಾ ಜನತಾ ಪ್ರಜಾಪ್ರಭುತ್ವ ಗಣರಾಜ್ಯದ ಸ್ಥಾಪನೆಯ ಪರಿಣಾಮವಾಗಿ ಸಮಾಜವಾದಿ ದೇಶಗಳ ಸಂಖ್ಯೆಯ ವರ್ಧನೆಯು ತುಂಬಾ ಮಹತ್ವ ಪೂರ್ಣವಾದುದಾಗಿತ್ತು. ಈ ದೇಶಗಳ ಜನತೆಯು ಜಪಾನಿನ ಮಿಲಿಟರಿಶಾಹಿಗಳು ನಾಶಮಾಡಿ ಬಿಟ್ಟು ಹೋಗಿದ್ದ ಅವಶೇಷಗಳ ಮೇಲೆ ಹಾಗೂ ಸಾಮ್ರಾಜ್ಯಶಾಹಿಯ ಹೊಸ ದುರಾಕ್ರಮಣದ ಪರಿಸ್ಥಿತಿಗಳಲ್ಲಿ ಹೊಸ ಜೀವನದ ಬುನಾದಿಗಳನ್ನು ನಿರ್ಮಿಸಬೇಕಾಗಿತ್ತು. ಅಮೆರಿಕಾದ ಹಸ್ತಕ್ಷೇಪದಿಂದಾಗಿ ಕೊರಿಯಾ ದ್ವೀಪ ಕಲ್ಪವು ಇನ್ನೂ ಕೂಡ 17 ನೇ ಅಕ್ಷಾಂಶ ರೇಖೆಯಲ್ಲಿ ವಿಭಾಗಗೊಂಡು, ಉತ್ತರ ಕೊರಿಯಾ—ಕೊರಿಯಾ ಜನತಾ ಪ್ರಜಾಪ್ರಭುತ್ವ ಗಣರಾಜ್ಯ—ಮತ್ತು ದಕ್ಷಿಣ ಕೊರಿಯಾಗಳಾಗಿ ಉಳಿದುಕೊಂಡಿದೆ. ದಕ್ಷಿಣ ಕೊರಿಯಾದಲ್ಲಿ ಅಮೆರಿಕಾದ ಸೇನೆಗಳನ್ನು ನೆಲೆಗೊಳಿಸಲಾಗಿದೆ ಮತ್ತು ಅಲ್ಲಿ ಕೈಗೊಂಬೆ ಸರ್ವಾಧಿಕಾರಿ ಆಡಳಿತವೊಂದು ಅಧಿಕಾರದಲ್ಲಿದೆ.

ವಿಯೆತ್ನಾಮ್‌ನ ಜನತೆ ಹೆಚ್ಚು ಕಡಿಮೆ 30 ವರ್ಷಗಳ ಕಾಲ ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದಗಳಿಗಾಗಿ ಹೋರಾಟ ನಡೆಸಿದರು. ಮೊದಲು ಅವರು ಫ್ರೆಂಚ್ ವಸಾಹತುಶಾಹಿಗಳ ವಿರುದ್ಧವಾಗಿ ಮತ್ತು ಅನಂತರ ಅಮೆರಿಕ ಮತ್ತು ಅದರ ಕೈಗೊಂಬೆಗಳ ವಿರುದ್ಧವಾಗಿ ಹೋರಾಟ ನಡೆಸಿದರು. ಯುದ್ಧದಲ್ಲಿ ವಿಯೆತ್ನಾಮಿ ಜನತೆಯ ವಿಜಯವು ದೇಶವನ್ನು ಮತ್ತೆ ಒಂದುಗೂಡಿಸಿತು, ವಿಯೆತ್ನಾಮ್ ಸಮಾಜವಾದಿ ಗಣರಾಜ್ಯವು ಅಸ್ತಿತ್ವಕ್ಕೆ

ಬಂದಿತು. ಇಂಡೋ-ಚೀಣದಲ್ಲಿ ಸಾಮ್ರಾಜ್ಯಶಾಹಿಯ ಪರಾಜಯವು ಸಮಾಜವಾದಿ ಸಮುದಾಯಕ್ಕೆ ಹೊಸ ಸದಸ್ಯ—ಲಾವೋ ಜನತಾ ಪ್ರಜಾಪ್ರಭುತ್ವ ಗಣರಾಜ್ಯ—ಒಬ್ಬನ್ನೊಂದನ್ನು ತಂದಿತು.

## ಪಶ್ಚಿಮಾರ್ಧ ಗೋಳದಲ್ಲಿ ಸ್ವತಂತ್ರ ದ್ವೀಪ

ಕ್ಯೂಬಾದಲ್ಲಿ ಈಗ ಕಾಲು ಶತಮಾನದಿಂದ ಸಮಾಜವಾದಿ ನಿರ್ಮಾಣ ಕಾರ್ಯ ಸಾಗುತ್ತಿದೆ. ಕ್ಯೂಬಾದ ಕ್ರಾಂತಿಯು ಅನೇಕ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದಿತು. ಫೀಡೆಲ್ ಕಾಸ್ಟ್ರೋ ಮೋನ್‌ಕಾಡಾ ಬ್ಯಾರಕ್‌ಗಳ ಮೇಲೆ ದಾಳಿಯನ್ನಾರಂಭಿಸಿದರು. ಅದು ಅಮೇರಿಕಾದ ಕೈಗೊಂಬೆಯಾಗಿದ್ದ ಪ್ರತಿಗಾಮಿ ಸರ್ವಾಧಿಕಾರಿ ಫುಲ್‌ಗೆನ್ಸಿಯೋ ಬಾಟಿಸ್ಟಾನ ಪ್ರಬಲ ದುರ್ಗವಾಗಿತ್ತು. ಆಂದೋಳನದ ಈ ಸಾಹಸ ಪ್ರಯತ್ನವು ವಿಫಲಗೊಂಡಿತಾದರೂ, 1958 ರ ಬೇಸಿಗೆಯ ವೇಳೆಗೆ ಕ್ರಾಂತಿಕಾರಿ ಪಡೆಗಳು ಹವಾನಾದತ್ತ ಮುನ್ನಡೆದು ಜನವರಿ 1 ರಂದು ನಗರವನ್ನು ವಿಮೋಚನೆಗೊಳಿಸಿದುವು. ದೇಶವನ್ನು ಸಾಮ್ರಾಜ್ಯಶಾಹಿಗಳ ಹಿಡಿತದಿಂದ ವಿಮೋಚನೆಗೊಳಿಸಿ, ಭೂಸುಧಾರಣೆಗಳನ್ನು (ಅವು ಇಡೀ ಲ್ಯಾಟಿನ್ ಅಮೇರಿಕಾದಲ್ಲೇ ಅತ್ಯಂತ ಕ್ರಾಂತಿಕಾರಿಯಾದ ಮತ್ತು ದೂರಗಾಮಿಯಾದ ಸುಧಾರಣೆಗಳಾಗಿದ್ದುವು) ಒಳಗೊಂಡಂತೆ ಸಾರ್ವತ್ರಿಕ ಪ್ರಜಾಪ್ರಭುತ್ವವಾದಿ ಸುಧಾರಣೆಗಳನ್ನು ಕಾರ್ಯಗತ ಮಾಡಿ, ಮಿಲಿಟರಿ—ಪೋಲೀಸು ರಾಜ್ಯ ಯಂತ್ರವನ್ನು ಕಿತ್ತೊಗೆದು, ಅನಂತರ ಕ್ಯೂಬಾದ ಜನರು ದೇಶದಲ್ಲಿ ಸಮಾಜವಾದಿ ನಿರ್ಮಾಣದ ಕಾರ್ಯವನ್ನಾರಂಭಿಸಿದರು. ತನ್ನ ಅಸ್ತಿತ್ವದ 25 ವರ್ಷಗಳಿಗೂ ಹೆಚ್ಚು ಕಾಲದಿಂದ ಕ್ಯೂಬಾ ಗಣರಾಜ್ಯವು ಅಮೇರಿಕಾದ ಸಾಮ್ರಾಜ್ಯಶಾಹಿಯ ದ್ವೇಷ, ಹಗೆತನ, ವಂಚನೆ, ಬೆದರಿಕೆ ಮತ್ತು ದುರಾಕ್ರಮಣಗಳನ್ನು ಎದುರಿಸಬೇಕಾಗಿ ಬಂದಿದೆ. ಪ್ರಪಂಚದ ಅತ್ಯಂತ ಬಲಶಾಲಿಯಾದ ಸಾಮ್ರಾಜ್ಯಶಾಹಿ ಮತ್ತು ಅದರ ನಡುವೆ ಅಂತರ ಕೇವಲ 90 ಮೈಲಿಗಳಾಗಿವೆ. ಆಕ್ರಮಿತ ಪ್ರದೇಶದಲ್ಲಿರುವ ಗ್ವಾಂಟನಾಮೋ ನೌಕಾ ನೆಲೆಯನ್ನು ಗಣನೆಗೆ ತೆಗೆದುಕೊಂಡರೆ ಅಂತರ ಇನ್ನೂ ಕಡಿಮೆಯಾಗುತ್ತದೆ. ಅಮೇರಿಕಾ ಖಂಡದ ರಾಷ್ಟ್ರಗಳ ಸಂಘಟನೆಯನ್ನು ಕ್ಯೂಬಾದ ಮೇಲೆ ಎತ್ತಿ ಕಟ್ಟಲು ವಾಷಿಂಗ್ಟನ್ ಅನೇಕ ಬಾರಿ ಪ್ರಯತ್ನಗಳನ್ನು ನಡೆಸಿದೆ. ಈ ಸ್ವತಂತ್ರ ದ್ವೀಪದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿದೆ, ಕೈಗೂಲಿಗಳನ್ನು ಮತ್ತು ಪ್ರತಿಕ್ರಾಂತಿಕಾರಿ ವಲಸೆಗಾರರನ್ನು ಅದರ ವಿರುದ್ಧ ದುರಾಕ್ರಮಣಕಾರೀ ಚರ್ಯೆಗಳನ್ನು ನಡೆಸಲು ಉಪಯೋಗಿಸಿಕೊಂಡಿದೆ ಮತ್ತು ಕ್ಯೂಬಾದ ಕ್ರಾಂತಿಯ ನಾಯಕರ ಹತ್ಯೆ ನಡೆಸಲು ಅನೇಕ ಪ್ರಯತ್ನಗಳನ್ನು ಮಾಡಿದೆ.

ಕ್ಯೂಬಾದ ಜನತೆಯ ದೃಢವಾದ ಮತ್ತು ನಿರ್ಧಾರಕಾರಿಯಾದ ನಿಲುವು ಮತ್ತು ಸಮಾಜವಾದಿ ದೇಶಗಳು, ಮುಖ್ಯವಾಗಿ ಸೋವಿಯೆತ್ ಒಕ್ಕೂಟವು ಕ್ಯೂಬಾಗೆ ನೀಡುತ್ತಿರುವ ಸಹಾಯದಿಂದಾಗಿ, ಈ ಪ್ರಯತ್ನಗಳು ಮತ್ತು ಪಶ್ಚಿಮ ಗೋಳಾರ್ಧದಲ್ಲಿ ಪ್ರಥಮ ಸಮಾಜವಾದಿ ದೇಶವನ್ನು ತೊಡೆದು ಹಾಕುವ ಸ್ಕೀಮುಗಳು ವಿಫಲಗೊಂಡಿವೆ. 1961 ರ ಏಪ್ರಿಲ್‌ನಲ್ಲಿ ವಾಯು ಬಲದ ರಕ್ಷಣೆಯಿಂದ ಅಮೇರಿಕಾದ ಯುದ್ಧ ನೌಕೆಗಳು ಕ್ಯೂಬಾದ ಸರಹದ್ದಿನೊಳಗೆ

ಕೂಲಿ ಸಿಪಾಯಿಗಳನ್ನು ನುಗ್ಗಿಸಿದಾಗ, ಕ್ಯೂಬಾದ ಕ್ರಾಂತಿಕಾರಿ ಸೇನೆ ಮತ್ತು ರಾಷ್ಟ್ರೀಯ ಸೇನೆಗಳು 72 ಗಂಟೆಗಳಿಗೂ ಕಡಿಮೆ ಅವಧಿಯಲ್ಲಿ ಅವರನ್ನು ಸೋಲಿಸಿದುವು. 1962 ಶರತ್ಕಾಲದಲ್ಲಿ ಅಮೆರಿಕಾದ ಸೈನಿಕ ವಾದಿಗಳು "ಕ್ಯೂಬಾದ ಬಿಕ್ಕಟ್ಟು" ಎಂಬುದನ್ನು ಪ್ರಚೋದನೆ ಮಾಡಿದರು, ಕ್ಯೂಬಾದ ಸುತ್ತ ದಿಗ್ಬಂಧನವನ್ನು ನಿರ್ಮಿಸಿ, ಅದರ ಮೇಲೆ ದಾಳಿ ನಡೆಸಲು ಸನ್ನದ್ಧರಾಗಿದ್ದರು. ಕ್ಯೂಬಾಗೆ ಬೆಂಬಲವಾಗಿ ಸೋವಿಯೆತ್ ಒಕ್ಕೂಟ ಮತ್ತು ಅದರ ಮಿತ್ರ ರಾಷ್ಟ್ರಗಳು ದೃಢವಾದ ಕ್ರಮಗಳನ್ನು ಕೈಗೊಂಡಿದ್ದರಿಂದಾಗಿ, ಕ್ಯೂಬಾದ ಮೇಲೆ ಆಕ್ರಮಣ ನಡೆಸುವ ಯೋಜನೆಗಳನ್ನು ಕೈಬಿಡಲಾಗುವುದೆಂದು ಅಮೆರಿಕಾದ ಅಧ್ಯಕ್ಷರು ಭರವಸೆ ನೀಡಿದರು. ಆ ನಂತರದ ಕಾಲದಲ್ಲಿ ಸಮಾಜವಾದಿ ಸಮುದಾಯದ ದೇಶಗಳ ಸಂಯುಕ್ತ ಪ್ರಯತ್ನಗಳು ಕ್ಯೂಬಾದ ಕ್ರಾಂತಿಕಾರಿಗಳಲ್ಲಿ ಅಚಲವಾದ ವಿಶ್ವಾಸವನ್ನು ಮೂಡಿಸಿವೆ ಮತ್ತು ಸಮಾಜವಾದಿ ರಾಜ್ಯದ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಅತಿಕ್ರಮಿಸ ಬಯಸುವವರಿಗೆ ಗಂಭೀರವಾದ ಎಚ್ಚರಿಕೆಯಾಗಿವೆ.

ಮಾರ್ಕ್ಸ್‌ವಾದಿ ವಿಚಾರಗಳನ್ನು ಒಪ್ಪದಿರುವವರನ್ನು ಒಳಗೊಂಡು ಪ್ರಪಂಚದಾದ್ಯಂತ ಎಲ್ಲ ಜನರೂ ಇಂದು ಸಾರ್ವಜನಿಕ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಕ್ಯೂಬಾದ ಅದ್ಭುತ ಸಾಧನೆಗಳನ್ನು ಮೆಚ್ಚಿಕೊಂಡಿದ್ದಾರೆ. ಅವು ಯಾವುದೇ ತೃತೀಯ ಜಗತ್ತಿನ ರಾಷ್ಟ್ರ ಮತ್ತು ಅನೇಕ ಅಭಿವೃದ್ಧಿ ಹೊಂದಿರುವ ಕೈಗಾರಿಕಾ ರಾಷ್ಟ್ರಗಳ ಸಾಧನೆಗಳಿಗಿಂತಲೂ ಮಿಗಿಲಾದುದಾಗಿವೆ. ಆರ್ಥಿಕ ನಿರ್ಬಂಧಗಳು ಮತ್ತು ದಿಗ್ಬಂಧನಗಳಿದ್ದಾಗ್ಯೂ ಕೂಡ, ಕ್ರಾಂತಿಯ ವಿಜಯದ ನಂತರ ಕ್ಯೂಬಾದ ಆರ್ಥಿಕ ಬೆಳವಣಿಗೆಯ ವಾರ್ಷಿಕ ಪ್ರಮಾಣವು ಸರಾಸರಿ ಶೇ. 4,7 ರಷ್ಟಾಗಿದೆ. ಇದು ಈ ಕಾಲಾವಧಿಯಲ್ಲಿ ಇಡೀ ಲ್ಯಾಟಿನ್ ಅಮೆರಿಕಾದಲ್ಲೇ ಅತಿ ಹೆಚ್ಚಿನದಾಗಿದೆ. ಜನರಿಗೆ ಆಹಾರ ವಸ್ತುಗಳನ್ನು ಒದಗಿಸುವುದರಲ್ಲಿ ಲ್ಯಾಟಿನ್ ಅಮೆರಿಕಾದಲ್ಲಿ ಎರಡನೆಯ ಸ್ಥಾನವನ್ನು ಪಡೆದುಕೊಂಡಿರುವ ಅರ್ಜೆಂಟೈನಾದ ಮಟ್ಟವನ್ನು ಕ್ಯೂಬಾ ತಲಪಿದೆ. ಕ್ಯೂಬಾದಲ್ಲಿ ಪ್ರತಿನಿತ್ಯ ತಲಾ ಒಂದರಂತೆ ಆಹಾರದ ಬಳಕೆಯು ಈಗ ಹೆಚ್ಚು ಕಡಿಮೆ 3,000 ಕ್ಯಾಲೊರಿಗಳಾಗಿವೆ.

ಈ ಖಂಡದ ಇತರ ಅನೇಕ ದೇಶಗಳಲ್ಲಿ ವಿಶಿಷ್ಟ ಲಕ್ಷಣಗಳಾಗಿರುವ ನಿರ್ವಾಸಿತರು, ಬಡವರು, ವೇಶ್ಯೆಯರು, ಮಾದಕ ದ್ರವ್ಯ ಚಟಿಗಳು, ಜೂಜುಕೋರರು ಮತ್ತು ಹಸಿದವರು ಕ್ಯೂಬಾದಲ್ಲಿ ಯಾರೂ ಇಲ್ಲ.

ಇಂದು ಸಮಾಜವಾದಿ ಸಮುದಾಯದ ನೆರವು ಮತ್ತು ಬೆಂಬಲದಿಂದ ಪ್ರಬಲಗೊಂಡಿರುವ ಕ್ಯೂಬಾ, ಸಾಮ್ರಾಜ್ಯಶಾಹಿ ದುರಾಕ್ರಮಣಕಾರರ ಸತತ ಒತ್ತಡವಿದ್ದರೂ ಲೆಕ್ಕಿಸದೆ ಹೊಸ, ಶಾಂತಿಯುತ ಜೀವನವನ್ನು ನಿರ್ಮಿಸಿಕೊಳ್ಳತೊಡಗಿರುವ ನಿಕರಾಗುವ ಮತ್ತು ಅಂಗೋಲಾಗಳಿಗೆ ನೆರವೀಯಲು ತನ್ನ ಅಧ್ಯಾಪಕರು, ಡಾಕ್ಟರುಗಳು, ತಾಂತ್ರಿಕಜ್ಞರು ಮತ್ತು ನಿರ್ಮಾಣಗಾರರನ್ನು ಕಳಿಸಿ ಕೊಡುತ್ತಿದೆ.

## ಸಮರಗಳಲ್ಲಿ ನಿರ್ಮಿತಗೊಂಡ ಸಮಾಜವಾದ

ಪ್ರಪಂಚದಲ್ಲಿ ಆಧುನಿಕ ಮೂಲ ಸೈದ್ಧಾಂತಿಕ ಮತ್ತು ರಾಜಕೀಯ ಶಕ್ತಿಗಳ ಮಧ್ಯೆ ತೀವ್ರ ವಿರೋಧದ, ಹೊಸ ಸಾಮಾಜಿಕ ವ್ಯವಸ್ಥೆಯ ವಿರೋಧಿಗಳ ಮತಿಯಿಂದ ಸತತವಾದ ಒತ್ತಾಯಂಗಳಿದ್ದ ವಾತಾವರಣದಲ್ಲಿ ಜಾಗತಿಕ ಸಮಾಜವಾದಿ ವ್ಯವಸ್ಥೆಯು ರೂಪುಗೊಳ್ಳುತ್ತಿತ್ತು. 1946 ರ ಮಾರ್ಚ್ 5 ರಂದು, ಫುಲ್ಟನ್‌ನಲ್ಲಿ ಮಾಡಿದ ಭಾಷಣದಲ್ಲಿ ವಿನ್ಸಟನ್ ಚರ್ಚಿಲ್ಲರು, ಪ್ರಪಂಚದಲ್ಲಿ ಅಂತರರಾಷ್ಟ್ರೀಯ ಬಂಡವಾಳದ ಸ್ಥಾನಗಳು ದುರ್ಬಲಗೊಳ್ಳುವುದನ್ನು ತಡೆಯುವ ಮತ್ತು ಹೊಸ ಜೀವನ ಪಥದಲ್ಲಿ ಅಡಿಯಿರಿಸಿರುವ ಜನತೆಯ ಮೇಲೆ ಶೀತ ಯುದ್ಧವನ್ನು ಹೇರಿಸುವ ಪಶ್ಚಿಮ ರಾಷ್ಟ್ರಗಳ ಆಳುವ ವಲಯಗಳ ಬಯಕೆಯನ್ನು ವ್ಯಕ್ತಗೊಳಿಸಿದರು.

ಸಮಾಜವಾದಿ ನಿರ್ಮಾಣದ ಪಥದಲ್ಲಿ ಅಡಿಯಿರಿಸಿರುವ ದೇಶಗಳು ಮತ್ತು ಬಂಡವಾಳಶಾಹಿ ದೇಶಗಳ ನಡುವಣ ಸಂಬಂಧಗಳ ಐತಿಹಾಸಿಕ ಅನುಭವದಿಂದ ಬಂಡವಾಳಶಾಹಿ ದೇಶಗಳ ಆಳುವ ವಲಯಗಳು ಯಾವ ಪಾಠವನ್ನು ಕಲಿಯಲಿಲ್ಲವೆಂಬುದನ್ನು ತೋರಿಸುತ್ತವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಅವು, ರಾಷ್ಟ್ರೀಯ ಸಮಾನತೆ, ಸಾಮಾಜಿಕ ವಿಮೋಚನೆ ಮತ್ತು ದೇಶದ ಸಮಾಜವಾದಿ ಗಳಿಕೆಗಳನ್ನು ಕಾಪಾಡಿಕೊಳ್ಳಲು ನಿಸ್ವಾರ್ಥವಾಗಿ ಸಿದ್ಧವಾಗಿರುವ ಕ್ರಾಂತಿಕಾರಿ ಜನ ಸಮೂಹಗಳ ಅಚಲವಾದ ನಿರ್ಧಾರವನ್ನು ಬಲಪ್ರಯೋಗದಿಂದ ತೊಡೆದು ಹಾಕುವುದು ಅಸಾಧ್ಯ ಎಂಬುದನ್ನು ಅರಿತುಕೊಳ್ಳಲಿಲ್ಲ. ಯುದ್ಧದಿಂದ ವಿನಾಶಗೊಂಡಿದ್ದ ರಶಿಯಾದಲ್ಲಿ ಆಗ ತಾನೆ ಅಸ್ತಿತ್ವಕ್ಕೆ ಬಂದಿದ್ದ ಎಳೆಯ ಸೋವಿಯೆತ್ ಗಣರಾಜ್ಯದ ಮೊದಲ ವರ್ಷಗಳಲ್ಲಿಯೇ, ಅದರ ವಿರುದ್ಧವಾಗಿ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ಜಪಾನುಗಳನ್ನು ಒಳಗೊಂಡು 14 ಸಾಮ್ರಾಜ್ಯಶಾಹಿ ದೇಶಗಳು ನಡೆಸಿದ ಸಶಸ್ತ್ರ ಹಸ್ತಕ್ಷೇಪವು ವಿಫಲಗೊಂಡುದರಿಂದಲೂ ಅವರು ಈ ಪಾಠ ಕಲಿಯಲಿಲ್ಲ. ಜಾಗತಿಕ ಸಾಮ್ರಾಜ್ಯಶಾಹಿಯ ಅತ್ಯಂತ ದುರಾಕ್ರಮಣಕಾರಿ ಶಕ್ತಿಗಳಾಗಿದ್ದ ಜರ್ಮನ್ ಫಾಸಿಸಮ್ ಮತ್ತು ಜಪಾನೀ ಮಿಲಿಟರಿಸಮ್‌ಗಳ ವಿರುದ್ಧವಾಗಿ ಎರಡನೆಯ ಮಹಾ ಯುದ್ಧದಲ್ಲಿ ಸೋವಿಯೆತ್ ಜನತೆಯು ಗಳಿಸಿದ ವಿಜಯದಿಂದಲೂ ಅವರು ಪಾಠ ಕಲಿಯಲಿಲ್ಲ.

ಇವುಗಳಾವುದರಿಂದಲೂ ಏನೂ ಕಲಿಯದೆ, ಎರಡನೇ ಜಾಗತಿಕ ಯುದ್ಧಾನಂತರದಲ್ಲಿ, ಪಶ್ಚಿಮ ರಾಷ್ಟ್ರಗಳ ಆಳುವ ವಲಯಗಳವರು, ದುಡಿಯುವ ಜನರು ಅನೇಕ ದೇಶಗಳಲ್ಲಿ ಸ್ಥಾಪಿಸಿಕೊಂಡಿದ್ದ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಸಶಸ್ತ್ರ ಬಲದಿಂದ ಉರುಳಿಸಲು ಮತ್ತೆ ಪ್ರಯತ್ನಿಸ ತೊಡಗಿದರು.

ಕಮ್ಯೂನಿಸಮ್‌ನಿಂದ ದೇಶಗಳನ್ನು "ವಿಮೋಚನೆ"ಗೊಳಿಸಲು ಮತ್ತು "ಕಮ್ಯೂನಿಸಮ್ ಅನ್ನು ಹಿಮ್ಮೆಟ್ಟಿಸಲು" ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಲಾಗಿದೆ ಮತ್ತು ಸಾಕಷ್ಟು ಪ್ರಯತ್ನಗಳನ್ನು ಮಾಡಲಾಗಿದೆ. ಜನತೆಯ ಅಧಿಕಾರದ ವಿರುದ್ಧವಾಗಿ ಅತ್ಯಂತ ವಿಭಿನ್ನವಾದ ಪ್ರತ್ಯಕ್ಷ ಹಾಗೂ ಪರೋಕ್ಷವಾದ ಹಸ್ತಕ್ಷೇಪ ಚರ್ಯೆಗಳಿಗೆ ಮತ್ತು

ಯಾವುದೇ ಗಂಭೀರವಾದ ರಾಜಕೀಯ ಭೀತಿಯನ್ನು ಒಡ್ಡಲು ಕೈಲಾಗದಿದ್ದ ಮತ್ತು ಕೈಲಾಗದ ಪ್ರತಿಗಾಮಿ ವಲಸೆಗಾರರ ಪ್ರತಿ ಕ್ರಾಂತಿಕಾರಿ ಚಟುವಟಿಕೆಗಳನ್ನು ಪೋಷಿಸಿ ಬೆಂಬಲಿಸುವುದಕ್ಕೆ ಹಣವೊದಗಿಸಲು ಸಂಪನ್ಮೂಲಗಳನ್ನು ವಿನಿಯೋಗಿಸಲಾಗುತ್ತಿದೆ.

ಸಮಾಜವಾದಿ ದೇಶಗಳ ವಿರುದ್ಧವಾಗಿ ರಾಜಕೀಯ ಮತ್ತು ಸಂಕುಚಿತ ಸ್ವಾರ್ಥ ಉದ್ದೇಶಗಳಿಗಾಗಿ ಆರ್ಥಿಕ ನಿರ್ಬಂಧಗಳು, ನಿಷೇಧಗಳು ಮತ್ತು ದಿಗ್ಬಂಧನಗಳ ಕ್ರಮಗಳನ್ನು ಪ್ರಪಂಚದ ಪ್ರತಿಗಾಮಿ ಶಕ್ತಿಗಳು, ಅನೇಕ ದಶಕಗಳ ಕಾಲ ಕೈಗೊಂಡಿವೆ. ಈ ಬಗೆಯ ಚಟುವಟಿಕೆಗಳನ್ನು ಅದಕ್ಕಾಗಿಯೇ ಸ್ಥಾಪಿಸಲಾಗಿರುವ 'ನಾಟೋ' ಕೂಟದ ಏಜನ್ಸಿಗಳು ಹಾಗೂ 'ನಾಟೋ' ಸದಸ್ಯ ರಾಷ್ಟ್ರಗಳ ವಿಶೇಷ ಕಾರ್ಯಗಳ ಜಾಲಬಂಧವು ನೋಡಿಕೊಳ್ಳುತ್ತವೆ. ಉದಾಹರಣೆಗೆ, ಇತ್ತೀಚಿನ ವರ್ಷಗಳಲ್ಲಿ ಪೋಲೆಂಡಿನ ಆರ್ಥಿಕಕ್ಕೆ ಉಂಟು ಮಾಡಿದ ಸಹಸ್ರಾರು ಮಿಲಿಯ ಡಾಲರುಗಳ ನಷ್ಟದಿಂದ, ಅಂಥ ಚಟುವಟಿಕೆಗಳ ವ್ಯಾಪಕತೆಯನ್ನು ಅಂದಾಜು ಮಾಡಬಹುದಾಗಿದೆ. ಭಾರೀ ಆರ್ಥಿಕ ಒತ್ತಾಯವನ್ನು ತರುವುದರ ಮೂಲಕವಾಗಿ. "ಮುಕ್ತ ಜಗತ್ತಿ"ನ ನೀತಿ ನಿರೂಪಿಸುವ ಮಂಚಕರು, ಪೋಲೀಷ್ ಸರಕಾರ ಏನು ಮಾಡಬೇಕು, ಏನು ಮಾಡಬಾರದು ಎಂದು ಅಜ್ಞಾಪಿಸುವ ಹಕ್ಕನ್ನು ಪಡೆದುಕೊಳ್ಳಲು ಪ್ರಯತ್ನಿಸಿ, ವಿಫಲಗೊಂಡಿದ್ದಾರೆ.

ಸಮಾಜವಾದದ ವಿರುದ್ಧ ನಿಂದಾತ್ಮಕ, ಪ್ರಚೋದಕ ಪ್ರಚಾರವನ್ನು ನಡೆಸಲು, ಮುಖ್ಯವಾಗಿ ಅಪಪ್ರಚಾರ ನಡೆಸಲು ನೂರಾರು ಮಿಲಿಯ ಡಾಲರುಗಳನ್ನು ಖರ್ಚು ಮಾಡಲಾಗುತ್ತಿದೆ. ಅಮೆರಿಕಾದ ವಿಶೇಷ ಸಂಸ್ಥೆಗಳ ನಿಯಂತ್ರಣದಲ್ಲಿರುವ ರೇಡಿಯೋ ಲಿಬರ್ಟಿ ಮತ್ತು ಫ್ರೀ ಯೂರೋಪ್ ಎಂದು ಸಿನಿಕತನದಿಂದ ಕರೆಯಲ್ಪಡುತ್ತಿರುವ ರೇಡಿಯೋ ಕೇಂದ್ರಗಳು ಈ ಕೆಲಸವನ್ನು ಮಾಡುತ್ತಿವೆ.

ಸಮಾಜವಾದದ ವಿರುದ್ಧವಾಗಿ ನಡೆದಿರುವ ಹಗೆತನದ ಚಟುವಟಿಕೆಗಳು ಕೇವಲ "ಅತಿರೇಕಗಳು". ಅವನ್ನು ನಡೆಸುತ್ತಿರುವವರು ಪ್ರಚಾರ ಮತ್ತು ಆರ್ಥಿಕ ವಿಧ್ವಂಸದಲ್ಲಿ ಮಾತ್ರವೇ ಆಸಕ್ತಿ ಹೊಂದಿರುವ ಸಾಮ್ರಾಜ್ಯಶಾಹಿ ದೇಶಗಳ ಕೆಲವು ಇಲಾಖೆಗಳವರು ಅಷ್ಟೇ ಎಂದು ಭಾವಿಸುವುದು ದೊಡ್ಡ ತಪ್ಪಾಗುತ್ತದೆ. ಪರಿಸ್ಥಿತಿ ಹಾಗಿಲ್ಲ, ಅದಕ್ಕಿಂತ ಭಿನ್ನವಾದುದಾಗಿದೆ. ಸಮಾಜವಾದಕ್ಕೆ ಉಗ್ರವಾದ ವಿರೋದ ಮತ್ತು ಅದರೊಂದಿಗೆ ಸಂಘರ್ಷದ ನೀತಿಯು ಇಡೀ ಸಾಮ್ರಾಜ್ಯಶಾಹಿಗಳ ಅತ್ಯಂತ ದುರಾಕ್ರಮಣಕಾರಿ ವಲಯಗಳ ವಿಶಿಷ್ಟತೆಯಾಗಿದೆ. ಸೈನಿಕವಾದಿ ಮನೋಭಾವ, ಸಂಕುಚಿತವಾದ ಸ್ವಾರ್ಥ ವರ್ಗಹಿತಾಸಕ್ತಿಗಳು ಮತ್ತು ಉಗ್ರವಾದ ಕಮ್ಯೂನಿಸಮ್ ವಿರೋಧ ಇವನ್ನು ಪ್ರಧಾನವಾದಿ ರಾಜ್ಯ ನೀತಿಯ ಮಟ್ಟಕ್ಕೇರಿಸಿರುವ ಈ ವಲಯಗಳು, ಸಮಾಜವಾದಿ ದೇಶಗಳಿಗಷ್ಟೇ ಅಲ್ಲದೆ, ತಮ್ಮ ಜನತೆಗೆ, ವಿವಿಧ ಪ್ರದೇಶಗಳ ಹಾಗೂ ಇಡೀ ಜಗತ್ತಿನ ಭದ್ರತೆಗೆ ತುಂಬಾ ಅಪಾಯಕಾರಿಯಾಗಿರುವಂಥ ನೀಚ ಸಾಹಸ ಕೃತ್ಯಗಳಲ್ಲಿ ತೊಡಗುವಂತೆ ಬಂಡವಾಳಶಾಹಿ ದೇಶಗಳಿಗೆ ಪ್ರಚೋದನೆ ಮಾಡುತ್ತವೆ.

ಪಾಶ್ಚಿಮಾತ್ಯ ರಾಜಕೀಯ ವಲಯಗಳಲ್ಲಿ ಗಾಢವಾದ ರಾಜಕೀಯ ವಾಸ್ತವಿಕತೆಗೆ ಪ್ರತಿಯಾಗಿ ಸಾಮಾಜಿಕ ಪ್ರತೀಕಾರದ ಭಾವನೆಗಳು ಮತ್ತು ಬಲಸ್ಥಾನದ ನೀತಿಯು ಮೇಲುಗೈ ಪಡೆದಾಗಲೆಲ್ಲ, ಅಪಾಯಕಾರಿಯಾದ ಪರಿಸ್ಥಿತಿಗಳು ಉದ್ಭವಿಸುತ್ತವೆ. ವಿಯೆಟ್ನಾಮ್‌ನ ವಿರುದ್ಧವಾಗಿ ಅಮೆರಿಕಾದ ಸಶಸ್ತ್ರ ದುರಾಕ್ರಮಣ, ಕ್ಯೂಬಾದ ವಿರುದ್ಧವಾಗಿ ಅದರ ಪ್ರಚೋ

ದನೆಗಳು ಮತ್ತು ಎರಡನೆ ಜಾಗತಿಕ ಯುದ್ಧದ ಫಲಿತಾಂಶಗಳನ್ನು ಪುನರ್ ಪರಿಶೀಲಿಸಲು ದೂರಗಾಮಿಯಾದ ಪ್ರಯತ್ನಗಳು ಮತ್ತು ಯುದ್ಧಾನಂತರ ಯೂರೋಪಿನ ರಾಜಕೀಯ ಹಾಗೂ ಪ್ರಾದೇಶಿಕ ವಾಸ್ತವಿಕತೆಗಳನ್ನು ತಿರಸ್ಕರಿಸಲು ದೂರಗಾಮಿಯಾದ ಪ್ರಯತ್ನಗಳು, ಅವಕ್ಕೆ ನಿದರ್ಶನಗಳಾಗಿವೆ.

ಈಗ ಅನೇಕ ವರ್ಷಗಳಿಂದಲೂ ವಿಭಿನ್ನ ತೀವ್ರತೆಗಳಿಂದ ಸಮಾಜವಾದಿ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ತಲೆಹಾಕುವ, ಅವುಗಳ ಸಾಮಾಜಿಕ ವ್ಯವಸ್ಥೆಗಳನ್ನು ದುರ್ಬಲಗೊಳಿಸಲು ಮತ್ತು ಬುಡಮೇಲು ಮಾಡಲು ವಿಧ್ವಂಸ ಚರ್ಯೆಗಳನ್ನು ನಡೆಸುವ ನೀತಿಯನ್ನು ಅನುಸರಿಸಲಾಗುತ್ತಿರುವುದನ್ನು ಗಮನಿಸುವುದು ಅಗತ್ಯ. ಕೆಲವು ನಿದರ್ಶನಗಳು ಇಲ್ಲಿವೆ. 1948-1949, 1953 ಮತ್ತು 1961 ರಲ್ಲಿ ಜರ್ಮನ್ ಜನವಾದಿ ಗಣರಾಜ್ಯದ ವಿರುದ್ಧವಾಗಿ, ಸುಮಾರು ಕಾಲು ಶತಮಾನದ ಕಾಲ ವಿಯೆತ್ನಾಮಿ ಜನತೆಯ ವಿರುದ್ಧವಾಗಿ, 1950 ರಲ್ಲಿ ಕೊರಿಯಾ ಪ್ರಜಾಪ್ರಭುತ್ವ ಜನತಾ ಗಣರಾಜ್ಯದ ವಿರುದ್ಧವಾಗಿ, 1956 ರಲ್ಲಿ ಹಂಗೆರಿಯ ವಿರುದ್ಧವಾಗಿ, 1968 ರಲ್ಲಿ ಜೆಕೊಸ್ಲೋವಾಕಿಯಾದ ವಿರುದ್ಧವಾಗಿ, 1956 ರಲ್ಲಿ ಮತ್ತು 1980ರಿಂದ ಇಂದಿನವರೆಗೆ ಪೋಲೆಂಡ'ನ ವಿರುದ್ಧವಾಗಿ. ಮತ್ತು 1961 ರಲ್ಲಿ ಹಾಗೂ ನಂತರ ವರ್ಷಗಳಲ್ಲಿ ಕ್ಯೂಬಾದ ವಿರುದ್ಧವಾಗಿ, ಪ್ರಮುಖ ದುರಾಕ್ರಮಣಕಾರಿ ಚರ್ಯೆಗಳನ್ನು ಮತ್ತು ದೊಡ್ಡ ಪ್ರಮಾಣದಲ್ಲಿ ವಿಧ್ವಂಸಕ ಕಾರ್ಯಗಳನ್ನು ನಡೆಸಲಾಗಿದೆ.

ಸಹಜವಾಗಿಯೇ, ಈ ತೆರನಾದ ಚರ್ಯೆಗಳು ಸಮಾಜವಾದಿ ದೇಶಗಳಿಗೆ ಸಾಕಷ್ಟು ಹಾನಿಯನ್ನುಂಟು ಮಾಡಿವೆ. ಅವು ಶಾಂತಿಯುತವಾಗಿ ಸಮಾಜವಾದಿ ನಿರ್ಮಾಣದಲ್ಲಿ ತೊಡಗುವುದನ್ನು ಮತ್ತು ಹೊಸ ವ್ಯವಸ್ಥೆಯ ಅನುಕೂಲಗಳನ್ನು ಅನುಭೋಗಿಸುವುದನ್ನು ಹೆಚ್ಚು ದುಸ್ತರವಾಗಿಸಿವೆ. ಹಾಗಿದ್ದರೂ, ಈ ಚರ್ಯೆಗಳು ಸಮಾಜವಾದದ ಮುನ್ನಡೆಯನ್ನು ತಡೆಯುವುದರಲ್ಲಿ ವಿಫಲಗೊಂಡಿವೆ. ಅಷ್ಟೇ ಅಲ್ಲದೆ, ಕಮ್ಯೂನಿಸ್ಟ್ ವಿರೋಧಿಗಳ ಉದ್ದೇಶಗಳಿಗೆ ಪ್ರತಿಯಾಗಿ, ಈ ದುರಾಕ್ರಮಣ ಚರ್ಯೆಗಳು ಅನೇಕ ಸಂದರ್ಭಗಳಲ್ಲಿ ಸೋದರ ಸಮಾಜವಾದಿ ದೇಶಗಳ ಐಕ್ಯತೆಯನ್ನು ಬಲಗೊಳಿಸುವುದಕ್ಕೆ ಸಹಾಯಕವಾಗಿವೆ ಮತ್ತು ಕಮ್ಯೂನಿಸ್ಟ್ ನಿರ್ಮಾಣದ ನಾನಾ ಕ್ಷೇತ್ರಗಳಲ್ಲಿ ಅವುಗಳ ನಡುವೆ ನಿಕಟವಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ಸಹಕಾರವನ್ನು ಪ್ರೋತ್ಸಾಹಿಸುವುದಕ್ಕೆ ನೆರವಾಗಿವೆ. ಸಮಾಜವಾದದ ಬಲವು ಹೆಚ್ಚಿದೆ ಮತ್ತು ಅದು ಹಿಂದೆಂದಿಗಿಂತಲೂ ಹೆಚ್ಚು ಮುನ್ನಡೆಗಳನ್ನು ಸಾಧಿಸಿದೆ, ಅದು ಒಂದು ದೇಶದ ಗಡಿಯನ್ನು ದಾಟಿ, ಪ್ರಬಲವಾದ ಅಂತರರಾಷ್ಟ್ರೀಯ ವ್ಯವಸ್ಥೆಯಾಗಿ ಪರಿವರ್ತನೆಗೊಂಡಿದೆ.

ಸಮಾಜವಾದಿ ಪರಿವರ್ತನೆಗಳ ಆದಿ ಪ್ರವರ್ತಕನಾದ ಸೋವಿಯೆತ್ ಒಕ್ಕೂಟವು ವಿಕಸಿತ ಸಮಾಜವಾದಿ ಸಮಾಜವನ್ನು ಪರಿಪಕ್ವಗೊಳಿಸುವ ಕಾರ್ಯಭಾರಗಳನ್ನು ನೆರವೇರಿಸುತ್ತಿದೆ, ಜರ್ಮನ್ ಜನವಾದಿ ಗಣರಾಜ್ಯ, ಹಂಗೆರಿ, ಬಲ್ಗೇರಿಯ ಮತ್ತು ರುಮೇನಿಯಾಗಳು ವಿಕಸಿತ ಸಮಾಜವಾದದ ನಿರ್ಮಾಣದಲ್ಲಿ ಮುನ್ನಡೆಯುತ್ತಿವೆ. ಅನೇಕ ಸಮಾಜವಾದಿ ದೇಶಗಳು ಸಮಾಜವಾದದ ಬುನಾದಿಗಳನ್ನು ನಿರ್ಮಿಸುವುದರಲ್ಲಿ ತೊಡಗಿವೆ. ಸಮಾಜವಾದಿ ದೇಶಗಳು ವಿಕಾಸದ ವಿಭಿನ್ನ ಹಂತಗಳಲ್ಲಿದ್ದರೂ, ಅವು ತಮ್ಮ ದೇಶಗಳಲ್ಲಿ ದುಡಿಯುವ ಜನತೆಯ ಹಿತಾ

ಸಕ್ತಿಗಳಿಗಾಗಿ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನವನ್ನು ಸಂಘಟಿಸುವುದರಲ್ಲಿ ಒಂದೇ ಗುರಿಗಳನ್ನು ಮತ್ತು ಒಂದೇ ಸೂತ್ರಗಳನ್ನುಹೊಂದಿವೆ. ವರ್ಷಗಳುರುಳಿದಂತೆ ಅವು ಹೆಚ್ಚು ಹೆಚ್ಚು ಏಕೀಕೃತವಾಗುತ್ತಿವೆ, ಕ್ರಮೇಣ ಹೆಚ್ಚು ಸನಿಹಕ್ಕೆ ಬರುತ್ತಿವೆ.

ಸಮಾಜವಾದಿ ನಿರ್ಮಾಣದ ಸಾಮಾನ್ಯ ಸೂತ್ರಗಳನ್ನು ಹೆಚ್ಚು ಪೂರ್ಣವಾಗಿ ಮತ್ತು ಉದ್ದೇಶಪೂರ್ವಕವಾಗಿ ಕಾರ್ಯಗತಮಾಡಿದರೆ, ಜಾಗತಿಕ ಸಮಾಜವಾದಿ ಚೌಕಟ್ಟಿನೊಳಗೆ ಜನತೆ ಮತ್ತು ರಾಷ್ಟ್ರಗಳ ನಡುವಣ ಸಂಬಂಧಗಳು ಹೆಚ್ಚು ವೇಗವಾಗಿ ಅಭಿವೃದ್ಧಿಗೊಳ್ಳುತ್ತವೆ. ಅದಕ್ಕೆ ಪ್ರತಿಯಾಗಿ, ಈ ಸೂತ್ರಗಳನ್ನು ಕಡೆಗಣಿಸಿದಾಗ, ಕ್ರಮೇಣ ಅನಿವಾರ್ಯವಾಗಿ ತೊಂದರೆಗಳು ಬೆಳೆಯುತ್ತವೆ. ಬಿಕ್ಕಟ್ಟಿನ ಪರಿಸ್ಥಿತಿಗಳಿಗೆ ಎಡೆಕೊಡುತ್ತವೆ, ಸಮಾಜವಾದದ ಶತ್ರುಗಳು ಮತ್ತು ಸಾಮ್ರಾಜ್ಯಶಾಹಿಯ ಪ್ರತಿಗಾಮಿ ವಲಯಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗಾಗಿ ಪ್ರಚೋದನೆ ನಡೆಸುವುದಕ್ಕೆ ಮತ್ತು ಅವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಕೊಡುತ್ತವೆ.

ಸಮಾಜವಾದವು ಎರಡು ವ್ಯವಸ್ಥೆಗಳ ನಡುವಣ ವರ್ಗ ಸಂಘರ್ಷದ, ಸಾಮ್ರಾಜ್ಯಶಾಹಿಗಳು ತರುತ್ತಿರುವ ತೀವ್ರವಾದ ಒತ್ತಾಯದ ಪರಿಸ್ಥಿತಿಗಳಲ್ಲಿ ವಿಕಾಸಗೊಳ್ಳುತ್ತಿದೆ. ಅದು ಸಮಾಜವಾದಿ ದೇಶಗಳ ಪ್ರಗತಿಯ ಪ್ರಮಾಣವನ್ನು ನಿಸ್ಸಂದೇಹವಾಗಿ ಬಾಧಿಸುತ್ತಿರುವ ಆಂತರಿಕ ತೊಂದರೆಗಳನ್ನು ನಿವಾರಿಸಿಕೊಳ್ಳಬೇಕಾಗಿದೆ. ಆದರೆ ಇಂದು ಈ ಸತ್ವ ಪರೀಕ್ಷೆಗೊಳಗಾಗಿರುವ ಸಮಾಜವಾದವು, ಆದರ್ಶವಾದ ರೂಪದಲ್ಲಿಲ್ಲದಿರಬಹುದು. ಆದರೂ ಹಾಲಿ ಇರುವ ರೂಪವು ಅತ್ಯಂತ ಸಮಂಜಸವಾದ ಸಾಮಾಜಿಕ ಆರ್ಥಿಕ ರಚನೆಯಾಗಿದೆ, ಅದು ಭವಿಷ್ಯಕ್ಕೆ ಸಾಧನವಾಗಿದೆ ಎಂಬ ಸಂಗತಿಗೆ ಹೆಚ್ಚಿನ ಪುರಾವೆಯನ್ನು ಒದಗಿಸಿದೆ.

ಸಮಾಜವಾದಿ ದೇಶಗಳ ಬೆಳವಣಿಗೆಯಲ್ಲಿ ಸಾಮ್ರಾಜ್ಯಶಾಹಿಗಳು ತಲೆಹಾಕದೇ ಹೋಗಿದ್ದರೆ, ಶಾಂತಿಯುತ ಕಾರ್ಯದಿಂದ ವಿಮುಖಗೊಳಿಸಿ, ಬಲವಂತವಾಗಿ ಹೊರಿಸಿರುವ ಶಸ್ತ್ರಾಸ್ತ್ರ ಪೈಪೋಟಿಗಾಗಿ ಅವು ಸಾಕಷ್ಟು ಪ್ರಯತ್ನಗಳು ಮತ್ತು ಸಾಧನಗಳನ್ನು ರಕ್ಷಣಾ ಕಾರ್ಯಗಳಿಗೆ ವಿನಿಯೋಗಿಸುವಂತೆ ಒತ್ತಾಯವಿಲ್ಲದೇ ಹೋಗಿದ್ದರೆ, ಅವು ಏನನ್ನು ಸಾಧಿಸಬಹುದಾಗಿದ್ದುವು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅವು ಎಷ್ಟು ಪ್ರಗತಿ ಸಾಧಿಸುತ್ತಿದ್ದುವು ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಎಷ್ಟೇ ಹಸ್ತಕ್ಷೇಪಗಳು ಮತ್ತು ಅಡಚಣೆಗಳು ಇದ್ದಾಗ್ಯೂ ಕೂಡ, ಆರ್ಥಿಕ, ವಿಜ್ಞಾನ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ಅವು ಸಾಧಿಸಿರುವ ಅಗಾಧವಾದ ಮುನ್ನಡೆಗಳು, ಹೊಸ ವ್ಯವಸ್ಥೆಯ ಆಂತರಿಕ ಶಕ್ತಿಯು ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ತೋರಿಸುತ್ತವೆ. ಸಮಾಜವಾದಿ ದೇಶಗಳ ಮಧ್ಯೆ ಇರುವ ಸರ್ವವ್ಯಾಪಿಯಾದ ಸಹಕಾರ ಮತ್ತು ಬೆಳೆಯುತ್ತಿರುವ ಐಕ್ಯತೆಯು ಅವಕ್ಕೆ ತಮ್ಮ ಮಾರ್ಗದಲ್ಲಿ ಬರುವ ಅಡಚಣೆಗಳನ್ನು ನಿವಾರಿಸಿಕೊಳ್ಳಲು ಸಹಾಯಕವಾಗಿವೆ.

# ಹೊಸ ಬಗೆಯ ಅಂತರರಾಷ್ಟ್ರೀಯ ಸಂಬಂಧಗಳು ಎಂದರೇನು?

## ಸಂಗಾತಿಯುತ ಸಹಕಾರ
## ಮತ್ತು ಪರಸ್ಪರ ಸಹಾಯ

ಹಿಂದಿನ ಶತಮಾನಗಳ ಮಾನವ ಇತಿಹಾಸದಲ್ಲಿ ಶಾಂತಿಯು ಯುದ್ಧಗಳು ಮತ್ತು ಸಂಘರ್ಷಗಳ ಮಧ್ಯೆ ಅಲ್ಪಕಾಲ ಇರುತ್ತಿದ್ದ ಬಿಡುವಿನ ದಿನಗಳಾಗಿದ್ದುವು. ಫಿರಂಗಿಗಳ ಸದ್ದು ಅಡಗಿದ್ದಾಗಲೂ ದೇಶಗಳ ನಡುವೆ ಸಂಬಂಧಗಳು ಆಧಿಪತ್ಯ ಮತ್ತು ಅಧೀನತೆ, ಅವಲಂಬನೆ ಮತ್ತು ಆಜ್ಞಾಪನೆಯ ಸ್ವರೂಪದ್ದಾಗಿದ್ದುವು. ರಾಜ್ಯತಂತ್ರವು ಸಾಮಾನ್ಯವಾಗಿ ವಿಶ್ವಾಸಘಾತುಕ ವಂಚನೆ ಮತ್ತು ಕಿತಾಪತಿಗಳ ಮುಷ್ಟಿಕ್ಕಿಳಿದ್ದಿತ್ತು. ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳು ಸತತವಾದ ತೀವ್ರ ಪೈಪೋಟಿ, ದುರ್ಬಲ ಪಕ್ಷವನ್ನು ಸುಲಿದು ಲಾಭಗಳಿಸಲು ಪ್ರಯತ್ನ, ರಾಜ್ಯಗಳಿಂದ ರಾಜ್ಯಗಳ ಶೋಷಣೆ ಇವುಗಳಿಗೆ ಭದ್ರವಾಗಿ ಅಂಟಿಕೊಂಡಿದ್ದುವು. ಇವೆಲ್ಲವೂ ಮಾನವ ಸ್ವಭಾವದಿಂದಲೇ ಬಂದದ್ದರಿಂದ ಶಾಶ್ವತವಾದುದು ಮತ್ತು ಬದಲಾಗದುದು ಎಂಬುದಾಗಿ ತೋರುತ್ತಿದ್ದುವು.

ಆದ್ದರಿಂದಾಗಿ, ದೇಶಗಳ ಸಾಮಾಜಿಕ ವ್ಯವಸ್ಥೆಗಳು ಮತ್ತು ಅವುಗಳು ಹಾಗೂ ಜನತೆಯ ನಡುವೆ ಸಂಬಂಧಗಳಿಗಿರುವ ಯಥಾರ್ಥವಾದ ಕೊಂಡಿಯನ್ನು ಮಾರ್ಕ್ಸ್‌ವಾದದ ಸಂಸ್ಥಾಪಕರು ಹೊರಗೆಡಹಿದ್ದನ್ನು ಒಂದು ಮಹತ್ವಪೂರ್ಣವಾದ ಸಾಧನೆ ಎಂದೇ ಪರಿಗಣಿಸಬೇಕು. ಖಾಸಗಿ ಒಡೆತನದ ಆಧಿಪತ್ಯವು ಸಮಾಜವನ್ನು ಪರಸ್ಪರ ವಿರೋಧಿ, ಎದುರಾಳಿ ವರ್ಗಗಳಾಗಿ ವಿಭಜಿಸಿತಷ್ಟೇ ಅಲ್ಲದೆ, ಕ್ರಮೇಣ ಇಡೀ ರಾಷ್ಟ್ರಗಳನ್ನೇ ಪರಸ್ಪರ ವಿರುದ್ಧವಾಗಿಸಿದುವು.

ಜನತೆಯನ್ನು ಮರ್ದಿಸುವ ಮತ್ತು ಶೋಷಣೆಮಾಡುವ ಮೂಲಕವಾಗಿ ಆಧಿಪತ್ಯವನ್ನು ನಡೆಸಲು ಹೆಚ್ಚು ಹೆಚ್ಚು ಕ್ಷೇತ್ರಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದ, ಅದಕ್ಕಾಗಿ ಪೈಪೋಟಿ ನಡೆಸುತ್ತಿದ್ದ ಮತ್ತು ಕಾದಾಡುತ್ತಿದ್ದ, ಇತರ ದೇಶಗಳ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಮರ್ದಿಸುತ್ತಿದ್ದ, ಹಾಗೂ ಲಾಭದಾಯಕವೆಂದು ತೋರಿದಾಗ ತಮ್ಮ ಜನತೆಯ ಹಿತಾಸಕ್ತಿಗಳಿಗೇ ನಾಚಿಕೆ ಇಲ್ಲದೆ ದ್ರೋಹ ಬಗೆಯುತ್ತಿದ್ದ ವರ್ಗಗಳನ್ನು ಸಮಾಜವಾದಿ ಕ್ರಾಂತಿಗಳು ಅಧಿಕಾರದಿಂದ ಕಿತ್ತೊಗೆದುವು, ದುಡಿಯುವ ಜನರ ಅಧಿಕಾರವನ್ನು ಹೊಂದಿರುವ ಸಮಾಜವಾದಕ್ಕೆ ಮಾತ್ರ, ಯುದ್ಧಗಳು ಮತ್ತು ವಸಾಹತುಗಳಲ್ಲಿ ಆಸಕ್ತಿ ಇಲ್ಲ. ಆದ್ದರಿಂದ

ಂದು ಹೊಸ ಆಧಾರದ ಮೇಲೆ ಅಂತರರಾಷ್ಟ್ರೀಯ ಸಂಬಂಧಗಳ ಪುನಾರಚನೆಗೆ ಮಾರ್ಗ ರೆದಿದೆ,

ಪರಸ್ಪರ ಗೌರವ, ವಿಶ್ವಾಸ, ಮೈತ್ರಿ ಮತ್ತು ಫಲಪ್ರದವಾದ, ಸರ್ವವ್ಯಾಪಿ ಸಹಕಾರದ ಸ್ಥಿರ ಸಂಬಂಧಗಳನ್ನು ಸ್ಥಾಪಿಸಿ, ವಿಕಾಸಗೊಳಿಸುವುದಕ್ಕೆ ಸೋದರ ಸಮಾಜವಾದಿ ದೇಶ ಳಿಗೆ ಕೇವಲ ಕೆಲವೇ ದಶಕಗಳು ಹಿಡಿದಿವೆ ಅಷ್ಟೆ. ಶೋಷಕ ವರ್ಗಗಳು ಅಧಿಕಾರದಲ್ಲಿದ್ದಾಗ ತಮಾನಗಳ ಕಾಲದಿಂದ ಜನತೆಯ ನಡುವೆ ದ್ವೇಷವನ್ನು ಬಿತ್ತಿದ್ದುವು ಮತ್ತು ಉದ್ದೇಶಪೂರ್ವಕ ಾಗಿಯೇ ಜನಾಂಗಗಳ ಮಧ್ಯೆ ತಪ್ಪು ಕಲ್ಪನೆಗಳನ್ನು ಬೆಳೆಸಿದ್ದುವು ಎಂಬುದನ್ನು ನೆನಪಿನಲ್ಲಿರಿಸಿ ಳ್ಳಬೇಕು. ಸೋವಿಯೆತ್ ಸರಕಾರವು ಇನ್ನೂ ಪ್ರಾರಂಭದ ದೆಸೆಯಲ್ಲಿರುವಾಗಲೇ ದೀಮಿರ್ ಐ. ಲೆನಿನ್ ರವರು, ಶತಮಾನಗಳ ಕಾಲದಿಂದಲೂ, ಭೂಸ್ವಾಮಿಗಳು ಮತ್ತು ಂಡವಾಳಗಾರರ ಮರ್ದನದಿಂದ ಮತ್ತು ಖಾಸಗಿ ಒಡತನದ ಸಂಬಂಧಗಳಿಂದ ಉಂಟಾಗಿದ್ದ ಅಪನಂಬಿಕೆ ಮತ್ತು ದ್ವೇಷಭಾವವನ್ನು ತೊಡೆದುಹಾಕುವುದಕ್ಕೆ ಹೆಚ್ಚು ಸಮಯ ನಿಯೋಗ, ತಾಳ್ಮೆ ಮತ್ತು ಪ್ರಯತ್ನದ ಅವಶ್ಯಕತೆಯನ್ನು ಕುರಿತು ಒತ್ತಿ ಹೇಳಿದ್ದರು.

ಲೆನಿನರ ಸಿದ್ಧಾಂತದ ಮಾರ್ಗದರ್ಶನದಲ್ಲಿ, ಸಮಾಜವಾದಿ ದೇಶಗಳ ಆಡಳಿತದಲ್ಲಿರುವ ಮ್ಯುನಿಸ್ಟ್ ಪಾರ್ಟಿಗಳು ಪರಂಪರಾಗತವಾಗಿ ಶೋಷಕ ವರ್ಗಗಳ ಹಿತಾಸಕ್ತಿಗಳಿಗೆ ಸೇವೆಸಲ್ಲಿ ತ್ತಿದ್ದ ಉನ್ನತಾಧಿಕಾರಿಗಳ ಸಣ್ಣ ತಂಡ ಮತ್ತು ವಿಶೇಷವಾಗಿ ನೌಕರಶಾಹಿಗಳ ನಿಯಂತ್ರ ಕ್ಕೊಳಪಟ್ಟಿದ್ದ ಅಂತರರಾಜ್ಯ ಸಂಬಂಧಗಳನ್ನು ಜನತೆಯ ನಡುವಣ ಸಂಬಂಧಗಳಿಗಾಗಿ ಾರ್ಪಡಿಸಲು ದೃಢವಾದ ಕ್ರಮಗಳನ್ನು ತೆಗೆದುಕೊಂಡುವು. ಈ ವಿಷಯವನ್ನು ಕುರಿತು ೋಲಿಷ್ ಯುನೈಟೆಡ್ ವರ್ಕರ್ಸ್ ಪಾರ್ಟಿ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿಯೂ ತ್ತು ಪೋಲಿಷ್ ಜನತಾ ಗಣರಾಜ್ಯದ ಸಚಿವ ಮಂಡಲಿಯ ಅಧ್ಯಕ್ಷರೂ ಆಗಿರುವ ವೊಜೀಕ್ ಾರುಜೆಲ್‌ಸ್ಕಿಯವರು ಹೀಗೆ ಹೇಳಿದ್ದಾರೆ: "ಈ ಹಿಂದೆ ಅನೇಕ ಸಂದರ್ಭಗಳಲ್ಲಿ ನಮ್ಮ ಜನತೆಯ ಧ್ಯೆ ವಿಷ ಬೀಜವನ್ನು ಬಿತ್ತಲಾಗಿತ್ತು, ನಾವು ಶತಮಾನಗಳ ಕಾಲ ಸಂಘರ್ಷಗಳು, ವಿರಸಗಳು ತ್ತು ಸಂಕಷ್ಟಗಳಲ್ಲಿ ಜೀವಿಸಿದ್ದೆವು. ಆದರೆ ಈಗ ನಾವು ನಮಗೆ ಅತ್ಯಂತ ಅಮೂಲ್ಯವಾದ ಂಪತ್ತನ್ನು, ಎಂದರೆ ನಿಜವಾದ ಮೈತ್ರಿಯನ್ನು ಗಳಿಸಿಕೊಂಡಿದ್ದೇವೆ, ಏಕೆಂದರೆ, ಲೆನಿನರ ಚಾರಗಳು, ಶ್ರಮಜೀವಿ ಅಂತರರಾಷ್ಟ್ರೀಯತೆ, ಅಗ್ರ ಪಂಕ್ತಿಯಲ್ಲಿರುವ ಸೋದರತೆ, ಮತ್ತು ಾಂತಿ ಹಾಗೂ ಸಮಾಜವಾದಕ್ಕಾಗಿ ನಮ್ಮ ಶ್ರಮ ಇವು ವಿಜೇತವಾಗಿವೆ. ಈ ವಿಜಯವು ನತಾ ಪೋಲೆಂಡ್ ಮತ್ತು ಸೋವಿಯೆತ್ತುಗಳ ನಾಡಿನ ಮೈತ್ರಿಗೆ ಸಹಜವಾದ ಆಧಾರವನ್ನು ರ್ಮಿಸಿದೆ, ನಮ್ಮೆರಡೂ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಾರ್ಟಿಗಳ ಸೈದ್ಧಾಂತಿಕ ಐಕ್ಯತೆಯು ಮೈತ್ರಿಯನ್ನು ಬಲಗೊಳಿಸಿದೆ ಮತ್ತು ಅದು ಸರಿಯಾದ ದಿಶೆಯಲ್ಲಿ ವಿಕಾಸಗೊಳ್ಳುವು ಕ್ಕೆ ಭರವಸೆ ಒದಗಿಸಿದೆ."

ಸಮಾಜವಾದವು ನಿಕಟವಾದ ಅಂತರರಾಷ್ಟ್ರೀಯ ಸಂಪರ್ಕಗಳನ್ನು ಕಾರ್ಖಾನೆಗಳು, ೃಷಿ ಕ್ಷೇತ್ರಗಳು, ಸಂಶೋಧನಾ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿರುವ ಸಹಸ್ರ ಸಹಸ್ರ ಂದಿಯುಳ್ಳ ಸಮಷ್ಟಿಗಳ ದೈನಂದಿನ ಚಟುವಟಿಕೆಯಾಗಿ ಮಾಡಿದೆ. ವ್ಯಾಪಕವಾದ ಾಂಸ್ಕೃತಿಕ ವಿನಿಮಯವು ಸೋದರ ಸಮಾಜವಾದೀ ದೇಶಗಳ ಜೀವನ ವಿಧಾನದಲ್ಲಿ ಒಂದು

ಅಭೇದ್ಯವಾದ ಭಾಗವಾಗಿದೆಯಲ್ಲದೆ, ಪರಸ್ಪರರ ಯಶಸ್ಸುಗಳ ಬಗ್ಗೆ ಕಾಳಜಿ, ಸೌಹಾರ್ದತೆಯ ಅಭಿವ್ಯಕ್ತಿ, ಅಗತ್ಯವೊದಗಿದಾಗ ನೆರವೀಯಲೂ ಮತ್ತು ಬೆಂಬಲವೀಯಲೂ ಕಾತುರ, ಇವು ಹೆಚ್ಚು ಹೆಚ್ಚಾಗಿ ಸೋದರ ರಾಷ್ಟ್ರಗಳ ಜೀವಿತದ ವಿಶಿಷ್ಟವಾದ ಲಕ್ಷಣಗಳಾಗುತ್ತಿವೆ.

## ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಹಿತಾಸಕ್ತಿಗಳು

ಜನತೆಯ ನಡುವೆ ಹೊಸ ಮಾದರಿಯ ಸಂಬಂಧಗಳ ಸ್ಥಾಪನೆಯು ಯಥಾರ್ಥವಾದ ಮತ್ತು ಪುರೋಗಾಮಿಯಾದ ಪ್ರವೃತ್ತಿಯಾದಿದ್ದರೂ, ಅದು ತನ್ನಷ್ಟಕ್ಕೆ ತಾನೇ ಸಂಭವಿಸುವುದಿಲ್ಲ. ವ್ಲದೀಮಿರ್ ಐ. ವಿ. ಲೆನಿನ್‌ರವರು ವಿಶೇಷವಾಗಿ ಬೇರೂರಿರುವ ಅತ್ಯಂತ ಗಾಢವಾದ ಪೆಟಿ-ಬೂರ್ಷ್ವಾ ತಪ್ಪು ಕಲ್ಪನೆಗಳಾದ ರಾಷ್ಟ್ರೀಯ ಸ್ವಾರ್ಥತೆ ಮತ್ತು ರಾಷ್ಟ್ರೀಯ ಸಂಕುಚಿತ ಮನೋಭಾವವನ್ನು ಕುರಿತು ಕಮ್ಯೂನಿಸ್ಟರನ್ನು ಅನೇಕ ಸಲ ಎಚ್ಚರಿಸಿದ್ದರು: ಮುಂದುವರಿದ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಯನ್ನು ತೊಡೆದು ಹಾಕಿದಾಗ ಮತ್ತು ಹಿಂದುಳಿದ ದೇಶಗಳಲ್ಲಿ ಆರ್ಥಿಕ ಆಧಾರವು ಕ್ರಾಂತಿಕಾರಿಯಾಗಿ ಬದಲಾದಾಗ ಮಾತ್ರವೇ, ಈ ತಪ್ಪು ಕಲ್ಪನೆಗಳು ಹೋಗುವುದು ಎಂದು ಅವರು ಒತ್ತಿ ಹೇಳಿದ್ದರು

ಅಷ್ಟೇ ಅಲ್ಲದೆ, ಹೊರಗಿನಿಂದ ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ದೇಶದಲ್ಲಿಯೇ ಹೊಸ ವ್ಯವಸ್ಥೆಗೆ ಇನ್ನೂ ವಿರೋಧವಾದಿರುವ ವ್ಯಕ್ತಿಗಳ ಮೂಲಕವಾಗಿ ಉದ್ದೇಶ ಪೂರ್ವಕವಾಗಿ ರಾಷ್ಟ್ರೀಯತಾವಾದಿ ಪ್ರವೃತ್ತಿಗಳನ್ನು ಪ್ರೇರೇಪಿಸಲು, ಸಂಘಟಿಸಲು ಮತ್ತು ಪ್ರಚೋದಿಸಲು ಸಾಧ್ಯವೆಂಬುದನ್ನು ಜೀವನವೇ ತೋರಿಸಿದೆ.

ಉಗ್ರ ರಾಷ್ಟ್ರೀಯವಾದಿ ಮತ್ತು ಸಂಕುಚಿತ ದುರಭಿಮಾನವು ವಿಪರೀತವಾಗಿ ವ್ಯಾಪಿಸಿಕೊಂಡು ಆಳುವ ಪಕ್ಷಗಳ ಸದಸ್ಯ ಗಣದಲ್ಲೂ ಸೇರಿಕೊಂಡು, ಕ್ರಮೇಣ ಕೆಲವು ದೇಶಗಳಲ್ಲಿ ನಾಯಕತ್ವವೇ ತಪ್ಪು ದಾರಿಹಿಡಿಯುವುದಕ್ಕೆ ಎಡೆಕೊಟ್ಟಿರುವ ಪ್ರಕರಣಗಳು ಇತಿಹಾಸದಲ್ಲಿವೆ.

ಯಾವುದೇ ರಾಷ್ಟ್ರೀಯವಾದಿ ಪ್ರಭಾವಗಳು ಮತ್ತು ಅದರ ಅಭಿವ್ಯಕ್ತಿಗಳಿಂದ ಮುಕ್ತವಾಗಿದ್ದು, ಉದ್ದೇಶಗಳು ಎಷ್ಟೇ ಉತ್ತಮವಾದ್ದಾಗಿದ್ದರೂ ಕೂಡ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಿತಾಸಕ್ತಿಗಳನ್ನು ಸರಿಯಾಗಿ ಸಂಯೋಜಿಸುವುದು ಕಷ್ಟ. ಸಮಾಜವಾದಕ್ಕೆ ಪೂರ್ವದ ಕಾಲದಿಂದಲೂ ಬಂದಿರುವ ಬಗೆಹರಿಸಲು ಕಷ್ಟವಾಗಿರುವ ಕೆಲವು ವಿವಾದಾಸ್ಪದವಾದ ಪ್ರಶ್ನೆಗಳು ರಾಷ್ಟ್ರಗಳ ಮಧ್ಯೆ ಇರುವುದೊಂದೇ ಅದಕ್ಕೆ ಕಾರಣವಾಗಿರುವುದಿಲ್ಲ.

ವಿಕಾಸದ ಪ್ರತೀಕ್ಷೆಗಳನ್ನು ಸಂಯುಕ್ತವಾಗಿ ನಿರೂಪಿಸುವ, ದೀರ್ಘಾವಧಿಯ ಮತ್ತು ಪ್ರಚಲಿತ ಆವಶ್ಯಕತೆಗಳನ್ನು ಹೊಂದಿಸುವ ಹಾಗೂ ಕೆಲವೊಮ್ಮೆ ಜರೂರು ಸಂದರ್ಭಗಳಲ್ಲಿ ತುರ್ತಿನ ಮೈತ್ರಿಯುತ ನೆರವು ಅಗತ್ಯವಿರುವ ಸಂಕೀರ್ಣವಾದ, ಸಂಪೂರ್ಣವಾಗಿ ಹೊಸದಾದ ಕಾರ್ಯಭಾರಗಳನ್ನು ಸಮಾಜವಾದಿ ದೇಶಗಳು ಎದುರಿಸಬೇಕಾಗಿರುತ್ತವೆ.

ಈ ಎಲ್ಲ ಸಂದರ್ಭಗಳಲ್ಲೂ, ಮಿತ್ರ ರಾಷ್ಟ್ರಗಳ ನಡುವೆ ಸಂಬಂಧಗಳ ಸ್ವಭಾವ, ಪ್ರತಿಯೊಂದು ದೇಶವೂ ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತ ಮಾಡುವುದು

ಮತ್ತು ಅವುಗಳ ಸ್ವಾತಂತ್ರ್ಯ, ಇವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಿತಾಸಕ್ತಿಗಳನ್ನು ಸಮರ್ಪಕವಾಗಿ ಸಂಯೋಜಿಸುವುದರ ಮೇಲೆ ಅವಲಂಬಿತವಾಗಿರುತ್ತದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಿತಾಸಕ್ತಿಗಳನ್ನು ವಿರೋಧಿಸುವುದು ತಪ್ಪಾಗುತ್ತದೆ. ಏಕೆಂದರೆ ಅಂತರ ರಾಷ್ಟ್ರೀಯ ಹಿತಾಸಕ್ತಿಗಳ ಸಾಧನೆಯು ಪ್ರತಿಯೊಂದು ಸಮಾಜವಾದಿ ದೇಶದ ಸಾಮಾಜಿಕ ಜೀವನದ ಮೇಲೆ ಅನುಕೂಲವಾದ ಪರಿಣಾಮವನ್ನು ಹೊಂದಿರುತ್ತದೆ. ಸರಿಯಾಗಿ ಹೇಳಬೇಕೆಂದರೆ, ಇಂದಿನ ಪರಿಸ್ಥಿತಿಯಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಸಮಾಜವಾದಿ ದೇಶಗಳೂ ಶತ್ರುಗಳ ಕುತಂತ್ರಗಳಿಂದ ಸಮಾಜವಾದವನ್ನು ಕಾಪಾಡುವುದರಲ್ಲಿ, ಸಾಮ್ರಾಜ್ಯಶಾಹಿಗಳ ದುರಾಕ್ರಮಣಕಾರಿ ಹಂಚಿಕೆಗಳ ವಿರುದ್ಧ ಶಾಂತಿಗಾಗಿ ಹೋರಾಡುವುದರಲ್ಲಿ ಮತ್ತು ಸರ್ವವ್ಯಾಪಿ ಸಹಕಾರವನ್ನು ವಿಕಾಸಗೊಳಿಸಿ, ಗಾಢವಾದಿಸುವುದರಲ್ಲಿ ಆಸಕ್ತವಾಗಿವೆ. ಇವು, ಯಾವುದೇ ಸಮಾಜವಾದಿ ದೇಶಗಳ ಮೂಲ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರೋಧವಾಗಿಲ್ಲ.

ಸಮಾಜವಾದಿ ದೇಶಗಳ ಕುಟುಂಬದ ಪ್ರತಿ ಸದಸ್ಯರ ಹಿತಾಸಕ್ತಿಗಳು ಮತ್ತು ನ್ಯಾಯವಾದ ಹಕ್ಕುಗಳನ್ನು ಕಾಪಾಡುವ ಸಂಯುಕ್ತವಾದ ಮತ್ತು ಸತತವಾದ ನೀತಿಯು ಹೊಸ ಅಂತರರಾಷ್ಟ್ರೀಯ ಸಂಬಂಧಗಳ ಒಂದು ಮುಖ್ಯವಾದ ಲಕ್ಷಣವಾಗಿದೆ. ಸೋವಿಯೆತ್ ಒಕ್ಕೂಟ ಮತ್ತು ಮಂಗೋಲಿಯ ಜನತಾ ಗಣರಾಜ್ಯಗಳ ಸಂಬಂಧಗಳನ್ನು ಸ್ಥಾಪಿಸಲಾರಂಭಿಸಿದ 1920ರ ದಶಕದ ಕಾಲವಲ್ಲೇ ಇದು ರೂಪುಗೊಳ್ಳಲಾರಂಭವಾಯಿತು. ಯೂರೋಪಿನಲ್ಲಿ ಯುದ್ಧಾನುತರದ ಮೊದಲ ವರ್ಷಗಳಲ್ಲಿ, ಸೋವಿಯೆತ್ ಒಕ್ಕೂಟ, ಚೆಕೊಸ್ಲೊವಾಕಿಯ ಮತ್ತು ಪೋಲೆಂಡ್‌ಗಳು, ಬಲ್ಗೇರಿಯ, ರುಮೇನಿಯ ಮತ್ತು ಹಂಗೆರಿಯ ಜನತೆಗಳ ಹಿತಾಸಕ್ತಿಗಳಿಗಾಗಿ ಮತ್ತು ಸ್ವಾತಂತ್ರ್ಯ, ನಿಜವಾದ ಪ್ರಜಾಸತ್ತಾತ್ಮಕ ಅಭಿವೃದ್ಧಿಗೆ, ಅವುಗಳ ಹಕ್ಕಿಗಾಗಿ ಪರಸ್ಪರ ನೆರವಿನ ಒಪ್ಪಂದಗಳನ್ನು ಮಾಡಿಕೊಳ್ಳುವ ಕಾಲದಲ್ಲಿ ತೋರಿದ ಕಾಳಜಿಯು ತುಂಬಾ ಮುಖ್ಯತ್ವವುಳ್ಳದ್ದಾಗಿದೆ. ಸೋವಿಯೆತ್ ಒಕ್ಕೂಟ ಮತ್ತು ಅದರ ಮಿತ್ರರಾಷ್ಟ್ರಗಳ ಸತತವಾದ ಸಂಯುಕ್ತ ನೀತಿಯಿಂದಾಗಿ, ಈ ದೇಶಗಳಿಗೆ ವಿಶ್ವಸಂಸ್ಥೆಯಲ್ಲಿ ಪ್ರವೇಶ ದೊರಕಿತು. ಚೀಣಾದ ಜನತಾ ಗಣರಾಜ್ಯಕ್ಕೆ ವಿಶ್ವಸಂಸ್ಥೆಯಿಂದ ಮಾನ್ಯತೆ ದೊರಕಿಸಲು ಸಮಾಜವಾದಿ ದೇಶಗಳು ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಶ್ರಮಿಸಿದವು. ದೇಶದ ಶಾಂತಿಯುತ ಪುನರೇಕೀಕರಣಕ್ಕಾಗಿ ಕೊರಿಯಾದ ಪ್ರಜಾಪ್ರಭುತ್ವವಾದಿ ಜನತಾ ಗಣರಾಜ್ಯದ ಪ್ರಯತ್ನಗಳಿಗೆ ಸಮಾಜವಾದಿ ದೇಶಗಳು ನೀಡುತ್ತಿರುವ ಬೆಂಬಲವನ್ನು ಕೊರಿಯಾದ ಜನತೆ ಯಾವತ್ತೂ ತುಂಬಾ ಮೆಚ್ಚಿಕೊಂಡಿದ್ದಾರೆ.

ಸೋದರ ದೇಶಗಳ ನೆರವಿನ ಪರಿಣಾಮಕತೆಗೆ ಮತ್ತು ಸಮಾಜವಾದಿ ಅಂತರರಾಷ್ಟ್ರೀಯತೆಯ ಸೂತ್ರಗಳ ಕಾರ್ಯತತ್ಪರತೆಗೆ ಜರ್ಮನ್ ಜನವಾದಿ ಗಣರಾಜ್ಯದ ಅಂತರರಾಷ್ಟ್ರೀಯ ಗೌರವದ ವರ್ಧನೆಯು ಅತ್ಯಂತ ಸ್ಪಷ್ಟವಾದ ನಿದರ್ಶನವಾಗಿದೆ. ಜರ್ಮನ್ ಜನವಾದಿ ಗಣರಾಜ್ಯಕ್ಕೆ ಬಹುಕಾಲ ಮಾನ್ಯತೆ ನೀಡಲು ನಿರಾಕರಿಸಿದ ಬಂಡವಾಳಶಾಹಿ ದೇಶಗಳ ರಾಜತಾಂತ್ರಿಕ ಒಳಸಂಚು, ಇಂದು ಹಳೆಯ ಕತೆಯಾಗುತ್ತಿದೆ. ಯೂರೋಪಿನ ಭದ್ರತಾ ಸಮ್ಮೇಳನಕ್ಕೆ ನಡೆಯುತ್ತಿದ್ದ ಸಿದ್ಧತೆಗಳ ಕಾಲದಲ್ಲೂ ಮತ್ತು ಬಂಡವಾಳಶಾಹಿ ದೇಶಗಳೊಂದಿಗೆ, ಮುಖ್ಯವಾಗಿ ಜರ್ಮನ್ ಫೆಡರಲ್ ರಿಪಬ್ಲಿಕ್‌ನೊಂದಿಗೆ ಜರ್ಮನ್ ಜನವಾದಿ ಗಣರಾಜ್ಯವು

ತನ್ನ ಸಂಬಂಧಗಳ ಪ್ರಶ್ನೆಯನ್ನು ಇತ್ಯರ್ಥಗೊಳಿಸುತ್ತಿದ್ದ ಕಾಲದಲ್ಲೂ, ವಿಶ್ವಸಂಸ್ಥೆಯಲ್ಲಿ ತನ್ನ ನಾಗರಿಕರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಅದರ ಸಾರ್ವಭೌಮತ್ವ ಮತ್ತು ವಿಶಿಷ್ಟವಾದ ಹಕ್ಕನ್ನು ಸಮಾಜವಾದಿ ದೇಶಗಳು ದೃಢವಾಗಿ ಎತ್ತಿಹಿಡಿದವು. ತತ್ಪರಿಣಾಮವಾಗಿ, 1971ರಲ್ಲಿ 30 ದೇಶಗಳೊಂದಿಗೆ ಮಾತ್ರ ರಾಜ್ಯತಾಂತ್ರಿಕ ಸಂಬಂಧಗಳನ್ನು ಹೊಂದಿದ್ದ, ಜರ್ಮನ್ ಜನವಾದಿ ಗಣರಾಜ್ಯವು 1982ರಲ್ಲಿ 131 ದೇಶಗಳೊಂದಿಗೆ ಅಂಥ ಸಂಬಂಧಗಳನ್ನು ಹೊಂದಿತ್ತು. ಈಗ ಜರ್ಮನ್ ಜನವಾದಿ ಗಣರಾಜ್ಯವು ವಿಶ್ವಸಂಸ್ಥೆಯ ಸಕ್ರಿಯ ಸದಸ್ಯನಾಗಿದೆ. ಅದು ಭದ್ರತಾ ಮಂಡಲಿಯ ಸದಸ್ಯನಾಗಿ ಆಯ್ಕೆಯಾಗಿದೆ ಮತ್ತು ಈ ಬೃಹತ್ ಅಂತರರಾಷ್ಟ್ರೀಯ ಸಂಸ್ಥೆಯ ಇಪ್ಪತ್ತು ಆಯೋಗಗಳು ಮತ್ತು ಸಮಿತಿಗಳ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದೆ.

ಸಮಾಜವಾದಿ ದೇಶಗಳ ನಿಕಟವಾದ ಐಕ್ಯ ಕಾರ್ಯಾಚರಣೆ ಮತ್ತು ಸಮಾಜವಾದಿ ಅಂತರರಾಷ್ಟ್ರೀಯತೆಯ ಸೂತ್ರಗಳನ್ನು ಸತತವಾಗಿ ಕಾರ್ಯಗತ ಮಾಡಲು ಅವುಗಳ ಕ್ರಿಯಾಶೀಲ ಕಾಳಜಿ, ಇವು ಪ್ರತಿಯೊಂದು ಸೋದರ ದೇಶಕ್ಕೂ ಅದರ ರಾಷ್ಟ್ರೀಯ ಸಾರ್ವಭೌಮತ್ವವನ್ನು ಬಲಗೊಳಿಸಿಕೊಳ್ಳುವುದಕ್ಕೆ ಸಹಾಯಕವಾಗಿರುವ ತುಂಬಾ ಮುಖ್ಯವಾದ ಅಂತರರಾಷ್ಟ್ರೀಯ ಅಂಶಗಳಾಗಿವೆ ಮತ್ತು ಕ್ರಾಂತಿಕಾರಿ ಸಾಮಾಜಿಕ ಸುಧಾರಣೆಗಳ ಪಥದಲ್ಲಿ ಅಡಿಯಿರಿಸಿರುವ ಪ್ರತಿಯೊಂದು ದೇಶದ ಮುಕ್ತ ಮತ್ತು ಯಶಸ್ವೀ ವಿಕಾಸಕ್ಕೆ ಅತ್ಯಂತ ಅನುಕೂಲಕರವಾದ ಅಂತರರಾಷ್ಟ್ರೀಯ ಪರಿಸ್ಥಿತಿಗಳನ್ನು ನಿರ್ಮಿಸುವುದಕ್ಕೆ ಸಹಾಯಕವಾಗಿರುತ್ತವೆ.

ಕ್ಯೂಬಾದ ಕ್ರಾಂತಿಗೆ ಸಮಾಜವಾದಿ ದೇಶಗಳು ನೀಡುತ್ತಿರುವ ಬೆಂಬಲವು ಮಹತ್ವಪೂರ್ಣವಾದುದಾಗಿದೆ. ಇಂದೂ ಕೂಡ ಇಪ್ಪತ್ತು ವರ್ಷಗಳ ಹಿಂದಿನಂತೆಯೇ, ವಾಷಿಂಗ್ಟನ್, ಕ್ಯೂಬಾದ ಜನತೆ ಮತ್ತು ಅವರ ಕಮ್ಯೂನಿಸ್ಟ್ ಪಾರ್ಟಿಯ ಮೇಲೆ ಭೀಕರವಾದ ಅಪನಿಂದೆಯ ಪ್ರಚಾರ ದಾಳಿಗಳನ್ನು ನಡೆಸುತ್ತಿದೆ. ಅವರ ಅಂತರರಾಷ್ಟ್ರೀಯ ಪ್ರಯತ್ನಗಳನ್ನು ಮತ್ತು ಸಾಮ್ರಾಜ್ಯಶಾಹಿ ದುರಾಕ್ರಮಣಕಾರರ ವಿರುದ್ಧವಾಗಿ ರಾಷ್ಟ್ರೀಯ ಮತ್ತು ಸಾಮಾಜಿಕ ವಿಮೋಚನೆಗಾಗಿ ಹೋರಾಡುತ್ತಿರುವವರಿಗೆ ಅವರು ನೀಡುತ್ತಿರುವ ನಿಸ್ವಾರ್ಥವಾದ ನೆರವನ್ನು ಅವಹೇಳನ ಮಾಡಲು ಅದು ಎಲ್ಲ ರೀತಿಯಲ್ಲಿಯೂ ಪ್ರಯತ್ನಿಸುತ್ತಿದೆ. ಸಾರ್ವಭೌಮ ರಾಷ್ಟ್ರ ಸಮಾಜವಾದಿ ಕ್ಯೂಬಾದ ಮೇಲೆ ಶ್ವೇತಭವನ ಮತ್ತು ಪೆಂಟಾಗನ್ ಸಶಸ್ತ್ರ ಹಸ್ತಕ್ಷೇಪ ನಡೆಸುವ ಭೀತಿಯನ್ನು ಹಾಕುವಷ್ಟು ಮುಂದೆ ಹೋಗಿವೆ.

ಆದರೆ ಸಮಾಜವಾದಿ ರಾಷ್ಟ್ರಗಳ ಸೌಹಾರ್ದತೆಯು, ಕ್ಯೂಬಾದ ಸ್ವಾತಂತ್ರ್ಯಕ್ಕೆ ಬೆಂಬಲವಾಗಿದೆ. 1981ರ ನವೆಂಬರ್‌ನಲ್ಲಿ ಮಾಸ್ಕೋದಲ್ಲಿ ಜರುಗಿದ ಬಲ್ಗೇರಿಯ, ಚೆಕೊಸ್ಲೊವಾಕಿಯ ಜರ್ಮನ್ ಜನವಾದಿ ಗಣರಾಜ್ಯ, ಹಂಗೆರಿ, ಲಾವೋಸ್, ಮಂಗೋಲಿಯ, ಪೋಲೆಂಡ್, ಸೋವಿಯೆತ್ ಒಕ್ಕೂಟ ಮತ್ತು ವಿಯೆತ್ನಾಮ್‌ನ ಕಮ್ಯೂನಿಸ್ಟ್ ಪಾರ್ಟಿಗಳ ಪ್ರತಿನಿಧಿಗಳ ಸಭೆಯು ನೀಡಿದ ದೃಢವಾದ ಹೇಳಿಕೆಯು ಇಂತಿದೆ : "ಕ್ಯೂಬಾ ಗಣರಾಜ್ಯವು ಸಮಾಜವಾದಿ ದೇಶಗಳ ಸಮುದಾಯದ ಸದಸ್ಯ ರಾಷ್ಟ್ರವಾಗಿದೆ. ಅದು ಉನ್ನತ ಅಂತರರಾಷ್ಟ್ರೀಯ ಗೌರವವನ್ನು ಪಡೆದುಕೊಂಡಿದೆ. ಅದು ಅದನ್ನು ಶಾಂತಿಗಾಗಿ ಮತ್ತು ಮುಕ್ತ ಹಾಗೂ ಗೌರವಯುತವಾದ ಬಾಳ್ವೆಗಾಗಿ ಎಲ್ಲ ಜನತೆಯ ಹಕ್ಕಿನ ರಕ್ಷಣೆಗಾಗಿ, ವಿಕಾಸಶೀಲ ದೇಶಗಳ ನೈಸರ್ಗಿಕ ಸಂಪತ್ತನ್ನು ಸಾಮ್ರಾಜ್ಯಶಾಹಿಗಳು ಸೂರೆ ಮಾಡುವುದನ್ನು ಅಂತ್ಯಗೊಳಿಸುವುದಕ್ಕಾಗಿ, ಅನುಸರಿಸುತ್ತಿರುವ ತನ್ನ ದೃಢವಾದ ನೀತಿಯಿಂದ ಅದನ್ನು ಗಳಿಸಿಕೊಂಡಿದೆ. ಕ್ಯೂಬಾ ಅಲಿಪ್ತ ಚಳವಳಿಯ ಸಮೂಹ

ದಲ್ಲಿ ಉನ್ನತ ಗೌರವವನ್ನು ಪಡೆದುಕೊಂಡಿದೆ ಮತ್ತು ಅದರಲ್ಲಿ ಕ್ರಿಯಾಶೀಲವಾಗಿ ಭಾಗವಹಿಸು ತ್ತಿದೆ. ಅಮೆರಿಕದ ಸಾಮ್ರಾಜ್ಯಶಾಹಿಯು ಪ್ರಾರಂಭಿಸಿರುವ ಹೊಸ ಪ್ರಚೋದನೆಗಳ ಗಂಭೀರ ವಾದ ಸ್ವಭಾವವನ್ನು ಅರಿತಿರುವ ಎಲ್ಲ ಪುರೋಗಾಮಿ ಮತ್ತು ಶಾಂತಿಪ್ರಿಯ ಶಕ್ತಿಗಳೂ, ಕ್ಯೂಬಾದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಗಳ ರಕ್ಷಣೆಗಾಗಿ ತಮ್ಮ ದನಿಗಳನ್ನು ಕೂಡಿಸ ಬೇಕಾಗಿದೆ. ಶಾಂತಿಯ ಗುರಿಗೆ ಅಪಾಯಕಾರಿಯಾಗಿರುವಂಥ ರೀತಿಯಲ್ಲಿ ಕ್ಯೂಬಾದ ಮೇಲೆ ಹಾಕುತ್ತಿರುವ ಬೆದರಿಕೆಗಳನ್ನು ಕೂಡಲೇ ಅಂತ್ಯಗೊಳಿಸಬೇಕಾಗಿದೆ."

ಅಮೆರಿಕಾದ ದುರಾಕ್ರಮಣದ ವಿರುದ್ಧವಾಗಿ ವಿಯೆತ್ನಾಮೀ ಜನತೆಯ ನ್ಯಾಯವಾದ ಹೋರಾಟಕ್ಕೆ ಹಾಗೂ ತಮ್ಮ ಭದ್ರತೆ ಮತ್ತು ಅಂತರರಾಷ್ಟ್ರೀಯ ಸ್ಥಾನಗಳನ್ನು ಬಲಗೊಳಿಸಿ ಕೊಳ್ಳುವುದಕ್ಕಾಗಿ ವಿಯೆತ್ನಾಮ್ ಸಮಾಜವಾದಿ ಗಣರಾಜ್ಯ, ಲಾವೋಸ್ ಮತ್ತು ಕಂಪೂಚಿ ಯಾಗಳು ನಡೆಸುತ್ತಿರುವ ಪ್ರಯತ್ನಗಳಿಗೆ ಸೋವಿಯೆತ್ ಒಕ್ಕೂಟ ಮತ್ತು ಅದರ ಮಿತ್ರ ರಾಷ್ಟ್ರಗಳ ಬೆಂಬಲವು ಸರ್ವವಿದಿತ. 1982ರಲ್ಲಿ ಜರುಗಿದ ವಿಯೆತ್ನಾಮ್ ಕಮ್ಯೂನಿಸ್ಟ್ ಪಾರ್ಟಿಯ 5ನೇ ಮಹಾಸಭೆಯು ವಿಯೆತ್ನಾಮ್ ಮತ್ತು ಸೋವಿಯೆತ್ ಒಕ್ಕೂಟಗಳ ನಡುವೆ ಸೋದರ ಸಂಬಂಧಗಳ ಐತಿಹಾಸಿಕ ಮಹತ್ವವನ್ನು ಮತ್ತೊಮ್ಮೆ ದೃಢಪಡಿಸಿತು. ಮಹಾಸಭೆ ಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಲೇದುವಾ ವಿಶೇಷವಾಗಿ ಹೀಗೆ ಹೇಳಿದರು: "ಸೋವಿ ಯೆತ್ ಒಕ್ಕೂಟದೊಂದಿಗೆ ಸೌಹಾರ್ದತೆ ಮತ್ತು ಸರ್ವವ್ಯಾಪಿಯಾದ ಸಹಕಾರವು ನಮ್ಮ ಪಾರ್ಟಿ ಮತ್ತು ರಾಜ್ಯದ ವಿದೇಶಾಂಗ ನೀತಿಯ ಮುಖ್ಯಾಂಶವಾಗಿರುತ್ತದೆ. ಎರಡೂ ರಾಷ್ಟ್ರ ಗಳ ಹಿತಾಸಕ್ತಿಯಿಂದ ವಿಯೆತ್ನಾಮೀ—ಸೋವಿಯೆತ್ ಸಕ್ರಿಯ ಸೌಹಾರ್ದತೆಯನ್ನು ಬಲ ಗೊಳಿಸಲು ಮತ್ತು ಸರ್ವವ್ಯಾಪಿ ಸಹಕಾರವನ್ನು ವಿಕಾಸಗೊಳಿಸಲು ನಾವು ಇನ್ನೂ ಹೆಚ್ಚು ಕ್ರಿಯಾಶೀಲವಾಗಿ ಶ್ರಮಿಸುತ್ತೇವೆ. ನಮ್ಮ ತಾಯಿ ನಾಡಿನ ರಕ್ಷಣೆಯಲ್ಲಿ, ಸಮಾಜವಾದದ ನಿರ್ಮಾಣದಲ್ಲಿ ಮತ್ತು ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಹಾಗೂ ಇಂಡೋಚೀಣಾದಲ್ಲಿ ಸಮಾಜವಾದದ ಸ್ಥಾನಗಳನ್ನು ಬಲಗೊಳಿಸುವುದರಲ್ಲಿ ನಮ್ಮ ಜನತೆಯ ಯಶಸ್ಸುಗಳಿಗೆ ಅದು ಒಂದು ಭರವಸೆಯಾಗಿದೆ ಎಂದು ನಾವು ಪರಿಗಣಿಸುತ್ತೇವೆ."

ವಿಯೆತ್ನಾಮ್, ಸೋವಿಯೆತ್ ಒಕ್ಕೂಟ ಮತ್ತು ಇತರ ಸೋದರ ರಾಷ್ಟ್ರಗಳ ಬೆಂಬಲ ದಿಂದ ಸಮಾಜವಾದಿ ಸಮುದಾಯದ ಅತ್ಯಂತ ಕಿರಿಯ ಸದಸ್ಯ ರಾಷ್ಟ್ರವಾಗಿರುವ ಲಾವೋಸ್, ಹೊಸ ಜೀವನದ ಬುನಾದಿಗಳನ್ನು ನಿರ್ಮಿಸಲು ಯಶಸ್ವಿಯಾಗಿ ತನ್ನ ಮೊದಲ ಹೆಜ್ಜೆಗಳನ್ನಿರಿ ಸಿದೆ. ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಲಾವೋಸ್‌ಗೆ ತನ್ನ ಸುಮಾರು ನಾಲ್ಕು ಮಿಲಿಯ ಬಹು ಜನಾಂಗೀಯ ಜನರಿಗೆ ನಿರಂತರವಾದ ಆಹಾರ ಸರಬರಾಜನ್ನು ಮಾಡಲು ಸಾಧ್ಯವಾಗಿದೆ. ರಾಷ್ಟ್ರೀಯ ಆರ್ಥಿಕವನ್ನು ವಿಕಾಸಗೊಳಿಸುವುದಕ್ಕೆ ಮತ್ತು ನುರಿತ ಪರಿಣತ ರನ್ನು ತರಬೇತುಗೊಳಿಸುವುದಕ್ಕೆ ಮಿತ್ರ ಸಮಾಜವಾದಿ ರಾಷ್ಟ್ರಗಳು ಲಾವೋಸ್‌ಗೆ ಸಹಾಯ ಮಾಡುತ್ತಿವೆ.

ವಿಯೆತ್ನಾಮ್, ಲಾವೋಸ್ ಮತ್ತು ಕಂಪೂಚಿಯಾಗಳ ವಿರುದ್ಧವಾಗಿ ಚೀನೀ ನಾಯಕ ತ್ವವು ನಡೆಸುತ್ತಿರುವ ದ್ವೇಷಪೂರಿತ ಪ್ರಚೋದನೆಗಳನ್ನು ಸೋವಿಯೆತ್ ಒಕ್ಕೂಟವು ದೃಢ ವಾಗಿ ಖಂಡಿಸುತ್ತದೆ. ಸೋವಿಯೆತ್ ಒಕ್ಕೂಟ, ವಿಯೆತ್ನಾಮ್ ಮತ್ತು ಲಾವೋಸ್‌ಗಳು ಚೀಣಾ ಜನತಾ ಗಣರಾಜ್ಯದೊಂದಿಗೆ ಸಂಬಂಧಗಳ ಸಹಜೀಕರಣವನ್ನು ಬಯಸುತ್ತವೆ ಮತ್ತು

ಈ ಪ್ರಕ್ರಿಯೆಯು ಮೂರನೇ ರಾಷ್ಟ್ರಗಳ ಹಿತಾಸಕ್ತಿಗಳಿಗೆ ಯಾವ ಬಗೆಯಲ್ಲೂ ಬಾಧಕವಾಗಿರ ಕೂಡದು ಎಂದು ದೃಢವಾಗಿ ನಂಬಿವೆ.

## ಶ್ರಮಜೀವಿ ಮತ್ತು ಸಮಾಜವಾದಿ ಅಂತರರಾಷ್ಟ್ರೀಯತೆ

ಶ್ರಮಜೀವಿ ಅಂತರರಾಷ್ಟ್ರೀಯತೆ ಮತ್ತು ಮಾನವನಿಂದ ಮಾನವ ಶೋಷಣೆಯನ್ನು ತೊಡೆದುಹಾಕುವುದಕ್ಕಾಗಿ ಹಾಗೂ ಒಂದು ಹೊಸ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಜಗತ್ತನ್ನು ನಿರ್ಮಿಸುವುದಕ್ಕಾಗಿ ಕ್ರಾಂತಿಕಾರಿ ಹೋರಾಟದಲ್ಲಿ ಎಲ್ಲ ದೇಶಗಳ ದುಡಿಯುವ ಜನತೆಯ ಅಂತರಾಷ್ಟ್ರೀಯತೆಯು ಸೌಹಾರ್ದತೆ ಇವೂ, ಸಮಾಜವಾದಿ ಅಂತರರಾಷ್ಟ್ರೀಯತೆಯೂ ಸಾರತಃ ಸಂಪೂರ್ಣವಾಗಿ ಒಂದೇ ಆಗಿವೆ. ಹಲವು ದೇಶಗಳಲ್ಲಿ ದುಡಿಯುವ ಜನತೆಯು ವಿಜಯು ದೊಂದಿಗೆ, ಶ್ರಮಜೀವಿ ಅಂತರರಾಷ್ಟ್ರೀಯತೆಯು ಈ ದೇಶಗಳ ನಡುವೆ ಸಂಬಂಧಗಳಿಗೆ ಆಧಾರವಾಗಿರುತ್ತದೆ ಮತ್ತು ಹೊಸ ಅಂಶಗಳನ್ನು ಪಡೆಯುತ್ತದೆ. ಅದು ನಾನಾ ದೇಶಗಳ ಕಾರ್ಮಿಕ ವರ್ಗದ ನಡುವೆ ಸಂಬಂಧಗಳಿಗೆ ಮಾತ್ರವಷ್ಟೇ ಅಲ್ಲದೆ, ಸಮಾಜವಾದಿ ರಾಷ್ಟ್ರಗಳು ಮತ್ತು ರಾಜ್ಯಗಳ ನಡುವೆ ಸಂಬಂಧಗಳಿಗೂ ಮೂಲ ಸೂತ್ರವಾಗಿರುತ್ತದೆ. ಅದಕ್ಕೆ ಜನತೆ, ವರ್ಗಗಳು ಮತ್ತು ಇಡೀ ರಾಷ್ಟ್ರಗಳ ನಡುವೆ ಹೊಸ ಸಂಬಂಧಗಳನ್ನು ನಿರ್ಮಿಸುವುದರಲ್ಲಿ ಮತ್ತು ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ನಿರ್ಮಾಣದ ನಾನಾ ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿ ಸಹಕರಿಸಲು ಕಾರ್ಮಿಕ ವರ್ಗದ ನೇತೃತ್ವದಲ್ಲಿರುವ ರಾಷ್ಟ್ರಗಳು ಮತ್ತು ರಾಜ್ಯಗಳ ಸಿದ್ಧತೆಯು ಪೂರ್ವಾವಶ್ಯಕತೆಯಾಗಿರುತ್ತದೆ.

ಸಮಾಜವಾದಿ ಅಂತರರಾಷ್ಟ್ರೀಯತೆಯು ಹೊಸ ಸಮಾಜದ ನಿರ್ಮಾಣ ಪಥದಲ್ಲಿ ಅಡಿಯಿರಿಸಿರುವ ಜನತೆಯ ಮೂಲ ಹಿತಾಸಕ್ತಿಗಳನ್ನು ಪ್ರತಿಬಿಂಬಿಸುತ್ತದೆ. ಅದ್ದರಿಂದಾಗಿ, ಸಮಾಜವಾದಿ ದೇಶಗಳ ಸಂವಿಧಾನಗಳು ಮತ್ತು ಇತರ ಶಾಸನಗಳಲ್ಲಿ ಹಾಗೂ ಅವುಗಳ ಪಾರ್ಟಿಗಳ ಮಾರ್ಗದರ್ಶಿ ದಸ್ತೈವಜುಗಳಲ್ಲಿ ಸಮಾಜವಾದಿ ಅಂತರರಾಷ್ಟ್ರೀಯತೆಯು ವ್ಯಕ್ತಗೊಂಡಿರುವುದು ಸಹಜವೇ ಆಗಿರುತ್ತದೆ.

ಸೋವಿಯೆತ್ ಸಂವಿಧಾನ (ವಿಧಿ ೩೦) ದಲ್ಲಿ ಹೀಗೆ ಹೇಳಲಾಗಿದೆ: "ಸಮಾಜವಾದಿ ಜಾಗತಿಕ ವ್ಯವಸ್ಥೆಯು ಮತ್ತು ಸಮಾಜವಾದಿ ಸಮುದಾಯದ ಭಾಗವಾಗಿರುವ ಸೋವಿಯೆತ್ ಒಕ್ಕೂಟವು, ಸಮಾಜವಾದಿ ಅಂತರರಾಷ್ಟ್ರೀಯತೆಯ ತತ್ವದ ಆಧಾರದ ಮೇಲೆ ಇತರ ಸಮಾಜವಾದಿ ದೇಶಗಳೊಂದಿನೆ ಮೈತ್ರಿ, ಸಹಕಾರ ಮತ್ತು ಸಂಗಾತಿಯುತ ಪರಸ್ಪರ ಸಹಾಯುವನ್ನು ಪ್ರೋತ್ಸಾಹಿಸುತ್ತದೆ ಮತ್ತು ಬಲಗೊಳಿಸುತ್ತದೆ..."

ಹಂಗೆರಿಯ ಸೋಷಲಿಸ್ಟ್ ವರ್ಕರ್ಸ್ ಪಾರ್ಟಿಯ ಕಾರ್ಯಕ್ರಮದಲ್ಲಿ ಹೀಗೆ ಹೇಳಲಾಗಿದೆ: "ಜಾಗತಿಕ ಸಮಾಜವಾದಿ ವ್ಯವಸ್ಥೆಯು ಇಡೀ ಮಾನವ ಕುಲದ ಪ್ರಗತಿಗೆ ಮತ್ತು ನಮ್ಮ ತಾಯ್ನಾಡಿನ ಸ್ವಾತಂತ್ರ್ಯ ಹಾಗೂ ಸಮೃದ್ಧಿಗೆ ಒಂದು ಮುಖ್ಯವಾದ ಭರವಸೆಯಾಗಿ ಸೇವೆ ಸಲ್ಲಿಸುತ್ತಿದೆ. ವಿಚಾರಗಳು, ಗುರಿಗಳು ಮತ್ತು ಹಿತಾಸಕ್ತಿಗಳ ಏಕತೆಯ ಮೇಲೆ ಆಧಾರಿತವಾ

ಗಿರುವ ಸಹಕಾರವು, ಹೊಸ ಸಮಾಜವನ್ನು ನಿರ್ಮಿಸುತ್ತಿರುವ ಜನತೆಯನ್ನು ಹೆಚ್ಚು ನಿಕಟವಾಗಿ ಒಂದುಗೂಡಿಸುತ್ತದೆ. ಸಮಾಜವಾದಿ ಅಂತರರಾಷ್ಟ್ರೀಯತೆಯ ತತ್ವಗಳಿಂದ ಪ್ರೇರಿತವಾದ ಹಂಗೆರಿಯ ಸೋಷಲಿಸ್ಟ್ ವರ್ಕರ್ಸ್ ಪಾರ್ಟಿಯು ಸಮಾಜವಾದಿ ದೇಶಗಳ ನಡುವೆ ದ್ವಿಪಕ್ಷೀಯ ಹಾಗೂ ಬಹುಪಕ್ಷೀಯ ಸಂಬಂಧಗಳ ಸರ್ವ ವ್ಯಾಪಿಯಾದ ಅಭಿವೃದ್ಧಿಯನ್ನು ಪ್ರತಿಪಾದಿಸುತ್ತದೆ. ತನ್ಮೂಲಕ ಜಾಗತಿಕ ಸಮಾಜವಾದಿ ವ್ಯವಸ್ಥೆಯ ತ್ವರಿತ ಪ್ರಗತಿಯನ್ನು ಪ್ರೋತ್ಸಾಹಿಸುತ್ತದೆ..."

ಹಂಗೆರಿ ಜನತಾ ಗಣರಾಜ್ಯದ ಸಂವಿಧಾನವೂ ಕೂಡ ಹಂಗೆರಿಯು ಜಾಗತಿಕ ಸಮಾಜವಾದಿ ವ್ಯವಸ್ಥೆಗೆ ಸೇರಿರುವ ವಿಷಯವನ್ನು ಗಮನದಲ್ಲಿರಿಸಿಕೊಂಡು ದೇಶದ ಗುರಿಗಳನ್ನು ನಿರೂಪಿಸಿದೆ.

ವಿಯೆಟ್ನಾಮ್ ಕಮ್ಯೂನಿಸ್ಟ್ ಪಾರ್ಟಿಯ ೫ ನೇ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಪಾರ್ಟಿ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ಲೇ ದುವಾ ಹೀಗೆ ಹೇಳಿದರು ; "ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಸಮಾಜವಾದಿ ಅಂತರರಾಷ್ಟ್ರೀಯತೆಯ ಸೂತ್ರಗಳ ಆಧಾರದ ಮೇಲೆ ಸೋದರ ಸಮಾಜವಾದಿ ದೇಶಗಳೊಂದಿಗೆ ಮೈತ್ರಿ ಬಂಧಗಳನ್ನು ಬಲಗೊಳಿಸುವುದು ಮತ್ತು ಸಹಕಾರ ಸಂಬಂಧಗಳನ್ನು ವಿಸ್ತರಿಸುವುದು ನಮ್ಮ ಪಾರ್ಟಿ ಮತ್ತು ರಾಜ್ಯದ ವಿದೇಶಾಂಗ ನೀತಿಯ ಅತ್ಯಂತ ಮುಖ್ಯವಾದ ಕಾರ್ಯಭಾರವಾಗಿರುತ್ತದೆ." ಸಂಯುಕ್ತ ಸಮಾಜವಾದಿ ವಿಯೆಟ್ನಾಮ್‌ನ ಸಂವಿಧಾನದಲ್ಲಿ ಸೋವಿಯೆತ್ ಒಕ್ಕೂಟ, ಲಾವೋಸ್, ಕಾಂಪೂಚಿಯಾ ಮತ್ತು ಇತರ ಸಮಾಜವಾದಿ ದೇಶಗಳೊಂದಿಗೆ ದೇಶದ ಅಂತರರಾಷ್ಟ್ರೀಯ ಸಂಬಂಧಗಳನ್ನು ಕುರಿತಾದ ಒಂದು ವಿಧಿಯನ್ನು ಸೇರಿಸಲಾಗಿದೆ.

"ಸಮಾಜವಾದಿ ಅಂತರರಾಷ್ಟ್ರೀಯತೆಯ ಭಾವದಿಂದ ದೇಶವು ಸಮಾಜವಾದಿ ದೇಶಗಳೊಂದಿಗೆ ಸೋದರ ಮೈತ್ರಿ ಮತ್ತು ಸಹಕಾರ ಸಂಬಂಧಗಳನ್ನು ಇರಿಸಿಕೊಳ್ಳುತ್ತದೆ ಮತ್ತು ವಿಕಾಸಗೊಳಿಸುತ್ತದೆ" ಎಂಬುದಾಗಿ ರುಮೇನಿಯ ಸಮಾಜವಾದಿ ಗಣರಾಜ್ಯದ ಸಂವಿಧಾನದ 14 ನೇ ವಿಧಿಯು ಹೇಳುತ್ತದೆ.

"ಸೋವಿಯೆತ್ ಸಮಾಜವಾದಿ ಗಣರಾಜ್ಯಗಳ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳೊಂದಿಗೆ ತನ್ನ ಸಂಬಂಧಗಳನ್ನು ಕ್ಯೂಬಾ ಗಣರಾಜ್ಯವು ಸಮಾಜವಾದಿ ಅಂತರರಾಷ್ಟ್ರೀಯತೆ, ಮೈತ್ರಿ, ಸಹಕಾರ ಮತ್ತು ಪರಸ್ಪರ ಸಹಾಯದ ಆಧಾರದ ಮೇಲೆ ಇರಿಸುತ್ತದೆ," ಎಂಬುದಾಗಿ ರಾಷ್ಟ್ರ ವ್ಯಾಪಿಯಾದ ಜನಮತದಿಂದ ಅಂಗೀಕೃತವಾದ ಕ್ಯೂಬಾದ ಸಂವಿಧಾನವು ಹೇಳುತ್ತದೆ.

ಸಮಾಜವಾದಿ ಅಂತರರಾಷ್ಟ್ರೀಯತೆಯು ಸಾರ್ವತ್ರಿಕವಾದ ಪ್ರಜಾಪ್ರಭುತ್ವಾತ್ಮಕ ತತ್ವಗಳಾದ ಸಮಾನತೆ, ಸ್ವಾತಂತ್ರ್ಯ, ಸಾರ್ವಭೌಮತ್ವಗಳಿಗೆ ಗೌರವ ಮತ್ತು ಇತರ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ತಲೆಹಾಕದಿರುವುದು ಇವುಗಳಿಗೆ ವಿರೋಧವಾಗಿಲ್ಲ, ಅದಕ್ಕಿಂತ ಹೆಚ್ಚಾಗಿ, ಅದು ಮೊದಲ ಬಾರಿಗೆ, ಭಾಗಿಯಾಗಿರುವ ಎಲ್ಲ ದೇಶಗಳು ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯತೆಯ ಈ ಎಲ್ಲ ತತ್ವಗಳನ್ನು ಪೂರ್ವಾವಶ್ಯಕತೆಯಾಗಿಸುತ್ತದೆ ಮತ್ತು ಒಡಮೂಡಿ

ಸುತ್ತದೆ. * 1957 ರಲ್ಲಿ ಜರುಗಿದ ಸಮಾಜವಾದಿ ದೇಶಗಳ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳ ಪ್ರತಿನಿಧಿಗಳ ಸಭೆಯ ಘೋಷಣೆಯಲ್ಲಿ ಹೇಳಲಾದಿರುವಂತೆ, ಸಮಾಜವಾದಿ ದೇಶಗಳು ತಮ್ಮ ಸಂಬಂಧಗಳನ್ನು ಪೂರ್ಣ ಸಮಾನತೆ, ಪ್ರಾದೇಶಿಕ ಸಮಗ್ರತೆ, ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಗಳಿಗೆ ಗೌರವ, ಮತ್ತು ಪರಸ್ಪರರ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕದಿರುವ ತತ್ವಗಳ ಆಧಾರದ ಮೇಲೆ ನಿರ್ಮಿಸಿಕೊಳ್ಳುತ್ತವೆ. ಸೋದರ ಭಾವದ ನೆರವು ಅವುಗಳ ಸಂಬಂಧಗಳ ಒಂದು ಅಭೇದ್ಯವಾದ ಅಂಶವಾಗಿರುತ್ತದೆ. ಈ ಪರಸ್ಪರ ಸಹಾಯದಲ್ಲಿ ಸಮಾಜವಾದಿ ಅಂತರಾಷ್ಟ್ರೀಯ ತತ್ವವು ವಿಶೇಷವಾಗಿ ವ್ಯಕ್ತಗೊಳ್ಳುತ್ತದೆ.

ಪೀಕಿಂಗ್‌ನ ದುರಾಕ್ರಮಣಕ್ಕೆ ಬಲಿಯಾಗಿದ್ದ ವಿಯೆತ್ನಾಮ್‌ಗೆ ಸಮಾಜವಾದಿ ದೇಶಗಳು ನೀಡಿದ ತುರ್ತಿನ ನೆರವು ಸಮಾಜವಾದಿ ಅಂತರರಾಷ್ಟ್ರೀಯತೆಯ ಕಾರ್ಯ ತತ್ಪರತೆಗೆ ಸ್ಪಷ್ಟವಾದ ಉದಾಹರಣೆಯಾಗಿದೆ. ಸೋವಿಯೆತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳು ವಿಯೆತ್ನಾಮ್‌ಗೆ ಆಹಾರ ಪದಾರ್ಥಗಳು, ಔಷಧಗಳು, ಕಟ್ಟಡ ನಿರ್ಮಾಣ ಸರಂಜಾಮುಗಳು ಮತ್ತು ಮಿಲಿಟರಿ ಸರಕುಗಳನ್ನು ಕಳಿಸಿಕೊಟ್ಟವು. ಜನ ವಿರೋಧಿ ಪೋಲ್‌ಪಾಟ್ ಗುಂಪಿನ ಆಳ್ವಿಕೆಯಿಂದ ಸಂಪೂರ್ಣವಾಗಿ ನಾಶಗೊಂಡಿದ್ದ, ಕಂಪೂಚಿಯಾಕ್ಕೆ ಸಮಾಜವಾದಿ ದೇಶಗಳು ಅದೇ ರೀತಿಯಲ್ಲಿ ನೆರವು ನೀಡಿದುವು.

ಸಮಾಜವಾದಿ ದೇಶಗಳ ನಡುವೆ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಕೌಲುಗಳು ಮತ್ತು ಒಪ್ಪಂದಗಳಿಂದ ಸಮಾಜವಾದಿ ಅಂತರರಾಷ್ಟ್ರೀಯತೆಯ ತತ್ವಗಳು ದೃಢಗೊಂಡಿವೆ. ಹಲವು ಮಿಲಿಯ ಜನ ಬಲವುಳ್ಳ ಸಮಾಜವಾದಿ ದೇಶಗಳು ವಾರ್ಸಾ ಕೌಲು ಸಂಘಟನೆ ಮತ್ತು ಪರಸ್ಪರ ಆರ್ಥಿಕ ಸಹಾಯ ಮಂಡಲಿಗಳಲ್ಲಿ ಒಂದುಗೂಡಿರುವುದರಲ್ಲಿ ಈ ಸಂಬಂಧಗಳು ವ್ಯಕ್ತಗೊಂಡಿವೆ, ಇವು ಸಮಾಜವಾದಿ ಸಮುದಾಯಕ್ಕೆ ಸೇರಿರುವ ರಾಷ್ಟ್ರಗಳಾದಿವೆ. ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ ಮತ್ತು ಸಮಾಜವಾದಿ ಸಮುದಾಯದ ದೇಶಗಳ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಾರ್ಟಿಗಳು ಜಾಗತಿಕ ಸಮಾಜವಾದಿ ವ್ಯವಸ್ಥೆಯ ಎಲ್ಲ ದೇಶಗಳೊಂದಿಗೂ ಸಂಬಂಧಗಳನ್ನು ವಿಕಾಸಗೊಳಿಸುವ ಮತ್ತು ಬಲಗೊಳಿಸುವ ಪರವಾಗಿವೆ. ಮುಖ್ಯವಾಗಿ ಅವು ಚೀಣಾ ಜನತಾ ಗಣರಾಜ್ಯದೊಂದಿಗೆ ಸಂಬಂಧಗಳನ್ನು ಸಹಜೀಕರಿಸುವುದರಲ್ಲಿ, ಮತ್ತು ಹಾಲಿ ಭಿನ್ನಾಭಿಪ್ರಾಯಗಳು ಮತ್ತು ವಿರೋಧಗಳನ್ನು, ಮೂರನೆಯ ದೇಶಗಳ ಹಿತಾಸಕ್ತಿಗಳಿಗೆ ಬಾಧಕವಾಗದಂತೆ ಪರಸ್ಪರ ಸಮ್ಮತವಾದ ಆಧಾರದ ಮೇಲೆ ಬಗೆಹರಿಸುವುದರಲ್ಲಿ ಆಸಕ್ತವಾಗಿವೆ. 1982 ಮತ್ತು 1983 ರ ನಡುವಣ ಕಾಲದಲ್ಲಿ ಈ ಬಗ್ಗೆ ಹಲವು ಹೇಳಿಕೆಗಳನ್ನು ನೀಡಲಾಗಿದೆ. ಅವು ಚೀಣಾ ಜನತಾ ಗಣರಾಜ್ಯ ಮತ್ತು ಸಮಾಜವಾದಿ ಸಮುದಾ

---

* 1893 ರಲ್ಲಿ ಎಫ್. ಎಂಗೆಲ್ಸ್‌ರವರು ಎಲ್. ಲಫಾರ್ಗ್‌ರವರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದರು ; "...ಆಂತರಿಕ ವಿಷಯಗಳಲ್ಲಷ್ಟೇ ಅಲ್ಲದೆ, ಅಂತರರಾಷ್ಟ್ರೀಯ ವಿಚಾರಗಳಲ್ಲಿಯೂ ಸ್ವಾಯತ್ತವಾಗಿ, ಸ್ವತಂತ್ರವಾದ ಅಸ್ತಿತ್ವದಲ್ಲಿರುವ ರಾಷ್ಟ್ರಗಳ ನಡುವೆ ಮಾತ್ರವೇ ಅಂತರರಾಷ್ಟ್ರೀಯ ಐಕ್ಯತೆ ಇರುವುದು ಸಾಧ್ಯ." ಎಫ್. ಎಂಗೆಲ್ಸ್, ಪಿ ಮತ್ತು ಎಲ್ ಲಫಾರ್ಗ್‌ರೊಂದಿಗೆ ಪತ್ರವ್ಯವಹಾರ, ಮಾಸ್ಕೋ 1959, ಪುಟ 263.

ಯಂದ ಇತರ ದೇಶಗಳ ನಡುವೆ ಆರ್ಥಿಕ, ಸಾಂಸ್ಕೃತಿಕ ಮತ್ತು ಕ್ರೀಡಾಕ್ಷೇತ್ರಗಳಲ್ಲಿ ಸಂಬಂಧಗಳನ್ನು ಬೆಳೆಸುವುದರಲ್ಲಿ ಕೊಂಚ ಮಟ್ಟಿನ ಪ್ರಗತಿಯನ್ನು ಸೂಚಿಸಿವೆ. ಹಲವು ಸುತ್ತಿನ ಸೋವಿಯೆತ್-ಚೀನಾ ಸಮಾಲೋಚನೆಗಳು ಜರುಗಿವೆ. 1984 ರ ಮಾರ್ಚ್ 4 ರಂದು ಮಾಡಿದ ತಮ್ಮ ಚುನಾವಣಾ ಭಾಷಣದಲ್ಲಿ ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೊನ್‌ಸ್ಟಾಂತಿನ್ ಯು. ಚೆರ್ನೆಂಕೋರವರು ಈ ಸಮಾಲೋಚನೆಗಳು ಮುಂದುವರಿಯಬೇಕೆಂದು ಹೇಳಿದರು ಮತ್ತು ಅವನ್ನು ಉನ್ನತ ರಾಜಕೀಯ ಮಟ್ಟಕ್ಕೇರಿಸಲು ಸೋವಿಯೆತ್ ಒಕ್ಕೂಟದ ಸಿದ್ಧತೆಯನ್ನು ವ್ಯಕ್ತಗೊಳಿಸಿದರು.

## ಜಾಗತಿಕ ಸಮಾಜವಾದದಲ್ಲಿ ವೈರುಧ್ಯಗಳನ್ನು ನಿವಾರಿಸುವುದು ಹೇಗೆ?

ಸಮಾಜವಾದಿ ಜಗತ್ತಿನಲ್ಲಿ ಘರ್ಷಣೆಗಳು ಮತ್ತು ಭಿನ್ನಾಭಿಪ್ರಾಯಗಳು ಉದ್ಭವಿಸಲು ಆಧಾರಗಳೇನೂ ಇಲ್ಲದಿದ್ದರೂ ಏಕೆ ಇರುತ್ತವೆ? ಎಲ್ಲ ದೇಶಗಳಿಗೂ ವಿಶಿಷ್ಟವಾಗಿರುವ ಸಾಮಾನ್ಯ ನಿಯಮಗಳಿಗನುಸಾರವಾಗಿ ಪ್ರತಿಯೊಂದು ದೇಶದಲ್ಲೂ ಸಮಾಜವಾದವು ಉದಯಿಸುತ್ತದೆ, ಪ್ರಬಲಗೊಳ್ಳುತ್ತದೆ ಮತ್ತು ಪರಿಪಕ್ವಗೊಳ್ಳುತ್ತದೆ. ಏನೇ ವಿಶಿಷ್ಟತೆಗಳಿದ್ದಾಗ್ಯೂ ಪ್ರತಿ ಸೋದರ ದೇಶದಲ್ಲಿಯೂ ಒಂದೇ ಬಗೆಯ ರಾಜಕೀಯ ವ್ಯವಸ್ಥೆಯ ರೂಪುಗೊಂಡಿದೆ. ಅವುಗಳೆಲ್ಲದರಲ್ಲೂ ಕಾರ್ಮಿಕ ವರ್ಗ ಮತ್ತು ಅದರ ಪಾರ್ಟಿಯ ನೇತೃತ್ವದಲ್ಲಿ ದುಡಿಯುವ ಜನರು ಅಧಿಕಾರವನ್ನು ಹೊಂದಿದ್ದಾರೆ, ಮಾನವನಿಂದ ಮಾನವನ ಶೋಷಣೆಯನ್ನು ತೊಡೆದು ಹಾಕಲಾಗಿದೆ, ಉತ್ಪಾದನಾ ಸಾಧನಗಳ ಸಾರ್ವಜನಿಕ ಒಡೆತನವು ಪ್ರಾಧಾನ್ಯತೆಯಲ್ಲಿದೆ, ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಮೇಣ ಸಮಾಜವಾದಿ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ ಮತ್ತು ಸಮಾಜವಾದವನ್ನು ನಿರ್ಮಿಸುವ ಹಾಗೂ ಉತ್ತಮಗೊಳಿಸುವ, ದುಡಿಯುವ ಜನತೆಯ ಜೀವನ ಮಟ್ಟವನ್ನು ವರ್ಧಿಸುವ ಮತ್ತು ಸಂಸ್ಕೃತಿ ಹಾಗೂ ವಿಜ್ಞಾನವನ್ನು ವಿಕಾಸಗೊಳಿಸುವ ಹಿತಾಸಕ್ತಿಗಳಿಂದ ಯೋಜನಾ ಬದ್ಧವಾದ ಆಧಾರದ ಮೇಲೆ ರಾಷ್ಟ್ರೀಯ ಆರ್ಥಿಕಗಳನ್ನು ವಿಕಾಸಗೊಳಿಸಲಾಗುತ್ತಿದೆ.

ಹಾಗೆಂದ ಮಾತ್ರಕ್ಕೆ, ಸಮಾಜವಾದಿ ಜಗತ್ತಿನಲ್ಲಿ ಎಲ್ಲವೂ ಒಂದೇತರನಾಗಿರುತ್ತದೆ ಎಂದು ಅರ್ಥವೆ? ಸಮಾಜವಾದಿ ಜಗತ್ತು ಹೆಚ್ಚು ಏಕತೆರನಾಗಿ ಬೆಳೆಯುವುದೆಂದು ಕಮ್ಯೂನಿಸ್ಟರು ಭಾವಿಸುತ್ತಿದ್ದ ಕಾಲವೊಂದಿತ್ತು. ಆದರಿಂದಲೇ, 1983 ರ ಜೂನ್‌ನಲ್ಲಿ ಜರುಗಿದ ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ ಕೇಂದ್ರ ಸಮಿತಿಯ ಪ್ಲೀನರಿ ಸಭೆಯಲ್ಲಿ, "ಆದರೆ ಕಳೆದ ಎರಡು ದಶಕಗಳು ಸಮಾಜವಾದಿ ಜಗತ್ತನ್ನು ಕುರಿತು ನಮ್ಮ ವಿಚಾರಗಳನ್ನು ಸಂಪದಗೊಳಿಸಿವೆ ಮತ್ತು ಅವು ಎಷ್ಟು ವಿಭಿನ್ನವಾದುವು ಮತ್ತು ಸಂಕೀರ್ಣವಾದುವು ಎಂಬುದನ್ನು ಹೆಚ್ಚು ಸ್ಪಷ್ಟವಾಗಿ ತೋರಿಸಿವೆ" ಎಂದು ಒತ್ತಿ ಹೇಳಲಾಯಿತು.

ಒಂದು ಸಮಾಜವಾದಿ ವ್ಯವಸ್ಥೆಯಾಗಿ ಸಮಾಜವಾದವು ಸ್ವಭಾವತಃ ಅಂತರರಾಷ್ಟ್ರೀಯವಾದುದಾಗಿದೆ. ಆದರೆ ವಿಶಿಷ್ಟವಾದ ರಾಷ್ಟ್ರೀಯ ಪ್ರಭುತ್ವ ರೂಪಗಳಲ್ಲಿ ಅದರ ಆಕಾರವು

ಕೆಲವು ಸಮಯಗಳಲ್ಲಿ ಸಾಕಷ್ಟು ಭಿನ್ನವಾದುದಾಗಿರುತ್ತದೆ. ಅದು ವಾಸ್ತವಿಕವಾದ ಸತ್ಯ. ಅದು ಅನೇಕ ವರ್ಷಗಳ ಕಾಲ, ಎಂದರೆ ಕಮ್ಯೂನಿಸಮ್ ದಿಗ್ವಿಜಯಗೊಳ್ಳುವವರೆಗೆ ಜಾಗತಿಕ ಸಮಾಜವಾದಿ ವ್ಯವಸ್ಥೆಯನ್ನು ಬಾಧಿಸುತ್ತಿರುತ್ತದೆ. ಸಮಾಜವಾದಿ ದೇಶಗಳ ಮೂಲ ಹಿತಾಸಕ್ತಿಗಳು ವಾಸ್ತವಿಕವಾಗಿ ಒಂದೇ ಆಗಿದ್ದರೂ, ಸಮಾಜವಾದದಡಿಯಲ್ಲಿ ಎಲ್ಲ ಸಾಮಾಜಿಕ ಜೀವನದ ಸಂಪೂರ್ಣ ಅಂತರರಾಷ್ಟ್ರೀಕರಣದ ಅಗತ್ಯ ಮತ್ತು ಸಮಾಜವಾದದ ವ್ಯವಸ್ಥೆಯ ರಾಷ್ಟ್ರೀಯ ಪ್ರಭುತ್ವದ ನಡುವೆ ಕೆಲವು ವೈರುಧ್ಯಗಳು ಇರುತ್ತವೆ. ಈ ವೈರುಧ್ಯವು ಸಮಾಜವಾದಿ ದೇಶಗಳ ಸಾಮಾನ್ಯ ಮತ್ತು ವಿಶಿಷ್ಟ ಹಿತಾಸಕ್ತಿಗಳ ಗರಿಷ್ಠ ಹೊಂದಾಣಿಕೆಗೆ ಪ್ರಯತ್ನವನ್ನು ಜಟಿಲಗೊಳಿಸಬಹುದು.

ಸಮಾಜವಾದಿ ಜಗತ್ತಿನಲ್ಲಿ ಇತರ ವೈರುಧ್ಯಗಳು ಇರುತ್ತವೆ. ಆದರೆ ಬಂಡವಾಳಶಾಹಿ ಜಗತ್ತಿನಲ್ಲಿರುವ ಬಗೆಹರಿಸಲಾಗದಂಥ ವೈಮನಸ್ಯಗಳಿಗೂ ಅವಕ್ಕೂ ಅಥಾರ್ಥ ಸಂಬಂಧವಿಲ್ಲ, ಹೋರಾಟಗಳ ಮೂಲಕ ಕಷ್ಟಪಟ್ಟು ನಿರ್ಮಿಸಲಾಗಿರುವ ಸಮಾಜದಲ್ಲಿ ಸಂಧಾರಣೆಯ ಮತ್ತು ಅಭಿವೃದ್ಧಿಯ ಅವಶ್ಯಕತೆಯಿಲ್ಲ ಎಂದು ಮಾರ್ಕ್ಸ್‌ವಾದ-ಲೆನಿನ್‌ವಾದದ ಅನುಯಾಯಿಗಳು ಪರಿಗಣಿಸುವುದಿಲ್ಲ. ಸಮಾಜವಾದಿ ವ್ಯವಸ್ಥೆಯು ಯಾವುದೇ ಕೊರತೆಗಳು, ವೈರುಧ್ಯಗಳು ಮತ್ತು ತೊಂದರೆಗಳಿಂದ ಮುಕ್ತವಾಗಿರುತ್ತದೆ ಎಂಬ ಕಲ್ಪನೆಗಳು ಹುಂಬತನವಾಗಿರುತ್ತದೆ, ವಾಸ್ತವಾಂಶಗಳಿಗೆ ಹೊರತಾಗಿರುತ್ತದೆ ಮತ್ತು ಬೂರ್ಷ್ವಾ ಅಪಪ್ರಚಾರಕರಿಗೆ ಸಾಮಗ್ರಿ ನೀಡುವುದಾಗಿರುತ್ತದೆ. ಸಮಾಜವಾದವನ್ನು ನಿರ್ಮಿಸುತ್ತಿರುವಾಗ ಮತ್ತು ಹೊಸ ಬಗೆಯ ಅಂತರರಾಷ್ಟ್ರೀಯ ಸಂಬಂಧಗಳನ್ನು ಸ್ಥಾಪಿಸುತ್ತಿರುವಾಗ ಜನ ತಪ್ಪುಗಳನ್ನು ಮಾಡುತ್ತಾರೆ, ರಾಷ್ಟ್ರೀಯ ವಾದಕ್ಕೆ ರಿಯಾಯಿತಿಗಳನ್ನು ತೋರುತ್ತಾರೆ ಮತ್ತು ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಕಡೆಗಣಿಸುತ್ತಾರೆ. ಸಮಾಜವಾದಿ ಜಗತ್ತಿನಲ್ಲಿ ವೈರುಧ್ಯಗಳು ವಾಸ್ತವವಾಗಿ, ದೇಶಗಳ ಸಾಮಾಜಿಕ-ಆರ್ಥಿಕ ವಿಕಾಸದ ಮಟ್ಟದಲ್ಲಿರುವ ವ್ಯತ್ಯಾಸಗಳಿಂದ, ಅವುಗಳ ವಿಶಿಷ್ಟವಾದ ಭೌಗೋಲಿಕ ಸ್ಥಾನ, ಗಾತ್ರ ಮತ್ತು ಇತಿಹಾಸದಿಂದ (ಸಮಾಜವಾದಿ ನಿರ್ಮಾಣದ ಪ್ರಾರಂಭದ ಪೂರ್ವದಲ್ಲಿ ಮತ್ತು ನಿರ್ಮಾಣ ಕಾಲದಲ್ಲಿ), ಇಂಧನ, ಕಚ್ಚಾ ಮಾಲು ಮತ್ತು ದುಡಿಮೆಗಾರರ ಬಲದ ಅಸಮರ್ಪಕ ವಿತರಣೆಯಿಂದ. ಕೆಲವೊಮ್ಮೆ ರಾಷ್ಟ್ರೀಯ ಆರ್ಥಿಕಗಳ ನಡುವೆ ಸರಿಯಾದ ನಿಕಟ ಸಂಬಂಧದ ಕೊರತೆಯಿಂದ ಮತ್ತು ಬಂಡವಾಳಶಾಹಿ ದೇಶಗಳೊಂದಿಗೆ ಬೇರೆ ಮಟ್ಟದ ಸಂಬಂಧಗಳಿಂದ ಉದ್ಭವಿಸುತ್ತವೆ. ಈ ವೈರುಧ್ಯಗಳ ಪರಿಣಾಮವಾಗಿ ಸಮಾಜವಾದಿ ದೇಶಗಳ ನಡುವೆ ಭಿನ್ನಾಭಿಪ್ರಾಯಗಳು ಉದ್ಭವಿಸಿದಾಗ ಮತ್ತು ಕೆಲವು ರಾಷ್ಟ್ರೀಯ ಪ್ರಭುತ್ವ ಹಿತಾಸಕ್ತಿಗಳ ನಡುವೆ ವ್ಯತ್ಯಾಸಗಳು ತಲೆದೋರಿದಾಗ, ಅವುಗಳನ್ನು ಬಗೆಹರಿಸಲು ಸಮರ್ಪಕವಾದ ವಿಧಾನಗಳನ್ನು ಕಂಡು ಹಿಡಿಯುವುದು ಅಗತ್ಯ ಮತ್ತು ಅವನ್ನು ಸಮಾಜವಾದವನ್ನು ದುರ್ಬಲಗೊಳಿಸುವುದಕ್ಕಿಂತ ಬಲಗೊಳಿಸುವುದಕ್ಕೆ ಉಪಯೋಗಿಸಕೊಳ್ಳಬೇಕು. 1983 ರ ಜೂನ್ ತಿಂಗಳಲ್ಲಿ ಜರುಗಿದ ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ ಕೇಂದ್ರ ಸಮಿತಿಯ ಪ್ಲೀನರಿ ಸಭೆಯಲ್ಲಿ ಈ ವಿಷಯದ ಬಗ್ಗೆ ಹೀಗೆ ಹೇಳಲಾಯಿತು"...... ಹಾಲಿ ಇರುವ ಭಿನ್ನಾಭಿಪ್ರಾಯಗಳು ಸಹಕಾರದ ವಿಕಾಸವನ್ನು ಅಡ್ಡಿಪಡಿಸದೆ ಇರುವುದು ತುಂಬಾ ಮುಖ್ಯವಾಗಿದೆ. ಇದನ್ನು ಭರವಸೆಗೊಳಿಸುವುದು ಕಮ್ಯೂನಿಸ್ಟರ, ಆಡಳಿತದಲ್ಲಿರುವ ಕಮ್ಯೂನಿಸ್ಟ್ ಪಾರ್ಟಿಗಳ ಪವಿತ್ರ ಕರ್ತವ್ಯವಾಗಿರುತ್ತದೆ, ನವ ಸಮಾಜದ ನಿರ್ಮಾಪಕರಾಗಿ

ನಾವು ಹೊಂದಿರುವ ಏಕಾಭಿಪ್ರಾಯಕ್ಕೆ ಹೋಲಿಸಿದಲ್ಲಿ ನಮ್ಮನ್ನು ವಿಭಾಗಿಸುವುದು ಒಂದು ಕಣದಷ್ಟೂ ಅಲ್ಲ."

ಈ ಪ್ರಶ್ನೆಗೆ ಸಂಬಂಧಪಟ್ಟಂತೆ, ಇತರ ಸೋದರ ಕಮ್ಯೂನಿಸ್ಟ್ ಪಾರ್ಟಿಗಳಂತೆಯೇ, ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯೂ, ಸಮಾಜವಾದಿ ದೇಶಗಳ ಐಕ್ಯತೆ ಮತ್ತು ಸಂಸಕ್ತಿಯನ್ನು ಬಲಗೊಳಿಸುವ ಪಥವು ಕ್ರಮೇಣ ಅವುಗಳನ್ನು ನಿಕಟವಾಗಿಸುವುದರ ಪ್ರವೃತ್ತಿಯ ಮೇಲೆ ಅವಲಂಬಿತವಾಗಿರುತ್ತದೆ ಎಂಬ ಅಭಿಪ್ರಾಯ ಹೊಂದಿದೆ. ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ 25 ಮತ್ತು 26 ನೇ ಮಹಾಸಭೆಗಳಲ್ಲಿಯೂ ಹಾಗೂ ಆಡಳಿತದಲ್ಲಿರುವ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳ ಮಹಾ ಸಭೆಗಳಲ್ಲೂ ಈ ಪ್ರವೃತ್ತಿಯನ್ನು ಕುರಿತು ಚರ್ಚಿಸಲಾಯಿತು. ಅದು ತುಂಬಾ ಬಹುಮುಖವಾದ ಪ್ರಕ್ರಿಯೆ, ಅದು ಪ್ರತಿ ಸಮಾಜವಾದಿ ರಾಷ್ಟ್ರದ ಬೆಳೆಯುತ್ತಿರುವ ಸಮೃದ್ಧಿ ಮತ್ತು ಸಮಾಜವಾದಿ ದೇಶಗಳ ನಡುವೆ ಹೆಚ್ಚುತ್ತಿರುವ ನಿಕಟ ಸಂಪರ್ಕಗಳಲ್ಲಿ ಹೆಚ್ಚಾಗಿ ವ್ಯಕ್ತಗೊಳ್ಳುತ್ತದೆ, ಅದು ಅಧಿಕಾಧಿಕವಾಗಿ ಸಮಾಜವಾದಿ ದೇಶಗಳ ನೀತಿಗಳು, ಆರ್ಥಿಕಗಳು ಮತ್ತು ಸಾಮಾಜಿಕ ಜೀವನದಲ್ಲಿ ಹಾಗೂ ಅವುಗಳ ವಿಕಾಸದ ಮಟ್ಟಗಳನ್ನು ಸಮನ್ವಯಗೊಳಿಸುವುದರಲ್ಲಿ ಏಕ ಮುಖದ ಲಕ್ಷಣಗಳು ತೋರಿ ಬರುವುದರಲ್ಲಿ ವ್ಯಕ್ತಗೊಳ್ಳುತ್ತದೆ.

ಅದೇ ಸಮಯದಲ್ಲಿ, ಮಾರ್ಕ್ಸ್‌ವಾದ-ಲೆನಿನ್‌ವಾದದ ಸೂತ್ರಗಳ ಮಾರ್ಗ ದರ್ಶನ ದಿಂದ, ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳು ನಿರ್ದಿಷ್ಟವಾದ ಪರಿಸ್ಥಿತಿಗಳು ಮತ್ತು ರಾಷ್ಟ್ರೀಯ ವೈಶಿಷ್ಟ್ಯಗಳನ್ನು ಗಣನೆಗೆ ತೆಗೆದುಕೊಂಡು ಸ್ವತಂತ್ರವಾಗಿ ತಮ್ಮ ನೀತಿಗಳನ್ನು ನಿರ್ಧರಿಸುತ್ತವೆ, ತಮ್ಮ ದೇಶಗಳಲ್ಲಿ ಸಮಾಜವಾದವನ್ನು ನಿರ್ಮಿಸುದಕ್ಕೆ ಮುಖ್ಯವಾದಿ ಪ್ರಯತ್ನಗಳನ್ನು ಎಲ್ಲಿ ನಡೆಸಬೇಕು ಎಂಬುದನ್ನು ತೀರ್ಮಾನಿಸುತ್ತವೆ ಮತ್ತು ಅತ್ಯಂತ ವಿಹಿತ ವಾದ ರೂಪಗಳು ಮತ್ತು ವಿಧಾನಗಳನ್ನು ಆರಿಸಿಕೊಳ್ಳುತ್ತವೆ, ಉದಾಹರಣೆಗೆ, ಸಮಾಜ ವಾದೀ ದೇಶವೊಂದರಲ್ಲಿ ಏಕಪಕ್ಷೀಯ ಅಥವಾ ಬಹುಪಕ್ಷೀಯ ವ್ಯವಸ್ಥೆಯ ಆಯ್ಕೆಯು, ಆ ದೇಶದ ನಿರ್ದಿಷ್ಟವಾದ ಐತಿಹಾಸಿಕ ಪರಂಪರೆಗಳ ಮೇಲೆ ಅವಲಂಬಿತವಾಗಿರುತ್ತವೆ.

ಪ್ರತಿ ಸಮಾಜವಾದಿ ದೇಶದಲ್ಲೂ ಸಮಾಜವಾದಿ ಸಂಬಂಧಗಳು ಬಲಗೊಂಡಂತೆ, ಸಮಾಜವಾದಿ ಪೂರ್ವದ ಜಗತ್ತಿನಲ್ಲಿದ್ದ ಸ್ಥಿತಿಗಿಂತ ಭಿನ್ನವಾಗಿರುವ ಲಕ್ಷಣಗಳು ಸಹಜವಾಗಿಯೇ ಹೆಚ್ಚು ಹೆಚ್ಚಾಗಿ ಕಂಡು ಬರುತ್ತವೆ.

ಉದಾಹರಣೆಗೆ, ಸಮಾಜವಾದಿ ದೇಶಗಳಲ್ಲಿ ಸಮಾಜದ ಸಾಮಾಜಿಕ ರಚನೆಯು ಅಧಿಕಾಧಿಕವಾಗಿ ಒಂದೇತರನಾಗುತ್ತಿದೆ. ಈ ದೇಶಗಳಲ್ಲಿ ಶೋಷಕ ವರ್ಗಗಳಿಲ್ಲ, ಕಾರ್ಮಿಕವರ್ಗ ಮತ್ತು ಸಹಕಾರಗಳಲ್ಲಿ ಒಂದುಗೂಡಿರುವ ರೈತರು, ಹೀಗೆ ಎರಡು ಮೈತ್ರಿ ವರ್ಗಗಳು ಮಾತ್ರ ಇವೆ. ಸಮಾಜವಾದ ಮತ್ತು ಕಮ್ಯೂನಿಸ್ಟ್ ನಿರ್ಮಾಣ ಕಾಲದಲ್ಲಿ ಸಂಖ್ಯಾ ಬಲದಲ್ಲೂ ಮತ್ತು ಪಾತ್ರ ದಲ್ಲೂ ಕಾರ್ಮಿಕ ವರ್ಗವು ಗಣನೀಯವಾದಿ ಬೆಳೆಯುತ್ತದೆ: ಅದು ರೈತರು ಮತ್ತು ಬುದ್ಧಿ ಜೀವಿಗಳೊಂದಿಗೆ ಮೈತ್ರಿಯಿಂದ ಕಾರ್ಯ ನಿರ್ವಹಿಸುತ್ತದೆ ಮತ್ತು ಸಾಮಾಜಿಕ ಬೆಳವಣಿಗೆ ಯಲ್ಲಿ ಅಗ್ರಗಾಮಿ ಶಕ್ತಿಯಾಗಿರುತ್ತದೆ. ಪ್ರತ್ಯೇಕ ವರ್ಗಗಳು ಮತ್ತು ಸಾಮಾಜಿಕ ತಂಡಗಳ

ಮಧ್ಯೆ ಇರುವ ಕೆಲವು ವ್ಯತ್ಯಾಸಗಳನ್ನು ನಿವಾರಿಸುವತ್ತ ಪ್ರವೃತ್ತಿ ಬೆಳೆಯುತ್ತಿದೆ.

ರಾಜಕೀಯ ಜೀವನದಲ್ಲಿ, ಸಮಾಜವಾದಿ ದೇಶಗಳು ವಿಕಾಸಗೊಂಡಂತೆ, ಸಮಾಜವಾದಿ ಪ್ರಜಾಪ್ರಭುತ್ವದ ಸೂತ್ರಗಳು ಪ್ರಬಲವಾಗಿ ಬೆಳೆಯುತ್ತವೆ ಮತ್ತು ಸಾರ್ವಜನಿಕ ಸಂಘಟನೆಗಳು ಮತ್ತು ಇತರ ದುಡಿಯುವ ಜನರ ಸಂಸ್ಥೆಗಳು ಆಣಿ ನೆರೆದಿರುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಾರ್ಟಿಯ ನಾಯಕತ್ವದ ಪಾತ್ರವು ಬೆಳೆಯುತ್ತದೆ.

ಸಮಾಜವಾದಿ ರಾಷ್ಟ್ರಗಳ ಆರ್ಥಿಕಗಳಲ್ಲಿ ಏಕ ರೀತಿಯ ಲಕ್ಷಣಗಳು ಹೆಚ್ಚು ಹೆಚ್ಚಾಗಿ ಕಂಡು ಬರುತ್ತಿರುವಂತೆ ಕ್ರಮೇಣ ಅವುಗಳ ಆರ್ಥಿಕ ಬೆಳವಣಿಗೆಯೂ ಹೆಚ್ಚು ಸಮಾನವಾಗುತ್ತವೆ. ಅವುಗಳ ರಾಷ್ಟ್ರೀಯ ಸಂಸ್ಕೃತಿಗಳ ಬೆಳವಣಿಗೆಯಲ್ಲೂ ಏಕೀಕೃತ ಲಕ್ಷಣಗಳು ಮತ್ತು ಪ್ರವೃತ್ತಿಗಳು ಉದಯಿಸುತ್ತವೆ.

ಸಮಾಜವಾದಿ ದೇಶಗಳು ಹೆಚ್ಚು ಹೆಚ್ಚಾಗಿ ಸಮೀಪಕ್ಕೆ ಬರುತ್ತಿವೆಯೆಂದ ಮಾತ್ರಕ್ಕೆ, ಅವುಗಳ ಪ್ರತ್ಯೇಕ ಲಕ್ಷಣಗಳನ್ನು ಅಳಿಸಿಹಾಕಲಾಗುತ್ತಿದೆ ಎಂದು ಅರ್ಥವೇನಲ್ಲ ಮತ್ತು ಅವುಗಳ ಐತಿಹಾಸಿಕ ಹಾಗೂ ರಾಷ್ಟ್ರೀಯ ವೈಶಿಷ್ಟ್ಯಗಳನ್ನು ಮತ್ತು ನಿರ್ದಿಷ್ಟ ಹಿತಾಸಕ್ತಿಗಳನ್ನು ಕಡೆಗಣಿಸಲಾಗುತ್ತಿದೆ ಎಂದೇನಲ್ಲ. ಸಹಜವಾಗಿಯೇ, ಸಮಾಜವಾದಿ ದೇಶಗಳು ನಿಕಟವಾಗಿ ಒಂದಾಗುವುದು ಸುದೀರ್ಘವಾದ ಪ್ರಕ್ರಿಯೆಯಾಗಿರುತ್ತದೆ.

ಸಮಾಜವಾದಿ ದೇಶಗಳ ಸಾಮಾಜಿಕ ಮತ್ತು ರಾಜಕೀಯ ಹೊಂದಾಣಿಕೆಯಲ್ಲಿ, ಇತ್ತೀಚೆಗಿನ ಏಕಪ್ರಕಾರವಾದ, ಗಣನೀಯ ಪ್ರಗತಿಯು ಸಮ ಮಟ್ಟಗೊಳಿಸುವುದಕ್ಕೆ ಎಡೆಕೊಟ್ಟಿಲ್ಲ. ಪ್ರತಿಯಾಗಿ, ಹೊಸ ಸಮಾಜದ ವಿಕಾಸದಲ್ಲಿ ಇರುವ ವಿಶಿಷ್ಟವಾದ ಪ್ರಭುತ್ವ, ಶಾಸನ ಮತ್ತು ಇತರ ರೂಪಗಳಲ್ಲಿ ವೈವಿಧ್ಯತೆಯ ಬೆಳವಣಿಗೆ ತೋರಿಸುತ್ತದೆ. ವಿಶಿಷ್ಟವಾಗಿ, ಇದು ಬಹುತೇಕ ಸಮಾಜವಾದಿ ದೇಶಗಳಲ್ಲಿ ಅಂಗೀಕರಿಸಲಾಗಿರುವ ಹೊಸ ಸಂವಿಧಾನಗಳು ಮತ್ತು ಇತರ ಕಾನೂನುಗಳಲ್ಲಿ ಅಭಿವ್ಯಕ್ತಗೊಂಡಿದೆ.

ಸಮಾಜವಾದಿ ಸಮುದಾಯದ ಜನತೆಯ ಐಕ್ಯತೆಯು ಬಲಗೊಂಡಂತೆ, ಅವು ತಮ್ಮ ಸಮಾಜವಾದಿ ಪ್ರಭುತ್ವ ವ್ಯವಸ್ಥೆ ಮತ್ತು ರಾಷ್ಟ್ರೀಯ ಸಂಸ್ಕೃತಿಯನ್ನು ಹೆಚ್ಚು ವಿಶ್ವಾಸವಾಗಿ ಮತ್ತು ಯಶಸ್ವಿಯಾಗಿ ವಿಕಾಸಗೊಳಿಸ ಬಲ್ಲವು ಮತ್ತು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಅವುಗಳ ಸ್ಥಾನಗಳು ಹೆಚ್ಚು ಅನುಕೂಲಕರವಾಗಿರುವುವು ಎಂಬುದ ಇತ್ತೀಚಿನ ದಶಕಗಳ ಅನುಭವವು ದೃಢಗೊಳಿಸಿವೆ.

# ಆರ್ಥಿಕ ನೆರವು : ಸಹಕಾರದ ವಿಧಾನಗಳು

## ರಾಜಕೀಯಕ್ಕಿಂತ ಆರ್ಥಿಕದಲ್ಲೇ ಹೆಚ್ಚು ಆಸಕ್ತಿ

ಹೊಸ ಮಾದರಿಯ ಅಂತರರಾಷ್ಟ್ರೀಯ ಸಂಬಂಧಗಳ ವಿಕಾಸದಲ್ಲಿ ವಿಶಿಷ್ಟವಾಗಿರುವ ಲಕ್ಷಣವೇನೆಂದರೆ ಅವು ಹೆಚ್ಚು ಸಮಗ್ರವಾಗುತ್ತಿರುವುದಾಗಿದೆ. ಸಮಾಜವಾದಿ ದೇಶಗಳ ನಡುವೆ ರಾಜಕೀಯ ಮತ್ತು ಸೈದ್ಧಾಂತಿಕ ಸಹಕಾರವು, ರಾಷ್ಟ್ರಗಳ ನಡುವೆ ಸರ್ವ ವ್ಯಾಪಿಯಾದ ಫಲಪ್ರದವಾದ ಸಂಬಂಧಗಳಿಗೆ ಹೊಸ ಭೌತಿಕ ಸಾಧ್ಯತೆಗಳನ್ನು ಉಂಟು ಮಾಡುವುದಕ್ಕೆ ಎಡೆಕೊಡುವ ವಿಸ್ತಾರಗೊಳ್ಳುತ್ತಿರುವ ಆರ್ಥಿಕ ಸಂಬಂಧಗಳ ಮೇಲೆ ದೃಢವಾದ ಆಧಾರಗೊಂಡಿದೆ. ಸೋದರ ಸಮಾಜವಾದಿ ದೇಶಗಳ ಉತ್ಪಾದನಾ ವ್ಯವಸ್ಥೆಗಳಲ್ಲಿ ಹೊಂದಾಣಿಕೆಯ ಪರಿಣಾಮವಾಗಿ ಈ ಸಾಧ್ಯತೆಗಳು ಬೆಳೆಯುತ್ತವೆ ಮತ್ತು ಅವುಗಳ ಆರ್ಥಿಕ ಹಾಗೂ ಸಾಮಾಜಿಕ ವಿಕಾಸದ ಮಟ್ಟಗಳು ಕ್ರಮೇಣ ಹೆಚ್ಚು ಹೆಚ್ಚು ಸಮವಾಗುತ್ತವೆ. ಅಂತರ ರಾಷ್ಟ್ರೀಯ ಉತ್ಪಾದನಾ ಸಂಬಂಧಗಳ ಬೆಳವಣಿಗೆ, ಸಾರಿಗೆ, ಸಂಪರ್ಕಗಳ ವಿಕಾಸ ಮತ್ತು ಜನತೆಯ ಸಂಕ್ಷೇಮಗಳ ವರ್ಧನೆ ಇವುಗಳಿಂದಲೂ ಅವು ಬೆಳೆಯುತ್ತವೆ.

ಹೀಗೆ, ಸಮಾಜವಾದಿ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರವು ಹೊಸ ಅಂತರರಾಷ್ಟ್ರೀಯ ಸಂಬಂಧಗಳ ಪ್ರಬಲ ಅಂಶವಾಗಿರುತ್ತದೆ ಮತ್ತು ಒಂದು ಅವಶ್ಯಕವಾದ ಭಾಗವಾಗಿರುತ್ತದೆ. "ವಾಣಿಜ್ಯ ವ್ಯವಹಾರಗಳ ವಿಷಯಗಳು ನಮ್ಮ ಏಕೈಕ ಕಾಳಜಿಯಾಗಿರುತ್ತವೆ. ಈ ರಾಜಕೀಯವು ನಮಗೆ ಅತ್ಯಾಸಕ್ತಿಯದಾಗಿರುತ್ತದೆ" * ಎಂಬ ಲೆನಿನರ ಹೇಳಿಕೆಯು ಇಂದಿನ ಪರಿಸ್ಥಿತಿಗಳಲ್ಲಿ ಹೆಚ್ಚು ಸಮಂಜಸವಾದುದೂ ಮತ್ತು ಅಗತ್ಯವಾದುದೂ ಆಗುತ್ತಿದೆ. ಸಮಾಜವಾದಿ ಮಾದರಿಯಲ್ಲಿ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳನ್ನು ಸ್ಥಾಪಿಸುವ ಮತ್ತು ವಿಕಾಸಗೊಳಿಸುವ ಕ್ಷೇತ್ರದಲ್ಲಿ ಸಮಾಜವಾದಿ ದೇಶಗಳು ಮಾಡಿರುವ ಮತ್ತು ಮಾಡುತ್ತಿರುವ ಎಲ್ಲವೂ, ಮಾರ್ಕ್ಸ್‌ರವರು ತಮ್ಮ ಕಾಲದಲ್ಲಿ ಸೂಚಿಸಿದ್ದಂಥ ಉತ್ಪಾದನೆಯ ಸಾಮಾಜಿಕ ರೂಪಗಳಲ್ಲಿ "ಸಮಂಜಸವಾದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಯೋಗ"ವನ್ನು ಸಾಧಿಸುವುದಕ್ಕೆ ಅಗತ್ಯವಾದ ಕ್ರಮಗಳಾಗಿವೆ.

---

* ವಿ. ಐ. ಲೆನಿನ್, ಸಂಕಲಿತ ಕೃತಿಗಳು ಸಂ. 32, ಪುಟ. 430

ಯುದ್ಧಾನಂತರದ ವರ್ಷಗಳಲ್ಲಿ ಪ್ರಾರಂಭಿಸಲಾಗಿರುವ ಅದು ದೀರ್ಘಾವಧಿಯ ಮತ್ತು ಜಟಿಲವಾದ ಪ್ರಕ್ರಿಯೆಯಾಗಿರುತ್ತದೆ. ಹೊಸ ಸಾಮಾಜಿಕ ವ್ಯವಸ್ಥೆಯ ನಿರ್ಮಾಣವನ್ನು ಪ್ರಾರಂಭಿಸಿದ ದೇಶಗಳು ಯುದ್ಧ ಮತ್ತು ಅದರ ಸಂಕಷ್ಟಗಳಿಂದಾಗಿ ದುರ್ಬಲಗೊಂಡಿದ್ದು ವಷ್ಟೇ ಅಲ್ಲದೆ, ತಮ್ಮೊಳಗೆ ಹಾಗೂ ಸೋವಿಯೆತ್ ಒಕ್ಕೂಟದೊಂದಿಗೆ ಸಾಕಷ್ಟು ವಿಕಾಸಗೊಂಡಿದ್ದ ಆರ್ಥಿಕ ಸಂಬಂಧಗಳನ್ನು ಹೊಂದಿರಲಿಲ್ಲ. ಪೂರ್ವ ಯುರೋಪಿನ ದೇಶ ಗಳು ಬಂಡವಾಳಶಾಹಿ ಜಗತ್ತಿನ ಆರ್ಥಿಕ ಹಾಗೂ ಅದರ ಎಲ್ಲ ಅನಿಷ್ಟ ಪರಿಣಾಮಗಳ ಗಾಢ ವಾದ ಛಾಯೆಯನ್ನು ಹೊಂದಿದ್ದುವು. ಅವುಗಳ ಆರ್ಥಿಕ ವ್ಯವಸ್ಥೆಗಳು ಮುಂದುವರಿದ ಬಂಡವಾಳಶಾಹಿ ದೇಶಗಳೊಂದಿಗೆ ಸಂಬಂಧಿಸಿದ್ದುವು ಅಥವಾ ಅವುಗಳ ಮೇಲೆ ಅವಲಂಬಿತ ವಾಗಿದ್ದವು.

ಪ್ರಾರಂಭದಲ್ಲಿ, ಸಮಾಜವಾದಿ ದೇಶಗಳ ಮಧ್ಯೆ ಆರ್ಥಿಕ ಸಂಬಂಧಗಳು ದ್ವಿಪಕ್ಷೀಯ ಸ್ವಭಾವದ್ದಾಗಿದ್ದುವು. ಸರಕುಗಳ ಸರಬರಾಜು ಮತ್ತು ಆರ್ಥಿಕ ನೆರವಿಗಷ್ಟಕ್ಕೇ ಸೀಮಿತಗೊಂಡಿ ದ್ದುವು. ಸಮಾಜವಾದಿ ಮಾರುಕಟ್ಟೆ ಇನ್ನೂ ಉದಯಿಸುತ್ತಿತ್ತು. ಹಾಗಿದ್ದರೂ ಆಗಲೇ ಬಹು ಪಕ್ಷೀಯ ಆಧಾರದ ಮೇಲೆ ನಿಕಟವಾದ ಸಂಯೋಜನೆಯ ಅವಶ್ಯಕತೆಯು ಅರಿವಾಗಿತ್ತು. ಸಮಾಜವಾದಿ ದೇಶಗಳ ನಡುವೆ ಸಮಾಲೋಚನೆಗಳು ಕ್ರಮಬದ್ಧವಾದ ರೀತಿಯಲ್ಲಿ ಆಚರಣೆಗೆ ಬಂದಿದ್ದುವು. 1949 ರ ಡಿಸೆಂಬರ್‌ನಲ್ಲಿ ಆಲ್ಬೇನಿಯ, * ಬಲ್ಗೇರಿಯ, ಚೆಕೊಸ್ಲೋ ವಾಕಿಯ, ಹಂಗೆರಿ, ರುಮೇನಿಯ. ಪೋಲೆಂಡ್ ಮತ್ತು ಸೋವಿಯೆತ್ ಒಕ್ಕೂಟದ ಪ್ರತಿನಿಧಿ ಗಳ ಸಮ್ಮೇಳನವೊಂದು ಮಾಸ್ಕೋದಲ್ಲಿ ಜರುಗಿತು. ಅದು ಪರಸ್ಪರ ಆರ್ಥಿಕ ಸಹಾಯ ಮಂಡಲಿ (ಸಿಎಂಇಎ), ಎಂಬ ಅಪೂರ್ವವಾದ ಅಂತರರಾಷ್ಟ್ರೀಯ ಸಂಘಟನೆಯೊಂದನ್ನು ಸ್ಥಾಪಿಸಿತು.

1950 ರಲ್ಲಿ ಜರ್ಮನ್ ಜನವಾದಿ ಗಣರಾಜ್ಯ, 1962 ರಲ್ಲಿ ಮಂಗೋಲಿಯ, 1972 ರಲ್ಲಿ ಕ್ಯೂಬಾ ಮತ್ತು 1978 ರಲ್ಲಿ ವಿಯೆತ್ನಾಮ್ ಸಮಾಜವಾದಿ ಗಣರಾಜ್ಯ ಇವುಗಳು 'ಸಿಎಂಇಎ'ಯ ಸದಸ್ಯರಾಗಿ ಸೇರಿಕೊಂಡುವು. ಈಗ ಒಟ್ಟು ಸುಮಾರು 450 ಮಿಲಿಯ ಜನ ಸಂಖ್ಯೆಯನ್ನಾವರಿಸಿರುವ ಹತ್ತು ದೇಶಗಳು, 'ಸಿಎಂಇಎ' ಸದಸ್ಯನಾಗಿವೆ.

'ಸಿಎಂಇಎ' ತನ್ನ 35 ವರ್ಷಗಳ ಅಸ್ತಿತ್ವದಲ್ಲಿ ಪರಸ್ಪರ ಆರ್ಥಿಕ ಸಹಾಯಕ್ಕೆ ಸೂಚಕ ವಾಗಿದೆಯಷ್ಟೇ ಅಲ್ಲದೆ, ಯುದ್ಧಾನಂತರದ ಪುನರುಜ್ಜೀವನೆಯ ಕಠಿಣವಾದ ಕಾಲದಲ್ಲಿ ಸಂಸ್ಥೆಯ ಚಟುವಟಿಕೆಗಳು ಅತ್ಯಂತ ಮುಖ್ಯವಾದ ಪಾತ್ರವನ್ನು ನಿರ್ವಹಿಸಿವೆ. ವಿದೇಶೀ ವಾಣಿಜ್ಯದೊಂದಿಗೆ ಪ್ರಾರಂಭಿಸಿ, 'ಸಿಎಂಇಎ' ದೇಶಗಳು ಸಹಕಾರವನ್ನು ಹೆಚ್ಚುತ್ತಿರುವ ಪ್ರಮಾಣದಲ್ಲಿ ಉತ್ಪಾದನಾ ಕ್ಷೇತ್ರಕ್ಕೆ ಮತ್ತು ರಾಷ್ಟ್ರೀಯ ಆರ್ಥಿಕ ಯೋಜನೆಗಳನ್ನು ಸಮನ್ವ ಯಗೊಳಿಸುವುದಕ್ಕೆ ವಿಸ್ತರಿಸಲಾರಂಭಿಸಿದುವು. 1970 ರ ದಶಕದಲ್ಲಿ, ಯೋಜನೆಗಳನ್ನು ಸಮ ನ್ವಯಗೊಳಿಸುವುದರ ಜೊತೆಗೆ ದೀರ್ಘಾವಧಿಯ ಆರ್ಥಿಕ ನೀತಿಗಳನ್ನು ಸಮನ್ವಯಗೊಳಿಸು ವುದೂ ಅವಶ್ಯಕವೆಂದು 'ಸಿಎಂಇಎ' ದೇಶಗಳು ಪರಿಗಣಿಸಿದುವು.

---

* 1961 ರಲ್ಲಿ ಆಲ್ಬೇನಿಯ ಸಿಎಂಇಎ ಸಂಪರ್ಕಗಳನ್ನು ತೊರೆದುಕೊಂಡಿತು,

# ಸಮಾಜವಾದಿ ಆರ್ಥಿಕ ಏಕೀಕರಣ



1950 ರ ದಶಕದ ಕೊನೆಯಲ್ಲಿ 'ಸಿಎಂಇಎ' ದೇಶಗಳು ಸಮಾಜವಾದಿ ಆರ್ಥಿಕ ಏಕೀಕರಣದ ಪಥದಲ್ಲಿ ಅಡಿಯಿರಿಸಿದುವು. 1971 ರಲ್ಲಿ ಅಂಗೀಕರಿಸಲಾದ ಸಮಗ್ರವಾದ ಕಾರ್ಯಕ್ರಮದಲ್ಲಿ ಅದರ ಪ್ರಧಾನ ಪ್ರವೃತ್ತಿಗಳು ಮತ್ತು ಗುರಿಗಳನ್ನು ನಿರೂಪಿಸಲಾಯಿತು. ಕಳೆದ ಕೆಲವು ವರ್ಷಗಳಲ್ಲಿ 'ಸಿಎಂಇಎ' ದೇಶಗಳು ತಮ್ಮ ಸ್ವಾನುಭವದಿಂದ ಏಕೀಕರಣದ ಅಪಾರವಾದ ಅನುಕೂಲಗಳನ್ನು ಅರಿತಿವೆ. ಇಂಧನ ಮತ್ತು ಕಚ್ಚಾ ಮಾಲುಗಳ ಅವಶ್ಯಕತೆಯಲ್ಲಿ ಶೇ 90 ರಷ್ಟು ಪಾಲನ್ನು ಸಮಾಜವಾದಿ ಸಮುದಾಯವು ಪೂರಯಿಸುತ್ತಿದೆ. ದುಡಿಮೆಯ ಸಮಾಜವಾದಿ ಅಂತರರಾಷ್ಟ್ರೀಯ ವಿಂಗಡಣೆಯಿಂದಾಗಿ, 'ಸಿಎಂಇಎ' ಸದಸ್ಯ ರಾಷ್ಟ್ರಗಳು ಯಂತ್ರೋಪಕರಣಗಳ ತಮ್ಮ ಆಮದು ಅವಶ್ಯಕತೆಗಳಲ್ಲಿ ಮೂರನೇ ಎರಡು ಭಾಗವನ್ನು ಪೂರಯಿಸುತ್ತಿವೆ. ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರವು, ವಿಶೇಷವಾಗಿ, ಅತಿ ಮುಖ್ಯವಾದ ಕ್ಷೇತ್ರಗಳಾದ ನ್ಯೂಕ್ಲಿಯರ್ ಪವರ್ ಇಂಜನಿಯರಿಂಗ್, ಮೈಕ್ರೋ ಇಲೆಕ್ಟ್ರಾನಿಕ್ಸ್ ಮತ್ತು ರೊಬೋಟಿಕ್ಸ್ ಇವುಗಳಲ್ಲಿ ಉತ್ತಮವಾದ ಫಲಿತಾಂಶಗಳನ್ನು ನೀಡುತ್ತಿವೆ. 'ಸಿಎಂಇಎ' ತನ್ನದೇ ಆದ ಅಂತರರಾಷ್ಟ್ರೀಯ ಆರ್ಥಿಕ ಸಂಘಟನೆಗಳನ್ನು ಹೊಂದಿದೆ. 'ಸಿಎಂಇಎ' ಯ ಚಟುವಟಿಕೆಗಳ ಫಲಿತಾಂಶಗಳೇ ಅದನ್ನು ಸಾರುತ್ತವೆ. 1950 ಕ್ಕೆ ಹೋಲಿಸಿದಲ್ಲಿ ಸಿಎಂಇಎ' ದೇಶಗಳ ಕೈಗಾರಿಕಾ ಉತ್ಪಾದನೆಯು 13 ಪಟ್ಟು ಹೆಚ್ಚಿದೆ ಮತ್ತು ರಾಷ್ಟ್ರೀಯ ವರಮಾನವು ಎಂಟು ಪಟ್ಟಿಗೂ ಹೆಚ್ಚು ಬೆಳೆದಿದೆ. 1982 ರಲ್ಲಿ 'ಸಿಎಂಇಎ' ದೇಶಗಳ ವಾಣಿಜ್ಯ ವಹಿವಾಟು 150,000 ಮಿಲಿಯ ರೂಬಲುಗಳಾಗಿದ್ದುವು, ಅರ್ಥಾತ್ ಅದು ಪ್ರಾರಂಭದ ಅಂಕಿ ಅಂಶಗಳಿಗೆ ಹೋಲಿಸಿದಲ್ಲಿ 30 ಪಟ್ಟು ಹೆಚ್ಚಿದ್ದುವು. ಬೇರೆ ಯಾವ ತಂಡದ ದೇಶಗಳೂ ಅಷ್ಟು ಹೆಚ್ಚು ಬೆಳವಣಿಗೆಯ ಪ್ರಮಾಣಗಳನ್ನು ಹೇಳಿಕೊಳ್ಳಲಾರವು. ಉದಾಹರಣೆಗೆ, 1970 ಕ್ಕೆ ಹೋಲಿಸಿದಲ್ಲಿ, ಸಮಾಜವಾದಿ ಸಮುದಾಯದಲ್ಲಿ ಕೈಗಾರಿಕಾ ಉತ್ಪಾದನೆಯು ಹೆಚ್ಚು ಕಡಿಮೆ ಎರಡು ಪಟ್ಟು ವರ್ಧಿಸಿದೆ, ಆದರೆ ಅದೇ ಅವಧಿಯಲ್ಲಿ ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಹೆಚ್ಚಳವು ಮೂರನೇ ಒಂದು ಭಾಗಕ್ಕಿಂತ ಕಮ್ಮಿಯಾಗಿದೆ.

ತತ್ಪರಿಣಾಮವಾಗಿ, ನಾನಾ 'ಸಿಎಂಇಎ' ದೇಶಗಳ ಆರ್ಥಿಕಾಭಿವೃದ್ಧಿಯ ಮಟ್ಟಗಳ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡುವ ಕಾರ್ಯಭಾರವನ್ನು ನಿರ್ವಹಿಸುವುದರಲ್ಲಿ ಸಾಕಷ್ಟು ಸಾಧನೆಯಾಗಿದೆ. ಉದಾಹರಣೆಗೆ, ತಲಾ ಒಂದರಂತೆ ರಾಷ್ಟ್ರೀಯ ವರಮಾನವನ್ನು ತೆಗೆದುಕೊಳ್ಳೋಣ. 'ಸಿಎಂಇಎ' ಚೌಕಟ್ಟಿನೊಳಗೆ ಸಮಾಜವಾದಿ ಸಹಕಾರವನ್ನು ಮೊದಲು ಪ್ರಾರಂಭ ಮಾಡಿದಾಗ ತಲಾ ಒಂದರಂತೆ ರಾಷ್ಟ್ರೀಯ ವರಮಾನದ ಕನಿಷ್ಠ ಮತ್ತು ಗರಿಷ್ಠ ಪ್ರಮಾಣಗಳು 1:3 ರಷ್ಟಿತ್ತು, ಈಗ ಅದು 1:1.5 ರಷ್ಟಾಗಿದೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಸಮಾಜವಾದಿ ದೇಶಗಳ ಆರ್ಥಿಕ ಸ್ಥಾನಗಳು ಏಕಪ್ರಕಾರವಾಗಿ ಬಲಗೊಂಡಿವೆ.'ಸಿಎಂಇಎ'ಯನ್ನು ಸ್ಥಾಪನೆ ಮಾಡಿದ 1949ನೇ ಸಾಲಿನಲ್ಲಿ, ಪ್ರಪಂಚದ ಕೈಗಾರಿಕಾ ಉತ್ಪಾದನೆಯಲ್ಲಿ ಅದರ ಸದಸ್ಯ ರಾಷ್ಟ್ರಗಳ ಪಾಲು ಶೇ 18ರಷ್ಟಾಗಿತ್ತು. ಇಂದು ಅದು ಆದಕ್ಕೆ ಸುಮಾರು ಎರಡರಷ್ಟಾಗಿದೆ

ಮತ್ತು ಪ್ರಪಂಚದ ಮರಮಾನದಲ್ಲಿ ಸಿಎಂಇಎ'ಯು ಮೂರು ರಾಲು ಭಾಗದಷ್ಟಾಗಿದೆ. ಪ್ರಪಂಚದ ಜನಸಂಖ್ಯೆಯಲ್ಲಿ ಶೇ 9.8 ರಷ್ಟು ಜನಮಾತ್ರ 'ಸಿಎಂಇಎ' ದೇಶಗಳಲ್ಲಿದ್ದಾರೆಂಬು ದನ್ನು ಗಮನಿಸಬೇಕು.

ಉತ್ಪಾದನಾ ಸಾಮರ್ಥ್ಯಗಳನ್ನು ಸಂಯುಕ್ತವಾಗಿ ವಿಕಾಸಗೊಳಿಸುವುದಕ್ಕೆ ಪ್ರಯತ್ನಗಳು ಮತ್ತು ಸಂಪನ್ಮೂಲಗಳನ್ನು ಸಂಯೋಜಿಸುವುದರಲ್ಲಿ 'ಸಿಎಂಇಎ' ದೇಶಗಳ ಸಾಧನೆಗಳು ಗಮ ನಾರ್ಹವಾದುದಾಗಿವೆ. ವಿಶೇಷವಾಗಿ, ಇಂಧನ ಮತ್ತು ವಿದ್ಯುಚ್ಛಕ್ತಿ ಕೈಗಾರಿಕೆಗಳಲ್ಲಿ, 'ದ್ರೂಜ್ಬಾ' ತೈಲ ಕೊಳವೆ ಮಾರ್ಗದ ನಿರ್ಮಾಣದಲ್ಲಿ, 'ಸೊಯುಜ್' ಇಂಧನಾನಿಲ ಕೊಳವೆ ಮಾರ್ಗದ ನಿರ್ಮಾಣದಲ್ಲಿ, 'ಮಿರ್' ವಿದ್ಯುತ್ ಗ್ರಿಡ್ ಸ್ಥಾಪನೆಯಲ್ಲಿ, ಕಿಯೆಂಬಾಯ್ ಆಸ್ಬೆ ಸ್ಟಾಸ್ ಗಣಿಗಾರಿಕೆ ಮತ್ತು ಸಂಸ್ಕರಣ ಸಂಕೀರ್ಣದ ಸ್ಥಾಪನೆಯಲ್ಲಿ, ಸೋವಿಯೆತ್ ಒಕ್ಕೂಟ ದಲ್ಲಿ ಉಸ್ತ್-ಇಲಿಮ್‌ಸ್ಕ ಸೆಲ್ಯುಲೋಸ್ ಸ್ಥಾವರದ ನಿರ್ಮಾಣದಲ್ಲಿ, ಮಂಗೋಲಿಯಾದಲ್ಲಿ ಎರ್ದನೆತ್ ಗಣಿಗಾರಿಕೆ ಸಂಕೀರ್ಣ ಮತ್ತು ಕ್ಯೂಬಾದಲ್ಲಿ ನಿಕ್ಕಲ್ ಸ್ಥಾವರದ ಸ್ಥಾಪನೆಯಲ್ಲಿ ಇವನ್ನು ಕಾಣಬಹುದಾಗಿದೆ. ಪರಂಪರಾಗತವಲ್ಲದ ವಿದ್ಯುತ್ ಆಕರಗಳು ಮತ್ತು ನ್ಯೂಕ್ಲಿ ಯರ್ ಇಂಜನಿಯರಿಂಗ್‌ನ ವಿಕಾಸದಲ್ಲಿಯೂ 'ಸಿಎಂಇಎ' ದೇಶಗಳು ಸಾಕಷ್ಟು ಪ್ರಗತಿಯನ್ನು ಸಾಧಿಸಿವೆ. ಸೋವಿಯೆತ್ ನೆರವಿನಿಂದ ಬಲ್ಗೇರಿಯ, ಜರ್ಮನ್ ಜನವಾದಿ ಗಣರಾಜ್ಯ ಮತ್ತು ಚೆಕೊಸ್ಲೋವಾಕಿಯಾಗಳಲ್ಲಿ ನಿರ್ಮಿಸಲಾಗಿರುವ ನ್ಯೂಕ್ಲಿಯರ್ ವಿದ್ಯುತ್ ಸ್ಥಾವರಗಳು ಸಾಕಷ್ಟು ದೀರ್ಘ ಕಾಲದಿಂದ ನಂಬಿಕಾರ್ಹವಾಗಿ, ತೊಂದರೆಗಳಿಲ್ಲದೆ ಕೆಲಸ ಮಾಡುತ್ತಿವೆ. ಸುಮಾರು 23 ಮಿಲಿಯ ಕಿಲೊವಾಟ್'ಗಳ ಒಟ್ಟು ಸಮರ್ಥತೆ ಹೊಂದಿರುವ ನ್ಯೂಕ್ಲಿಯರ್ ವಿದ್ಯುತ್ ಸ್ಥಾವರಗಳ 36 ವಿದ್ಯುತ್ ಘಟಗಳನ್ನು ಸ್ಥಾಪಿಸುವ ಕಾರ್ಯ ಈಗ 'ಸಿಎಂಇಎ' ದೇಶಗಳಲ್ಲಿ ನಡೆಯುತ್ತಿವೆ. ಇತ್ತೀಚೆಗೆ, ನ್ಯೂಕ್ಲಿಯರ್ ವಿದ್ಯುಚ್ಛಕ್ತಿ ಸ್ಥಾವರವನ್ನು ಉತ್ಪಾದ ನೆಯಲ್ಲಿ ತೊಡಗಿಸಿರುವ ಹಂಗೆರಿ, ಐದನೆ ಸಮಾಜವಾದಿ ದೇಶವಾಗಿದೆ.

ಇತರ ಅನೇಕವುಗಳಂತೆ, ಈ ಉದಾಹರಣೆಗಳು, ಸಮಾಜವಾದಿ ದೇಶಗಳ ಕಮ್ಯೂ ನಿಸ್ಟ್ ಪಾರ್ಟಿಗಳು ಏಕೆ 'ಸಿಎಂಇಎ'ಯ ಸಾಧನೆಗಳನ್ನು ಅಷ್ಟು ಉನ್ನತವಾಗಿ ಪ್ರಶಂಸಿಸುತ್ತವೆ ಮತ್ತು ವಿಕಸಿತ ಸಮಾಜವಾದವನ್ನು ನಿರ್ಮಿಸುವ ಮತ್ತು ಉತ್ತಮಗೊಳಿಸುವ ಸಂಕೀರ್ಣ ವಾದ ಮತ್ತು ದೊಡ್ಡ ಪ್ರಮಾಣದ ಕಾರ್ಯಭಾರಗಳನ್ನು ಬಗೆಹರಿಸುವುದರಲ್ಲಿ ಸರ್ವ ವ್ಯಾಪಿ ಯಾದ ಸಹಕಾರವನ್ನು ಬೆಳೆಸಲು ಎಲ್ಲ ಪ್ರಯತ್ನಗಳನ್ನು ಏಕೆ ಮಾಡುತ್ತವೆ ಎಂಬುದನ್ನು ವಿವರಿಸುತ್ತವೆ.

ಈ ಕಾರ್ಯಗಳು ನಿಜವಾಗಿಯೂ ಸುಲಭವಾದುವೇನಲ್ಲ. ಅನೇಕ ಸಮಾಜವಾದಿ ದೇಶಗಳು ವ್ಯಾಪಕವಾದ ಅಭಿವೃದ್ಧಿಗಾಗಿ ತಮ್ಮ ನಿಕ್ಷೇಪಗಳನ್ನು ಬರಿದು ಮಾಡಿಕೊಂಡಿರುವುದ ರಿಂದ ಮತ್ತು ಕಚ್ಚಾ ಮಾಲುಗಳ ಸಂಗ್ರಹವು ತುಂಬಾ ದುಬಾರಿಯಾಗಿರುವುದರಿಂದ ಹೊಸ ಹಾಗೂ ಹೆಚ್ಚಿನ ಆವಶ್ಯಕತೆಗಳುಂಟಾಗಿವೆ ಎಂಬುದನ್ನು ಅನುಭವವೇ ತೋರಿಸಿಕೊಟ್ಟಿದೆ. ಆದ್ದರಿಂದಾಗಿ, ಆರ್ಥಿಕ ನಿರ್ವಹಣೆಗೆ ಉತ್ತಮವಾದ ವಿಧಾನಗಳನ್ನು ಅರಸುವುದು ಅಗತ್ಯ ವಾಗಿದೆ.

ಅಷ್ಟೇ ಅಲ್ಲದೆ, ಜಾಗತಿಕ ಮಾರುಕಟ್ಟೆಗಳು ಹದಗೆಡುತ್ತಿರುವ ಮತ್ತು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಗಾಢವಾದ ಬಿಕ್ಕಟ್ಟು ಇರುವ ಪರಿಸ್ಥಿಗಳಲ್ಲಿ ಸಮಾಜವಾದಿ ಸಮುದಾಯದ ದೇಶ

ಗಳು ತಮ್ಮ ರಾಷ್ಟ್ರೀಯ ಆರ್ಥಿಕಗಳು ಮತ್ತು ಸಹಕಾರವನ್ನು ವಿಕಾಸಗೊಳಿಸಬೇಕಾಗಿದೆ. ಈ ಪರಿಸ್ಥಿತಿಗಳು 'ಸಿಎಂಇಎ' ದೇಶಗಳಿಗೆ ಪ್ರತಿಕೂಲವಾಗಿವೆ. ಉದಾಹರಣೆಗೆ, ಅವು ಪಶ್ಚಿಮ ರಾಷ್ಟ್ರಗಳಿಗೆ 'ಸಿಎಂಇಎ' ದೇಶಗಳ ರಫ್ತುಗಳಿಗೆ ಹೊಸ ಅಡಚಣೆಗಳನ್ನುಂಟು ಮಾಡುತ್ತವೆ.

1980ರ ದಶಕದ ಪ್ರಾರಂಭದಲ್ಲಿ ಸೋದರ ಸಮಾಜವಾದಿ ದೇಶಗಳಲ್ಲಿ ಜರುಗಿದ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳ ಮಹಾಸಭೆಗಳು, ಮುಂದಿನ ವರ್ಷಗಳಿಗಾಗಿ ಆರ್ಥಿಕ ಗುರಿಗಳನ್ನು ನಿರೂಪಿಸಿವೆ. ದುಡಿಮೆಗಾರರ ಸಂಖ್ಯೆಯನ್ನು ಹೆಚ್ಚಿಸದೆ ಮತ್ತು ಭೌತಿಕ ಸಂಪನ್ಮೂಲಗಳನ್ನು ಹೆಚ್ಚು ವ್ಯಯ ಮಾಡದೆ ಉತ್ಪನ್ನವನ್ನು ಹೆಚ್ಚಿಸುವುದು ಅದರ ಸಾರಾಂಶವಾಗಿದೆ.

ದುಡಿಮೆಯ ಸಮಾಜವಾದಿ ಅಂತರರಾಷ್ಟ್ರೀಯ ವಿಂಗಡಣೆಯಲ್ಲಿ ಅವುಗಳ ರ್ಥವಾಗಿರುವ ನಿಕ್ಷೇಪಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ವ್ಯಾಪಕವಾಗಿ ಬಳಸಿಕೊಳ್ಳಲಾಗುವುದು. 1980 ರ ದಶಕದ ಕಾಲದಲ್ಲಿ ಅಂತರರಾಷ್ಟ್ರೀಯ ಪರಿಣತೆ ಮತ್ತು ಸಹಕಾರವನ್ನು ತೀವ್ರಗೊಳಿಸುವುದು ಅಗತ್ಯವಾಗಿದೆ. ಸಹಕಾರದ ಹೊಸ ರೂಪಗಳನ್ನು ಕಾರ್ಯಗತ ಮಾಡುವುದರಿಂದ, ದೀರ್ಘಾವಧಿಯ ಗುರಿಯುಳ್ಳ ಸಹಕಾರಿ ಕಾರ್ಯಕ್ರಮಗಳು, ದೂರಗಾಮಿಯಾದ ವಿಶೇಷೀಕೃತ ದ್ವಿಪಕ್ಷೀಯ ಕಾರ್ಯಕ್ರಮಗಳು ಮತ್ತು ಉತ್ಪಾದನೆಯಲ್ಲಿ ಸಹಕಾರ ಮೊದಲಾದುವುಗಳಿಂದ ಸಮಗ್ರ ಕಾರ್ಯಕ್ರಮವನ್ನು ಬಲಗೊಳಿಸುವುದು ಮತ್ತು ಅದನ್ನು ಹೆಚ್ಚು ನಿರ್ದಿಷ್ಟಗೊಳಿಸುವುದು, ಇವುಗಳಿಂದ ಈ ಪ್ರಕ್ರಿಯೆಯನ್ನು ಬೆಳೆಸಲಾಗುವುದು.

ಮುಂದುವರಿದ ಬಂಡವಾಳಶಾಹಿ ದೇಶಗಳನ್ನು ಒಳಗೊಂಡು ಎಲ್ಲ ದೇಶಗಳಲ್ಲೂ ಹೆಚ್ಚು ಹೆಚ್ಚಾಗಿ ತೀವ್ರಗೊಳ್ಳುತ್ತಿರುವ ಆರ್ಥಿಕಾಭಿವೃದ್ಧಿಯ ಪ್ರಮುಖ ಸಮಸ್ಯೆಗಳನ್ನು ದೀರ್ಘಾವಧಿಯ ಗುರಿಯುಳ್ಳ ಸಹಕಾರದ ಕಾರ್ಯಕ್ರಮಗಳಿಂದ ಬಗೆಹರಿಸುವುದು ಸಮಾಜವಾದಿ ವಿಧಾನವಾಗಿದೆ. ಇಂಧನ, ಕಚ್ಚಾ ಮಾಲುಗಳು ಮತ್ತು ಆಹಾರ ಸರಬರಾಜು ಮತ್ತು ಸಾಗಾಣಿಕೆ ಮೊದಲಾದ ಕೆಲವು ಸಮಸ್ಯೆಗಳು ತುಂಬಾ ಸಂಕೀರ್ಣ ಸ್ವಭಾವದ್ದಾಗಿವೆ. ದುಡಿಯುವ ಜನರ ಹಿತಾಸಕ್ತಿಗಳಿಗೆ ಯಾವುದೇ ಹಾನಿಯುನ್ನುಂಟುಮಾಡದೆ, ಹಣದುಬ್ಬರ, ನಿರುದ್ಯೋಗ, ಅಪಾಯಕಾರಿಯಾದ ಭೀಕರ ಪೈಪೋಟಿಗಳನ್ನು ಉಂಟುಮಾಡದೆ ಅಂಥ ಸಮಸ್ಯೆಗಳನ್ನು ಬಗೆಹರಿಸುವುದನ್ನು ಅಂತರರಾಷ್ಟ್ರೀಯ ಸಮಾಜವಾದಿ ಸಂಬಂಧಗಳು ಸಾಧ್ಯವಾಗಿಸುತ್ತವೆ.

'ಸಿಎಂಇಎ' ಸದಸ್ಯ ರಾಷ್ಟ್ರಗಳು ಆಧುನಿಕ ಪರಿಸ್ಥಿತಿಯಲ್ಲಿ, ಸಮಾಜವಾದಿ ತತ್ವಗಳ ಮೇಲೆ ಪರಸ್ಪರ ಸಂಬಂಧಗಳನ್ನು ಸ್ಥಾಪಿಸುವುದರ ಫಲಿತಾಂಶಗಳನ್ನು ವಿಶೇಷವಾಗಿ ಮೌಲ್ಯೀಕರಿಸುತ್ತವೆ. ಜಾಗತಿಕ ಮಾರುಕಟ್ಟೆಗಿಂತಲೂ ಹೆಚ್ಚಾಗಿ, ಸಹಕಾರಕ್ಕೆ ಉತ್ತಮವಾದ ಆರ್ಥಿಕ ಸ್ಥಿತಿಗಳನ್ನು ನಿರ್ಮಿಸಲು ಮತ್ತು ಯೋಜನಾ ಬದ್ಧವಾದ ಆಧಾರದ ಮೇಲೆ ಸುಸ್ಥಿರವಾದ ಆರ್ಥಿಕ ಸಂಬಂಧಗಳನ್ನು ಪ್ರೋತ್ಸಾಹಿಸುವುದಕ್ಕೆ ಗಮನಕೊಡುತ್ತವೆ.

ಇಂದು ಆರ್ಥಿಕ ಕ್ಷೇತ್ರದಲ್ಲಿ, ದೀರ್ಘಾವಧಿ ಪ್ರತೀಕ್ಷೆಗಳನ್ನು, ಕಾರ್ಯಗತ ಮಾಡಬಹುದಾದಂಥ ವಾಸ್ತವಿಕ ಗುರಿಗಳನ್ನು ನಿಗಮಾಡುವುದನ್ನು ಮತ್ತು ಸಮರ್ಪಕವಾದ ಕಾರ್ಯಕ್ರಮಗಳನ್ನು ನಿರೂಪಿಸುವುದನ್ನು ಗಮನಕ್ಕೆ ತೆಗೆದುಕೊಂಡು ಪ್ರಚಲಿತ ಸಹಕಾರದ ದೈನಂದಿನ ಪ್ರಶ್ನೆಗಳ ಬಗ್ಗೆ ವಿಶಾಲವಾದ ಧೋರಣೆಯನ್ನು ತಳೆಯುವುದು ಅಗತ್ಯವಿರುವುದರಿಂದ, ಬಹುಮಟ್ಟಿಗೆ 'ಸಿಎಂಇಎ' ದೇಶಗಳು ಅದನ್ನೇ ಮಾಡುತ್ತಿವೆ, ಸೋವಿಯೆತ್ ಸಮಾಜವಾದಿ ಗಣ

ರಾಜ್ಯಗಳ ಒಕ್ಕೂಟ ಮತ್ತು ಪೋಲಿಷ್ ಜನತಾ ಗಣರಾಜ್ಯಗಳ ನಡುವೆ 2000ದ ವರ್ಷದವರೆಗಿನ ಅವಧಿಗೆ ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರದ ವಿಕಾಸಕ್ಕಾಗಿ ರೂಪಿಸಿರುವ ದೀರ್ಘಾವಧಿಯ ಕಾರ್ಯಕ್ರಮವು, ಭವಿಷ್ಯದ ಗುರಿಗಳ ಬಗ್ಗೆ ಪ್ರಾಯೋಗಿಕ ಧೋರಣೆಗೆ ಒಂದು ಉದಾಹರಣೆಯಾಗಿದೆ. ಪೋಲಿಷ್ ಯುನೈಟೆಡ್ ವರ್ಕರ್ಸ್ ಪಾರ್ಟಿ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿ ಹಾಗೂ ಪೋಲಿಷ್ ಜನತಾ ಗಣರಾಜ್ಯದ ಸಚಿವ ಮಂಡಲಿಯ ಅಧ್ಯಕ್ಷರಾದ ವೊಜ್‌ಸೀಕ್ ಜಾರುಜೆಲ್‌ಸ್ಕಿಯವರ ನಾಯಕತ್ವದಲ್ಲಿ 1984ರ ಮೇ ತಿಂಗಳಲ್ಲಿ ಸೋವಿಯೆತ್ ಒಕ್ಕೂಟಕ್ಕೆ ಭೇಟಿ ನೀಡಿದ್ದ ಪೋಲಿಷ್ ಸರಕಾರಿ ನಿಯೋಗವು ಈ ಕಾರ್ಯಕ್ರಮಕ್ಕೆ ಸಹಿ ಹಾಕಿತು.

ಸಹಕಾರದ ನಿರ್ದಿಷ್ಟವಾದ ಕ್ಷೇತ್ರಗಳನ್ನು ನಿಗದಿ ಮಾಡಿರುವ ಈ ದಸ್ತೈವೇಜಿನಲ್ಲಿ ಎರಡೂ ದೇಶಗಳು ಹೀಗೆ ಹೇಳಿವೆ: "ಪರಸ್ಪರ ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರದ ಇನ್ನಷ್ಟು ವಿಸ್ತರಣೆ ಮತ್ತು ವಿಕಾಸವು ಸಮಾಜವಾದಿ ಅರ್ಥಿಕ ವ್ಯವಸ್ಥೆಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಮತ್ತು ಸೋವಿಯೆತ್ ಹಾಗೂ ಪೋಲಿಷ್ ಆರ್ಥಿಕಗಳ ಪರಸ್ಪರ ಕ್ರಿಯೆಯನ್ನು ಬಲಗೊಳಿಸಲು ಗರಿಷ್ಠ ಪ್ರಮಾಣದಲ್ಲಿ ನೆರವಾಗಬೇಕು".

ಪೋಲೆಂಡ್ ಕಷ್ಟಕಾಲದಲ್ಲಿರುವಾಗ, ಜಟಿಲವಾದ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಅದು ತನ್ನ ಆರ್ಥಿಕವನ್ನು ಕ್ರಮೇಣ ಏಕಪ್ರಕಾರವಾದ ವಿಕಾಸದ ಪಥಕ್ಕೆ ತರುವ ಕಾರ್ಯಭಾರವನ್ನು ನೆರವೇರಿಸಬೇಕಾಗಿರುವ ಕಾಲದಲ್ಲಿ, ಸಮಾಜವಾದಿ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳನ್ನು ಉತ್ತಮಗೊಳಿಸುವುದಕ್ಕೆ ಅಂಥ ದೀರ್ಘಾವಧಿಯ ಧೋರಣೆಯು ತುಂಬಾ ಮುಖ್ಯತ್ವವುಳ್ಳದ್ದಾಗಿದೆ. "ಪಾಶ್ಚಿಮಾತ್ಯ ದೇಶಗಳ ಮೇಲೆ ಅವಲಂಬನೆಯಿಂದ ಮುಕ್ತವಾಗಿ ಇನ್ನೂ ಹೆಚ್ಚು ತಾಂತ್ರಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಬಲಗೊಳಿಸಿಕೊಳ್ಳಲು ಮತ್ತು ಅದೇ ಸಮಯದಲ್ಲಿ ಆರ್ಥಿಕ ಸಂಬಂಧಗಳನ್ನು ರಾಜಕೀಯ ಒತ್ತಾಯಕ್ಕೆ ಸಾಧನವಾಗಿ ಬಳಸಿಕೊಳ್ಳಲು ಪ್ರಯತ್ನಿಸದೆ, ಸಮಾನತೆಯ ಆಧಾರದ ಮೇಲೆ ಸಹಕಾರಕ್ಕೆ ಸಿದ್ಧವಾಗಿರುವ ಬಂಡವಾಳಶಾಹಿ ದೇಶಗಳೊಂದಿಗೆ ಪರಸ್ಪರ ಅನುಕೂಲಕರವಾದ ಸಂಬಂಧಗಳ ವಿಸ್ತರಣೆಯನ್ನು ಪ್ರೋತ್ಸಾಹಿಸಲು ಪರಸ್ಪರ ಸಹಕಾರವು ಸಹಾಯಕವಾಗಿರುತ್ತದೆ" ಎಂಬುದಾಗಿ ಸೋವಿಯೆತ್ ಒಕ್ಕೂಟ ಮತ್ತು ಪೋಲಿಷ್ ಜನತಾ ಗಣರಾಜ್ಯಗಳ ಈ ದೀರ್ಘಾವಧಿಯ ಕಾರ್ಯಕ್ರಮದಲ್ಲಿ ಹೇಳಲಾಗಿದೆ.

ಸಮಾಜವಾದಿ ಜಗತ್ತಿನ ಆರ್ಥಿಕ ಭವಿಷ್ಯಕ್ಕಾಗಿ ಅಂಥ ಸುಯೋಜಿತವಾದ ಧೋರಣೆಗೆ ಸೋವಿಯೆತ್-ಪೋಲಿಷ್ ಕಾರ್ಯಕ್ರಮವೊಂದೇ ಉದಾಹರಣೆಯಾಗಿಲ್ಲ. ಸೋವಿಯೆತ್ ಒಕ್ಕೂಟ ಮತ್ತು ಜರ್ಮನ್ ಜನವಾದಿ ಗಣರಾಜ್ಯಗಳೂ ಕೂಡ, 2000ದ ವರ್ಷದವರೆಗಿನ ಅವಧಿಗಾಗಿ ತಮ್ಮ ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರದ ಪ್ರಧಾನ ಪ್ರವೃತ್ತಿಗಳನ್ನು ನಿರೂಪಿಸಿವೆ. 1983ರಲ್ಲಿ ಬರ್ಲಿನ್‌ನಲ್ಲಿ ಜರುಗಿದ 37ನೇ 'ಸಿಎಂಇಎ' ಸಮಾವೇಶವು 1986ರಿಂದ 1990ರವರಗಿನ ಕಾಲಾವಧಿಗೆ 'ಸಿಎಂಇಎ' ಸದಸ್ಯ ರಾಷ್ಟ್ರಗಳ ರಾಷ್ಟ್ರೀಯ ಆರ್ಥಿಕ ಯೋಜನೆಗಳನ್ನು ಸಂಯೋಜಿಸುವ ಪ್ರಯತ್ನಗಳಿಗೆ ತುಂಬಾ ಹೆಚ್ಚು ಗಮನವನ್ನು ನೀಡಿತು. ಇಲ್ಲಿ ಎಲ್ಲ ವಿವರಗಳನ್ನೂ ನೀಡಿಲ್ಲ. ಆದರೂ ಅದು ಸಮಾಜವಾದಿ ಸಮುದಾಯದ ವಿಕಾಸದ ಭವಿಷ್ಯಕ್ಕೆ

ಸಮಾಜವಾದಿ ದೇಶಗಳ ಕಮ್ಯೂನಿಸ್ಟ್ ಪಾರ್ಟಿಗಳ ನಿರಂತರವಾದ ಕಾಳಜಿಯನ್ನು ರುಜು ವಾತುಗೊಳಿಸುತ್ತದೆ. ಜನತೆಯ ಭವಿಷ್ಯಕ್ಕೆ ಇರುವ ಗಾಢವಾದ ಹೊಣೆಗಾರಿಕೆಯ ಭಾವ ಮತ್ತು ಹೊಸ ವ್ಯವಸ್ಥೆಯ ಮೂಲ ಅನುಕೂಲಗಳು ಮತ್ತು ಸಮರ್ಥತೆಯ ಮೇಲೆ ಇರುವ ವಿಶ್ವಾಸ ಇವು ಈ ಕಾಳಜಿಗೆ ಆಧಾರವಾಗಿರುತ್ತವೆ.

## ಸಹಕಾರದಲ್ಲಿ ಒಂದು ಹೊಸ ಘಟ್ಟ



1984ರ ಜೂನ್ ತಿಂಗಳಲ್ಲಿ ಮಾಸ್ಕೋದಲ್ಲಿ 'ಸಿಎಂಇಎ' ಸದಸ್ಯ ರಾಷ್ಟ್ರಗಳ ಆರ್ಥಿಕ ಸಮ್ಮೇಳನವೊಂದು ಜರುಗಿತು. ಅದು ಸಮಾಜವಾದಿ ಸಮುದಾಯದ ದೇಶಗಳ ನಡುವೆ ಆರ್ಥಿಕ ಸಂಬಂಧಗಳ ನಂಬಿಕಾರ್ಹ ಮತ್ತು ಯಶಸ್ವೀ ವಿಕಾಸಕ್ಕೆ ಹೊಸ ಉತ್ತೇಜನವನ್ನು ನೀಡಿತು. ಪರಸ್ಪರ ಆರ್ಥಿಕ ಸಹಕಾರದ ಪರಿಣಾಮಕತೆಯನ್ನು ವರ್ಧಿಸುವ ಜರೂರು ಕಾರ್ಯಭಾರ ಗಳನ್ನು ಸಂಯುಕ್ತವಾಗಿ ಪರಿಗಣಿಸುವ ಪ್ರಶ್ನೆಯನ್ನು 'ಸಿಎಂಇಎ' ಸದಸ್ಯ ರಾಷ್ಟ್ರಗಳ ನಾಯ ಕರು ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ 26ನೇ ಮಹಾಸಭೆಯಲ್ಲೂ ಹಾಗೂ ಇತರ ಸಮಾಜವಾದಿ ದೇಶಗಳ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳ ಮಹಾಸಭೆ ಯಲ್ಲೂ ಪ್ರಸ್ತಾಪ ಮಾಡಿದರು.

ಸಮ್ಮೇಳನಕ್ಕೆ ತೀವ್ರವಾದ ಸಿದ್ಧತೆಯನ್ನು ಮಾಡಲಾಗಿತ್ತು. ಅದು ಸಹಜವೇ, ಏಕೆಂದರೆ, ಸಮ್ಮೇಳನದಲ್ಲಿ ಸಮಾಜವಾದಿ ಆರ್ಥಿಕ ಏಕೀಕರಣದ ಬೆಳವಣಿಗೆಯ 15 ವರ್ಷಗಳ ಅನುಭವದ ಫಲಿತಾಂಶಗಳನ್ನು ಸಮಾರೋಪ ಮಾಡಬೇಕಾಗಿತ್ತು ಮತ್ತು ಸಾಮಾಜಿಕ ಉತ್ಪಾ ದನೆಯಂಥ ಚಟುವಟಿಕೆಯ ಮೂಲ ಕ್ಷೇತ್ರದಲ್ಲಿ ಈ ಶತಮಾನದ ಕೊನೆಯಲ್ಲಿ ಸಮಾಜವಾದಿ ಜಗತ್ತು ಎದುರಿಸುತ್ತಿರುವ ಅನೇಕ ಹೊಸ ಸಮಸ್ಯೆಗಳಿಗೆ ಸರಿಯಾದ ಉತ್ತರಗಳನ್ನು ನೀಡ ಬೇಕಾಗಿತ್ತು.

ಆರ್ಥಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದ ದೇಶಗಳ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳ ನಾಯಕರುಗಳು, ರಾಜ್ಯ ಮತ್ತು ಸರಕಾರದ ಅಧಿಪತಿಗಳು ಅತಿ ಮುಖ್ಯವಾದ ಪ್ರಚಲಿತ ಪ್ರಶ್ನೆಗಳು ಮತ್ತು ಭಾವೀ ಆರ್ಥಿಕಾಭಿವೃದ್ಧಿಯ ಹಾಗೂ ಸೋದರ ದೇಶಗಳ ನಡುವೆ ಪರಸ್ಪರ ಸಹಕಾರದ ಸಮಸ್ಯೆಗಳನ್ನು ಕುರಿತು ಗಾಢವಾಗಿ ವಿಶ್ಲೇಷಣೆ ಮಾಡಿದರು. ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಮತ್ತು ಅದರ ಪರಿಣಾಮಕತೆಯನ್ನು ಹೆಚ್ಚಿಸುವ ಆವಶ್ಯಕತೆಯನ್ನು ಅವರು ಸರ್ವಾನುಮತದಿಂದ ಅನುಮೋದಿಸಿದರು. 1969ರಲ್ಲಿ ಅನುಮೋ ದಿಸಲಾಗಿದ್ದ ಸಹಕಾರವನ್ನು ಇನ್ನಷ್ಟು ಗಾಢಗೊಳಿಸುವ ಮತ್ತು ಪರಿಪೂರ್ಣಗೊಳಿಸುವ ಹಾಗೂ ಸಮಾಜವಾದಿ ಆರ್ಥಿಕ ಏಕೀಕರಣವನ್ನು ವಿಕಾಸಗೊಳಿಸುವ ಸಮಗ್ರ ಕಾರ್ಯಕ್ರಮವನ್ನು ಕಾರ್ಯಗತ ಮಾಡುವ ಕಾರ್ಯಗಳ ಫಲಿತಾಂಶಗಳನ್ನು ಸಾಮೂಹಿಕವಾಗಿ ಅವಲೋಕಿಸಿದ ಈ ತೀರ್ಮಾನವು ದೃಢವಾದ ಆಧಾರದ ಮೇಲಿದೆ. ಕಾರ್ಯಕ್ರಮವನ್ನು ಯಶಸ್ವಿಯಾಗಿ ಕಾರ್ಯ ಗತ ಮಾಡಿರುವುದರಿಂದ ಸೋದರ ದೇಶಗಳಿಗೆ ತಮ್ಮ ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ

ಸಾಮರ್ಥ್ಯವನ್ನು ಸಾಕಷ್ಟು ಬಲಗೊಳಿಸುವುದಕ್ಕೆ ಮತ್ತು ಜನತೆಯ ಸಂಕ್ಷೇಮವನ್ನು ನಿರಂತರ ವಾಗಿ ವೃದ್ಧಿಗೊಳಿಸುವುದಕ್ಕೆ ಮತ್ತು ವಿಜ್ಞಾನ ಶಿಕ್ಷಣ, ಸಂಸ್ಕೃತಿ, ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ಸಂಕ್ಷೇಮವನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವುದಕ್ಕೆ ಹೆಚ್ಚು ಸಹಾಯಕವಾಗಿವೆ.

1970ರಿಂದೀಚೆಗೆ 'ಸಿಎಂಇಎ' ದೇಶಗಳ ರಾಷ್ಟ್ರೀಯ ವರಮಾನವು ಶೇ 80ರಷ್ಟು ಮತ್ತು ಕೈಗಾರಿಕಾ ಉತ್ಪನ್ನವು ಶೇ 100ರಷ್ಟು ಹೆಚ್ಚಿವೆ. ಅದೇ ಸಮಯದಲ್ಲಿ ಸಾಮಾನ್ಯ ಮಾರು ಕಟ್ಟೆಯ ದೇಶಗಳಿಗೆ ಸಂಬಂಧಪಟ್ಟಂತೆ ಕ್ರಮವಾಗಿ ಈ ಸಂಖ್ಯೆಗಳು ಶೇ 30ರಷ್ಟು ಮತ್ತು ಶೇ 20ರಷ್ಟು ಆಗಿವೆ. ಈ ಭೂಮಂಡಲದ ಜನಸಂಖ್ಯೆಯಲ್ಲಿ ಶೇ 10ಕ್ಕೂ ಕಡಿಮೆ ಜನಸಂಖ್ಯೆ ಹೊಂದಿರುವ ಸಮಾಜವಾದಿ ದೇಶಗಳು, ಈಗ ಪ್ರಪಂಚದ ಒಟ್ಟು ವರಮಾನದಲ್ಲಿ ಕಾಲು ಭಾಗ ದಷ್ಟು, ಕೈಗಾರಿಕಾ ಉತ್ಪಾದನೆಯಲ್ಲಿ ಮೂರನೇ ಒಂದರಷ್ಟು ಮತ್ತು ಕೃಷಿ ಉತ್ಪಾದನೆಯಲ್ಲಿ ಐದನೇ ಒಂದರಷ್ಟು ಹೊಂದಿವೆ. 'ಸಿಎಂಇಎ' ರಾಷ್ಟ್ರಗಳ ರಾಷ್ಟ್ರೀಯ ಆರ್ಥಿಕಗಳ ವಿಕಾಸವನ್ನು ಚೈತನ್ಯವನ್ನು ಮತ್ತು ದುಡಿಯುವ ಜನತೆಯ ಆವಶ್ಯಕತೆಗಳನ್ನು ಪೂರಯಿಸುವುದರತ್ತ ಅವು ಗಳ ಒಲವನ್ನು ತೋರಿಸಲು ಒಂದು ಉದಾಹರಣೆ: 1950ರ ದಶಕದ ಮೊದಲು ಮತ್ತು 1983ರ ನಡುವೆ 'ಸಿಎಂಇಎ' ದೇಶಗಳಲ್ಲಿ ತಲಾ ಒಂದರಂತೆ ರಾಷ್ಟ್ರೀಯ ವರಮಾನವು ಹೆಚ್ಚು ಕಡಿಮೆ ಐದು ಪಟ್ಟು ಹೆಚ್ಚಿದೆ.

ಸೋದರ ದೇಶಗಳ ನಡುವೆ ಪರಸ್ಪರ ಸಹಕಾರಕ್ಕೆ ಅಧಾರವಾಗಿರುವ ಮೂಲ ಸೂತ್ರ ಗಳು ಪೂರ್ಣವಾಗಿ ಸಮರ್ಥನೆಗೊಂಡಿವೆ. ಸಮಾಜವಾದಿ ಅಂತರರಾಷ್ಟ್ರೀಯಂತೆ, ರಾಜ್ಯದ ಸಾರ್ವ ಭೌಮತ್ವ, ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಗೌರವ, ಸಂಪೂರ್ಣ ಸಮಾನತೆ, ಪರಸ್ಪರ ಅನುಕೂಲ ಮತ್ತು ಸಂಗಾತಿಯಂತ ನೆರವು, ಇವು ಸೋದರ ದೇಶಗಳ ಮಧ್ಯೆ ಸಂಬಂಧ ಗಳ ಸ್ಥಾಪನೆಗೆ ಸೂತ್ರಗಳಾಗಿವೆ. ಅವನ್ನು ಸತತವಾಗಿ ಕಾರ್ಯಗತ ಮಾಡಲಾಗಿದೆ ಮತ್ತು ಮಾಡಲಾಗುತ್ತಿದೆ.

'ಸಿಎಂಇಎ' ಪ್ರಣಾಳಿಕೆಯ ಸೂತ್ರಗಳು ಮತ್ತು ಸಮಾಜವಾದಿ ಆರ್ಥಿಕ ಏಕೀಕರಣದ ಸಮಗ್ರ ಕಾರ್ಯಕ್ರಮದ ಸಾಧನೆಯು 'ಸಿಎಂಇಎ' ದೇಶಗಳ ಅರ್ಥಿಕಗಳ ಮೇಲೆ ಬಂಡವಾಳ ಶಾಹಿ ಜಗತ್ತಿನ ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮಗಳು ಹೆಚ್ಚಾಗಿ ತಟ್ಟದಂತೆ ಮಾಡಲು ಮತ್ತು ಕೆಲವು ಸಮಾಜವಾದಿ ದೇಶಗಳ ಮೇಲೆ ರಾಜಕೀಯ ಒತ್ತಾಯ ಮತ್ತು ಬೆದರಿಕೆ ಹಾಕಲು ಸಾಧನವಾಗಿ ಆರ್ಥಿಕ ಅಂಶಗಳನ್ನು ಬಳಸಿಕೊಳ್ಳಲು ಸಾಮ್ರಾಜ್ಯಶಾಹಿ ವಲಯಗಳ ದುಷ್ಟ ಪ್ರಯತ್ನಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿಸಿದೆ.

ಪರಸ್ಪರ ಸಹಕಾರವನ್ನು ಹೊಸ ಮಜಲಿಗೆ ಕೊಂಡೊಯ್ಯುವುದಕ್ಕೆ 'ಸಿಎಂಇಎ' ದೇಶ ಗಳ ಆರ್ಥಿಕ ಸಮ್ಮೇಳನವು ಸಾಕಷ್ಟು ಮೂಲಗಳನ್ನು ಮತ್ತು ಸಾಧ್ಯತೆಗಳನ್ನು ಉಂಟು ಮಾಡಿದೆ. ಸಮ್ಮೇಳನವು ಪ್ರಚಲಿತ ಕಾಲಘಟ್ಟದಲ್ಲಿ 'ಸಿಎಂಇಎ' ದೇಶಗಳ ಆರ್ಥಿಕ ವಿಕಾಸ ಮತ್ತು ಪರಸ್ಪರ ಸಹಕಾರದ ಅತಿ ಮುಖ್ಯವಾದ ಕಾರ್ಯಭಾರಗಳನ್ನು ಒಮ್ಮತದಿಂದ ನಿಗದಿ ಮಾಡಿತು. ಅವುಗಳಲ್ಲಿ ಅತಿ ಮುಖ್ಯವಾದುವು ಆರ್ಥಿಕ ವ್ಯವಸ್ಥೆಗಳನ್ನು ಅಭಿವೃದ್ಧಿಯ ತೀವ್ರ ವಾದ ಪಥಕ್ಕೆ ವೇಗವಾಗಿ ಬದಲಿಸುವುದು ಮತ್ತು ಅವುಗಳ ದಕ್ಷತೆಯನ್ನು ವರ್ಧಿಸುವುದು ಆಗಿರುತ್ತವೆ.

ಪರಸ್ಪರ ಆಸಕ್ತಿಕರವಾದ ಪ್ರಮುಖ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ವಿಧಾನಗಳನ್ನು ಸಾಮೂಹಿಕವಾಗಿ ನಿರೂಪಿಸಲು ಸಮ್ಮೇಳನವು ನಿರ್ಧರಿಸಿತು. ಹಿಂದಿನಂತೆಯೇ ಸೋದರ ದೇಶಗಳ ನಡುವೆ ಸಂಬಂಧಗಳ ವಿಚಾರದಲ್ಲಿ ಸಮಾನವಾಗಿ ಅಂಗೀಕೃತವಾಗಿರುವ ಸೂತ್ರಗಳಿಗನುಗುಣವಾಗಿ ಸ್ವಯಂಮೇಚ್ಛೆಯ ಆಧಾರದ ಮೇಲೆ ಸಾಮೂಹಿಕವಾಗಿ ತೀರ್ಮಾನಗಳನ್ನು ಕೈಗೊಳ್ಳಲಾಗುವುದು. ಈ ಅಂಶವನ್ನು ವಿಶೇಷವಾಗಿ ಹೇಳುವುದು ಅಗತ್ಯ. ಏಕೆಂದರೆ ಸಾಮ್ರಾಜ್ಯಶಾಹಿ ಪ್ರಚಾರವು 'ಸಿಎಂಇಎ' ಸೋವಿಯೆತ್ ಒಕ್ಕೂಟದ "ಆಜ್ಞಾಪನೆ"ಗಳ ಮೇಲೆ ವರ್ತಿಸುತ್ತದೆ ಮತ್ತು ಸೋವಿಯೆತ್ ಒಕ್ಕೂಟವು ಸಂಸ್ಥೆಯ ಇತರ ಸದಸ್ಯ ರಾಷ್ಟ್ರಗಳ ಮೇಲೆ ತನ್ನ ಅಭೀಷ್ಟೆಯನ್ನು ಬಲವಂತವಾಗಿ ಹೊರಿಸಲು ಪ್ರಯತ್ನಿಸುತ್ತದೆ, ಎಂದು ಮುಂತಾದಾಗಿ ನಿರಾಧಾರವಾದ ಕಟ್ಟುಕತೆಗಳನ್ನು ಹರಡುತ್ತದೆ. ಈ ಹೇಯವಾದ ಕಟ್ಟುಕತೆಗಳಿಗೆ ಪ್ರತಿಯಾಗಿ ಸಮ್ಮೇಳನವು ಕಾಲಗತಿಯಲ್ಲಿ ಪುಟಗೊಂಡಿರುವ 'ಸಿಎಂಇಎ'ಯ ಕಾರ್ಯದ ಪ್ರಜಾಸತ್ತಾತ್ಮಕ ಸೂತ್ರಗಳನ್ನು ದೃಢಗೊಳಿಸಿತಷ್ಟೇ ಅಲ್ಲದೆ, ಸಹಕಾರ ಮತ್ತು ಸಮಾಜವಾದಿ ಆರ್ಥಿಕ ಏಕೀಕರಣದ ವಿಕಾಸವನ್ನು ಮತ್ತು ಆರ್ಥಿಕ ಚಟುವಟಿಕೆಯ ಅನುಭವದ ವಿನಿಮಯವನ್ನು ಪ್ರೋತ್ಸಾಹಿಸಲು ಸಾಮೂಹಿಕ ಪ್ರಯತ್ನಗಳನ್ನು ಹೆಚ್ಚಿಸುವಂತೆ 'ಸಿಎಂಇಎ' ದೇಶಗಳ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳು ಮತ್ತು ಸರಕಾರವನ್ನು ಆಗ್ರಹಪಡಿಸಿತು. ಈ ಸಂಬಂಧದಲ್ಲಿ ಸಮ್ಮೇಳನವು ಭವಿಷ್ಯಕ್ಕಾಗಿ ಮತ್ತು ಅಂತರರಾಷ್ಟ್ರೀಯ ಸಮಾಜವಾದಿ ಶ್ರಮ ವಿಭಜನೆಯನ್ನು ಮತ್ತಷ್ಟು ಗಾಢವಾಗಿಸುವುದಕ್ಕಾಗಿ 'ಸಿಎಂಇಎ' ದೇಶಗಳ ಆರ್ಥಿಕ ಗುರಿಯ ಮೂಲ ಪ್ರವೃತ್ತಿಗಳನ್ನು ಸಂಯುಕ್ತವಾಗಿ ನಿರೂಪಿಸಲು, 'ಸಿಎಂಇಎ' ದೇಶಗಳ ಪಾರ್ಟಿ ಮತ್ತು ಸರಕಾರದ ನಾಯಕರುಗಳ ನಡುವೆ ತಪ್ಪದೆ ಸಭೆಗಳನ್ನು ನಡೆಸುವುದು ಅಗತ್ಯ ಎಂದು ಸಮ್ಮೇಳನವು ಪರಿಗಣಿಸಿತು.

ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯನ್ನು ವೇಗಗೊಳಿಸುವುದು, ಇಂಧನ, ಕಚ್ಚಾ ಮಾಲುಗಳು ಮತ್ತು ಆಹಾರ ಪದಾರ್ಥಗಳ ಸರಬರಾಜು ಹಾಗೂ ವಿಶೇಷೀಕರಣ ಮತ್ತು ಸಹಕಾರದ ಮತ್ತಷ್ಟು ವರ್ಧನೆ, ಇವೇ ಮೊದಲಾದ ಪ್ರಮುಖ ಆರ್ಥಿಕ ಕಾರ್ಯಭಾರಗಳನ್ನು ಪೂರಯಿಸುವುದರಲ್ಲಿ ಸಹಕಾರದ ಪರಿಣಾಮಕತೆಯನ್ನು ವರ್ಧಿಸಲು ವಿಧಾನಗಳನ್ನು ಸಮಾಜವಾದಿ ದೇಶಗಳು ನಿರೂಪಿಸಿವೆ.

ಸಂಯೋಜಿತವಾದ ವೈಜ್ಞಾನಿಕ ಮತ್ತು ತಾಂತ್ರಿಕ ನೀತಿ, ಇಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆ ಮತ್ತು ಅವುಗಳ ವ್ಯಾಪಕವಾದ ಬಳಕೆ, ಉತ್ಪಾದನೆಯಲ್ಲಿ ಸಂಕೀರ್ಣವಾದ ಸ್ವತಶ್ಚಾಲೀ ವ್ಯವಸ್ಥೆ, ನ್ಯೂಕ್ಲಿಯರ್ ಇಂಜಿನಿಯರಿಂಗ್‌ನ ಅಭಿವೃದ್ಧಿ ಮತ್ತು ಹೊಸ ವಸ್ತುಗಳು ಹಾಗೂ ತಾಂತ್ರಿಕತೆಗಳ ನಿರ್ಮಾಣ, ಇವನ್ನು 'ಸಿಎಂಇಎ' ದೇಶಗಳಲ್ಲಿ ಕಾರ್ಯಗತ ಮಾಡಲು ಅನುಕೂಲವಾಗುವಂತೆ 15ರಿಂದ 20 ವರ್ಷಗಳ ಕಾಲಾವಧಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯ ಸಮಗ್ರ ಕಾರ್ಯಕ್ರಮವೊಂದನ್ನು ತಯಾರಿಸಲು ಸಮ್ಮೇಳನವು ನಿರ್ಧರಿಸಿತು.

ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯನ್ನು ವೇಗಗೊಳಿಸುವುದು ಜರೂರಾದ ಸಾಧಿಸಬಹುದಾದ ಕಾರ್ಯವಾಗಿದೆ, ಸೋದರ ದೇಶಗಳು ಅದನ್ನು ಸಾಧಿಸಲು ಅಗತ್ಯವಾದುವೆಲ್ಲವನ್ನೂ ಪಡೆದಿವೆ. ನಂಬಿಕಾರ್ಹವಾದ ಉತ್ಪಾದನೆ ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ಆಧಾರ

ಸಾಕಷ್ಟು ನೈಸರ್ಗಿಕ ಸಂಪನ್ಮೂಲಗಳು, ಪರಿಣತರುಗಳು ಮತ್ತು ಯೋಜನಾಬದ್ಧವಾದ ಆರ್ಥಿಕ ನಿರ್ವಹಣೆಯು ವ್ಯವಸ್ಥೆ, ಎಲ್ಲವೂ ಇವೆ.

ಮುಖ್ಯವಾಗಿ, ಮೆಕ್ಯಾನಿಕಲ್ ಇಂಜನಿಯರಿಂಗ್‌ನ ಮತ್ತಷ್ಟು ಅಭಿವೃದ್ಧಿಯನ್ನು ಭರವಸೆಗೊಳಿಸುವುದಕ್ಕೆ ಸಾಮೂಹಿಕ ಪ್ರಯತ್ನಗಳನ್ನು ಮಾಡಲಾಗುವುದು. ಇದು ಬರೀ ಬಡಾಯಿಯಲ್ಲ. ಈ ಕ್ಷೇತ್ರದಲ್ಲಿ ಈಗಾಗಲೇ ಗಮನಾರ್ಹವಾದ ಸಾಧನೆಗಳಾಗವೆ. ನ್ಯೂಕ್ಲಿಯರ್ ವಿದ್ಯುಚ್ಛಕ್ತಿ ಕೇಂದ್ರಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಉಪಕರಣಗಳ ತಯಾರಿಕೆಯಲ್ಲಿ ಸಹಕಾರವು ಅದಕ್ಕೆ ನಿದರ್ಶನವಾಗಿದೆ, ಅದರಿಂದಾಗಿ ಅತ್ಯಲ್ಪ ಕಾಲಾವಧಿಯಲ್ಲಿ 'ಸಿಎಂಇಎ' ದೇಶಗಳ ಆವಶ್ಯಕತೆಗಳನ್ನು ಪೂರ್ಣವಾಗಿ ಪೂರಯಿಸಲು ಸಾಧ್ಯವಾಗಿದೆ.

'ಸಿಎಂಇಎ' ದೇಶಗಳ ಏಕಪ್ರಕಾರವಾದ ಆರ್ಥಿಕ ಬೆಳವಣಿಗೆಗೆ ತುಂಬಾ ಮುಖ್ಯವಾದುದು ಇಂಧನ ಮತ್ತು ಕಚ್ಚಾ ಮಾಲುಗಳಿಗೆ ಸಂಬಂಧಿಸಿದ ಒಪ್ಪಂದಗಳಾಗಿವೆ. ತಮ್ಮ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರ ಜೊತೆಗೆ, ಪ್ರತಿಯೊಂದು ದೇಶವೂ ಸಂಪನ್ಮೂಲಗಳನ್ನು ಉಳಿಸಲು ಸಹಾಯಕವಾಗುವ ಮತ್ತು ಊರ್ಜೆ ಹಾಗೂ ಕಚ್ಚಾ ಮಾಲುಗಳ ಉತ್ಪಾದನೆ ಮತ್ತು ಬಳಕೆಯು ರಚನೆಯನ್ನು ಸಮಗ್ರವಾಗಿ ಬದಲಿಸುವ ತಾಂತ್ರಿಕತೆಗಳನ್ನು ಸಂಯುಕ್ತವಾಗಿ ವಿಕಾಸಗೊಳಿಸುವ ಮತ್ತು ಜಾರಿಗೆ ತರುವ ಪ್ರಯತ್ನಗಳನ್ನು ಮಾಡುವುದು. ಈ ಸಂಬಂಧದಲ್ಲಿ ನ್ಯೂಕ್ಲಿಯರ್ ಶಾಖ ಮತ್ತು ವಿದ್ಯುತ್ ಕೇಂದ್ರಗಳ ಜಾಲವನ್ನು ಮತ್ತಷ್ಟು ವಿಕಾಸಗೊಳಿಸಲು ಪ್ರಧಾನವಾಗಿ ಗಮನಹರಿಸಲಾಗುವುದು. ಸಮಾಜವಾದಿ ದೇಶಗಳಿಗೆ ಮುಖ್ಯವಾದ ಕಚ್ಚಾ ಮಾಲುಗಳು ಮತ್ತು ಇಂಧನ ಸರಬರಾಜನ್ನು ಸೋವಿಯೆತ್ ಒಕ್ಕೂಟವು ಮುಂದುವರಿಸುವುದರ ಬಗ್ಗೆ ಒಂದು ಒಪ್ಪಂದಕ್ಕೆ ಬರಲಾಗಿದೆ. ಸಮಾಜವಾದಿ ದೇಶಗಳ ಬೆಳೆಯುತ್ತಿರುವ ಅವಶ್ಯಕತೆಗಳನ್ನು ಪೂರಯಿಸುವುದಕ್ಕಾಗಿ, ಸೋವಿಯೆತ್ ಒಕ್ಕೂಟವು, ಸಂಬಂಧಪಟ್ಟ ದೇಶಗಳು ಸಂಯುಕ್ತವಾಗಿ ಪ್ರತಿ ವರ್ಷವೂ 20,000ದಿಂದ 22,000 ಮಿಲಿಯ ಘನ ಮೀಟರುಗಳ ಇಂಧನಾನಿಲವನ್ನು ಸಾಗಿಸಬಲ್ಲ ಹೊಸ ಪ್ರಬಲವಾದ ಕೊಳವೆ ಮಾರ್ಗವೊಂದನ್ನು ನಿರ್ಮಿಸಬೇಕೆಂದು ಸೂಚಿಸಿದೆ.

ಉನ್ನತ ದರ್ಜೆಯ ಆಹಾರ ಪದಾರ್ಥಗಳು ಮತ್ತು ಸರಕುಗಳಿಗಾಗಿ ಸೋದರ ದೇಶಗಳ ಜನತೆಯ ಬೇಡಿಕೆಯನ್ನು ಪೂರಯಿಸುವುದಕ್ಕಾಗಿ ಸಮಾಜವಾದಿ ಏಕೀಕರಣದ ಮತ್ತಷ್ಟು ವಿಕಾಸವು 1980ರ ದಶಕದ ಹೆಗ್ಗುರುತಾಗಿದೆ. ಈ ಉದ್ದೇಶದ ಸಾಧನೆಗಾಗಿ, ಕೃಷಿ ಉತ್ಪಾದನೆಯಲ್ಲಿ, ಲಘು ಕೈಗಾರಿಕೆಗಳು ಮತ್ತು ಬಳಕೆದಾರಿ ವಸ್ತುಗಳನ್ನೆ ತಯಾರಿಸುವ ಕೈಗಾರಿಕೆಗಳ ಆಧುನೀಕರಣದಲ್ಲಿ ಸಹಕಾರವನ್ನು ವಿಸ್ತರಿಸಲಾಗಿದೆ.

ವಿಯೆತ್ನಾಮ್ ಸಮಾಜವಾದಿ ಗಣರಾಜ್ಯ, ಕ್ಯೂಬಾ ಗಣರಾಜ್ಯ ಮತ್ತು ಮಂಗೋಲಿಯನ್ ಜನತಾ ಗಣರಾಜ್ಯ ಇವುಗಳಿಗೆ ತಮ್ಮ ಆರ್ಥಿಕಾಭಿವೃದ್ಧಿಯನ್ನು ವೇಗಗೊಳಿಸಿಕೊಳ್ಳಲು ಮತ್ತು ಪರಿಣಾಮಕತೆಯನ್ನು ವರ್ಧಿಸಿಕೊಳ್ಳಲು ಈಗಿರುವ ನ್ಯಾಯಬದ್ಧವಾದ ಆಧಾರದ ಮೇಲೆ 'ಸಿಎಂಇಎ' ದೇಶಗಳು ನೆರವು ನೀಡಿಕೆಯನ್ನು ಮುಂದುವರಿಸುವುವು ಎಂದು ಇಲ್ಲಿ ವಿಶೇಷವಾಗಿ ಒತ್ತಿ ಹೇಳಬೇಕಾಗಿದೆ. ಈ ದೇಶಗಳು ಸಮಾಜವಾದಿ ಔದ್ಯೋಗೀಕರಣಕ್ಕಾಗಿ ನಿಗದಿ ಮಾಡಿಕೊಂಡಿರುವ ಕಾರ್ಯಭಾರಗಳನ್ನು ಮತ್ತು ಅಂತರರಾಷ್ಟ್ರೀಯ ಸಮಾಜವಾದಿ

ಶ್ರಮ ವಿಭಜನೆಯಲ್ಲಿ ಅವು ವ್ಯಾಪಕವಾಗಿ ಭಾಗವಹಿಸುವುದನ್ನು ಪ್ರೋತ್ಸಾಹಿಸುವುದನ್ನು ಗಮನದಲ್ಲಿರಿಸಿಕೊಂಡು ಈ ನೆರವನ್ನು ಮುಂದುವರಿಸಲಾಗುವುದು. ಸಮ್ಮೇಳನದಲ್ಲಿ ಸಂಯುಕ್ತವಾಗಿ ಹೇಳಿರುವಂತೆ ಈ ನೆರವು ನೀಡಿಕೆಯನ್ನು ಸಮಾಜವಾದಿ ದೇಶಗಳು ತಮ್ಮ ಅಂತರರಾಷ್ಟ್ರೀಯ ಕರ್ತವ್ಯವೆಂದು ಪರಿಗಣಿಸುತ್ತವೆ.

ಉತ್ಪಾದನಾ ಸಂಸ್ಥೆಗಳು ಮತ್ತು ಉದ್ಯಮಗಳನ್ನು ನೇರವಾಗಿ ಏಕೀಕರಣಕ್ಕೆ ಒಳಪಡಿಸದೆ ಪರಸ್ಪರ ಆರ್ಥಿಕ ಸಂಬಂಧಗಳನ್ನು ಪರಿಣಾಮಕಾರಿಯಾಗಿ ವಿಕಾಸಗೊಳಿಸುವುದು ಕಷ್ಟವಾಗುತ್ತಿರುವ ಘಟ್ಟವನ್ನು ಇಂದು ಸಿಎಂಇಎ ದೇಶಗಳ ಸಹಕಾರವು ಮುಟ್ಟಿದೆ. ಸಮಾಜವಾದಿ ಏಕೀಕರಣದ ವ್ಯವಸ್ಥೆಯನ್ನು ಉತ್ತಮಗೊಳಿಸುವುದಕ್ಕೆ ನೇರವಾದ ಸಂಬಂಧಗಳ ಬೆಳವಣಿಗೆಯು ಮೂಲತಃ ಮುಖ್ಯವಾದುದಾಗಿದೆ ಎಂದು ಪರಿಗಣಿಸಲಾಗಿದೆ. ಈ ಸಂಬಂಧಗಳು 'ಸಿಎಂಇಎ' ದೇಶಗಳ ಕೇಂದ್ರ ಆರ್ಥಿಕ ನಿರ್ವಹಣಾ ಸಂಸ್ಥೆಗಳ ನಡುವೆ ಸಹಕಾರಕ್ಕೆ ಸಾಕಷ್ಟು ಬೆಂಬಲವಾಗಿರುತ್ತವೆ. ಸಹಕಾರದಲ್ಲಿ ಬೆಲೆ ನಿಗದಿ, ನಾಣ್ಯ ಚಲಾವಣೆ ಮತ್ತು ಹಣಕಾಸಿನ ಪ್ರಶ್ನೆಗಳನ್ನು ಸುಧಾರಿಸುವುದರೊಂದಿಗೆ ಮತ್ತು ಪರಸ್ಪರ ಆರ್ಥಿಕ ಕ್ರಿಯೆಯ ಗುರಿಗಳನ್ನು ಸಾಧಿಸುವುದಕ್ಕೆ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗಳನ್ನು ಪರಸ್ಪರವಾಗಿ ಹೊಂದಿಸಲು ಅತ್ಯುತ್ತಮ ವಿಧಾನಗಳನ್ನು ಅರಸುವುದರೊಂದಿಗೆ ಈ ಪ್ರಕ್ರಿಯೆಗಳು ನಿಕಟವಾಗಿ ಸಂಬಂಧಿಸಿವೆ. ಈಗ 'ಸಿಎಂಇಎ' ದೇಶಗಳು ಮತ್ತು ಈ ಸಂಘಟನೆಯ ಸಾಮೂಹಿಕ ಅಂಗ ಸಂಸ್ಥೆಗಳು ಆರ್ಥಿಕ ಸಮ್ಮೇಳನದಲ್ಲಿ ಎತ್ತಲಾದ ಪ್ರಶ್ನೆಗಳನ್ನು ಬಗೆಹರಿಸುವುದರಲ್ಲಿ ತೊಡಗಿವೆ. ಇದು 'ಸಿಎಂಇಎ'ಯ "ದೌರ್ಬಲ್ಯಗಳು" ಮತ್ತು "ಅದಕ್ಷತೆ"ಯನ್ನು ಕುರಿತು ದುರುದ್ದೇಶದ ಹೇಳಿಕೆಗಳನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತವೆ.

ಶಾಂತಿಯನ್ನು ಕಾಪಾಡುವುದಕ್ಕೆ ಮತ್ತು ಬಲಗೊಳಿಸುವುದಕ್ಕೆ ಎಲ್ಲ ದೇಶಗಳು ಮತ್ತು ಮತ್ತು ಜನತೆಯ ನಡುವೆ ಸಮಾನವಾದ ಮತ್ತು ಫಲಪ್ರದವಾದ ಅಂತರರಾಷ್ಟ್ರೀಯ ಆರ್ಥಿಕ ಸಹಕಾರವನ್ನು ಬೆಳೆಸುವುದರ ಅಪಾರವಾದ ಮುಖ್ಯತ್ವವನ್ನು ಮಾಸ್ಕೋ ಸಮ್ಮೇಳನವು ಒತ್ತಿ ಹೇಳಿತು. ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳನು ಉತ್ತಮಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಲು ಅದು ನಿರ್ಧರಿಸಿತು.

ಮುಖ್ಯವಾಗಿ 'ಸಿಎಂಇಎ' ಮತ್ತು 'ಇಇಸಿ' ಸಂಘಟನೆಗಳ ಸದಸ್ಯ ರಾಷ್ಟ್ರಗಳ ನಡುವೆ ವಾಣಿಜ್ಯ ಮತ್ತು ಆರ್ಥಿಕ ಸಂಬಂಧಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಅವುಗಳ ಮಧ್ಯೆ ಸಂಬಂಧಪಟ್ಟ ಒಪ್ಪಂದವನ್ನು ಮಾಡಿಕೊಳ್ಳಲು 'ಸಿಎಂಇಎ' ದೇಶಗಳ ಸಿದ್ಧತೆಯನ್ನು ಸಮ್ಮೇಳನವು ದೃಢವಾಗಿ ಸಾರಿತು. ಆದರೆ, ಒಡನೆಯೇ 'ಸಿಎಂಇಎ' ದೇಶಗಳೊಂದಿಗೆ ವಾಣಿಜ್ಯ ವ್ಯವಹಾರಗಳಿಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಹೊಸ ನಿರ್ಬಂಧಗಳನ್ನು ಹೇರಿದ್ದನ್ನು ಇಲ್ಲಿ ಗಮನಿಸಬೇಕಾಗಿದೆ. ತನ್ನ ಮಿತ್ರ ರಾಷ್ಟ್ರಗಳ ಪೈಪೋಟಿಯ ಸಾಮರ್ಥ್ಯವನ್ನು ಕುಗ್ಗಿಸುವುದರಲ್ಲಿ ಮತ್ತು ಅವುಗಳ ಮೇಲೆ ಇನ್ನೂ ಹೆಚ್ಚು ಕಟ್ಟುನಿಟ್ಟಾದ ನಿಯಂತ್ರಣವನ್ನು ಹೊಂದಿರಲು ಅಪೇಕ್ಷಿಸುತ್ತಿರುವ ಅಮೆರಿಕಾದ ಆಡಳಿತ ವಲಯಗಳ ಒತ್ತಾಯದ ಮೇಲೆ ಅವು ಹಾಗೆ ಮಾಡಿವೆ ಎಂಬುದು ಸುಸ್ಪಷ್ಟ.

ನ್ಯಾಯುವಾದ ಮತ್ತು ಪ್ರಜಾಸತ್ತಾತ್ಮಕವಾದ ಆಧಾರದ ಮೇಲೆ ಅಂತರರಾಷ್ಟ್ರೀಯ

ಆರ್ಥಿಕ ಸಂಬಂಧಗಳ ಪುನಾರಚನೆಗಾಗಿ ಮತ್ತು ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸ್ಥಾಪನೆಗಾಗಿ ಹೋರಾಡುತ್ತಿರುವ ವಿಕಾಸಶೀಲ ದೇಶಗಳ ಪುರೋಗಾಮಿ ಬೇಡಿಕೆಗಳಿಗೆ 'ಸಿಎಂಇಎ'ಯ ಸದಸ್ಯ ರಾಷ್ಟ್ರಗಳು ಬೆಂಬಲ ನೀಡುತ್ತಿವೆ. ಆರ್ಥಿಕ ಸ್ವಾತಂತ್ರ್ಯವನ್ನು ಬಲಪಡಿಸಿ ಕೊಳ್ಳುವುದಕ್ಕೆ ಮತ್ತು ವಸಾಹತುಶಾಹಿಯ ಬಂಧನವನ್ನು ಮತ್ತು ಸಾಗರೋತ್ತರ ನಿಗಮಗಳು ಹಾಗೂ ಸಾಮ್ರಾಜ್ಯಶಾಹಿ ದೇಶಗಳ ಮೇಲೆ ನವ ವಸಾಹತುಶಾಹಿ ರೀತಿಯ ಅವಲಂಬನೆಯನ್ನು ಕಿತ್ತೊಗೆಯುವುದಕ್ಕೆ ವಿಕಾಸಶೀಲ ದೇಶಗಳಿಗೆ ನೆರವೀಯಲು 'ಸಿಎಂಇಎ' ದೇಶಗಳು ತಮ್ಮ ಕೈಲಾದುದೆಲ್ಲವನ್ನೂ ಮಾಡುತ್ತಿವೆ. ಏಕೆಂದರೆ. ವಿಕಾಸಶೀಲ ದೇಶಗಳು ಸಾಮ್ರಾಜ್ಯಶಾಹಿ ದೇಶಗಳ ಮೇಲೆ ಅವಲಂಬಿತಗೊಂಡಿದ್ದರೆ, ಅವುಗಳ ರಾಜಕೀಯ ಸ್ವಾತಂತ್ರ್ಯಕ್ಕೆ ಅನಿವಾರ್ಯವಾಗಿಯೇ ಧಕ್ಕೆಯುಂಟಾಗುತ್ತದೆ ಮತ್ತು ಸಾಮ್ರಾಜ್ಯಶಾಹಿಯ ಅಧಿಪತ್ಯ ಪುನರುತ್ಥಾಪನೆಯಾಗುತ್ತದೆ. ತಮ್ಮ ಸ್ವಂತ ಕಹಿ ಅನುಭವದಿಂದ ಅನೇಕ ವಿಕಾಸಶೀಲ ದೇಶಗಳು ಇದನ್ನು ಚೆನ್ನಾಗಿ ಅರಿತುಕೊಂಡಿವೆ, ಆದ್ದರಿಂದಾಗಿ, 'ಸಿಎಂಇಎ' ಸದಸ್ಯ ರಾಷ್ಟ್ರಗಳೊಂದಿಗೆ ಶಾಶ್ವತವಾದ ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಸಂಬಂಧಗಳ ಸ್ಥಾಪನೆಗಾಗಿ ಅವು ಪ್ರಯತ್ನಿಸುತ್ತಿರುವುದು ಸಹಜವೇ ಆಗಿದೆ. ಅಂಥ ಸಂಬಂಧಗಳು ಇಡೀ ಅಂತರರಾಷ್ಟ್ರೀಯ ವಾತಾವರಣದ ಮೇಲೆ ಗುಣಾತ್ಮಕವಾದ ಪರಿಣಾಮವನ್ನು ಹೊಂದಿರುವುವು.

## 'ಸಿಎಂಇಎ' ಮತ್ತು ಜಾಗತಿಕ ಆರ್ಥಿಕ ವ್ಯವಸ್ಥೆ

'ಸಿಎಂಇಎ' ದೇಶಗಳ ಆರ್ಥಿಕ. ವೈಜ್ಞಾನಿಕ, ತಾಂತ್ರಿಕ ಮತ್ತು ಸಾಮಾಜಿಕ ಸಾಧನೆಗಳನ್ನು ಮತ್ತು ಅದರ ಚಟುವಟಿಕೆಯ ಹಿಂದಿರುವ ಪ್ರಜಾಸತ್ತಾತ್ಮಕ ಸೂತ್ರಗಳ ಅನುಕೂಲಗಳನ್ನು. ಪಶ್ಚಿಮ ಯೂರೋಪಿನ ದೇಶಗಳ ಪ್ರಮುಖ ಆರ್ಥಿಕ ಸಂಘಟನೆಯಾಗಿರುವ 'ಇಇಸಿ' ಯೊಂದಿಗೆ ಮೇಲೆ, ಮೇಲೆ ಹೋಲಿಸಿದರೂ ಕಾಣಬಹುದಾಗಿದೆ. 'ಇಇಸಿ'ಯ ಸದಸ್ಯರ ನಡುವೆ ತೀವ್ರವಾದ ಸತತ ಹೋರಾಟಕ್ಕೆ ಮತ್ತು ರಾಷ್ಟ್ರೀಯ ಕಂಪೆನಿಗಳು ಮತ್ತು ಸಾಗರೋತ್ತರ ನಿಗಮಗಳ ನಡುವೆ ತೀವ್ರವಾದ ವೈರುಧ್ಯಗಳಿಗೆ ಕ್ಷೇತ್ರವಾಗಿರುವುದನ್ನು ಯಾರಾದರೂ ಕಾಣಬಹುದಾಗಿದೆ. ವಾಣಿಜ್ಯ ಸಮರಗಳಲ್ಲಿ 'ಇಇಸಿ'ಯ ಚೌಕಟ್ಟಿನೊಳಗೆ ಒಡಂಬಡಿಕೆಗಳಾದರೆ ಮತ್ತು ತಾತ್ಕಾಲಿಕವಾದ ಹೊಂದಾಣಿಕೆಗಳಾದರೆ, ಸಾಮಾನ್ಯವಾಗಿ ಅವಕ್ಕೆ ದುಡಿಯುವ ಜನರು ದಂಡ ತೆರಬೇಕಾಗಿ ಬರುತ್ತದೆ.

ಅದಕ್ಕೆ ಪ್ರತಿಯಾಗಿ, 'ಸಿಎಂಇಎ'ಯ ಚೌಕಟ್ಟಿನೊಳಗೆ ಶ್ರಮದ ವಿಭಜನೆಯನ್ನು ರಾಷ್ಟ್ರೀಯ ಆರ್ಥಿಕಗಳ ಸಾಮರಸ್ಯದ ಮತ್ತು ಸರ್ವವ್ಯಾಪಿಯಾದ ಬೆಳವಣಿಗೆಗಾಗಿ ಮತ್ತು ಸಮಾಜವಾದಿ ದೇಶಗಳಲ್ಲಿನ ವಿಶಾಲ ದುಡಿಯುವ ಜನಸಮೂಹಗಳ ಸಂಕ್ಷೇಮಕ್ಕಾಗಿ ಮತ್ತು ಆರ್ಥಿಕ ಸಾಮರ್ಥ್ಯದ ಗರಿಷ್ಠ ಬೆಳವಣಿಗೆಗಾಗಿ ಕಾರ್ಯಗತ ಮಾಡಲಾಗುತ್ತದೆ. ಇದರಲ್ಲಿ ಇನ್ನೊಂದು ಮೂಲ ವ್ಯತ್ಯಾಸ ಇದೆ. 'ಇಇಸಿ'ಯಲ್ಲಿ ರಾಷ್ಟ್ರೀಯೇತರ ಸಂಸ್ಥೆಗಳ ಅನುಕೂಲಕ್ಕಾಗಿ ತನ್ನ ಸದಸ್ಯ ರಾಷ್ಟ್ರಗಳ ಸಾರ್ವಭೌಮತ್ವವನ್ನು ಅತಿಕ್ರಮಿಸುವುದು ವಾಡಿಕೆಯಾಗಿದೆ. ಆದರೆ 'ಸಿಎಂಇಎ' ಕಾರ್ಯವು ಅದರ ಸದಸ್ಯ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಗೌರವ ನೀಡುವ ಮತ್ತು

ಪ್ರಜಾ ಪ್ರಭುತ್ವ ಹಾಗೂ ಎಲ್ಲ ಸಂಯುಕ್ತ ಚಟುವಟಿಕೆಗಳಲ್ಲಿಯೂ ಸ್ವಯಂಪ್ರೇರಣೆಯಿಂದ ಭಾಗವಹಿಸುವ ಸೂತ್ರಗಳನ್ನು ಪಾಲಿಸುವುದರ ಮೇಲೆ ಆಧಾರಗೊಂಡಿರುತ್ತದೆ. ಕಾಲ ಪರೀಕ್ಷೆಯಲ್ಲಿ ಪುಟಗೊಂಡಿರುವ ಪ್ರಜಾಸತ್ತಾತ್ಮಕ ಪರಂಪರೆಗಳಿಗೆ ಮತ್ತು ಸಮಾಜವಾದಿ ಅಂತರರಾಷ್ಟ್ರೀಯತೆಗೆ 'ಸಿಎಂಇಎ'ಯ ನಿಷ್ಠೆಯು ಆರ್ಥಿಕ ಶೃಂಗ ಸಮ್ಮೇಳನದಲ್ಲಿ ಮತ್ತೊಮ್ಮೆ ದೃಢಗೊಂಡಿತು.

ಉಳಿದ ಜಗತ್ತಿಗೆ ಸಂಬಂಧಪಟ್ಟಂತೆ 'ಇಇಸಿ'ಯು ಒಂದು ಪ್ರತ್ಯೇಕ ತಂಡವಾಗಿ ವರ್ತಿಸುತ್ತದೆ. ಆದರೆ 'ಸಿಎಂಇಎ'ಯು ಯಾವುದೇ ತಾರತಮ್ಯಗಳಿಲ್ಲದೆ, ಕೃತಕ ನಿರ್ಬಂಧಗಳಿಲ್ಲದೆ ವ್ಯಾಪಕವಾದ ಮತ್ತು ಪರಸ್ಪರ ಅನುಕೂಲಕರವಾದ ಸಂಬಂಧಗಳನ್ನು ಬೆಳೆಸಲು ತನ್ನ ಸಿದ್ಧತೆಯನ್ನು ತೋರಿಸುತ್ತದೆ. ಅದ್ದರಿಂದಾಗಿಯೇ, 'ಸಿಎಂಇಎ' ದೇಶಗಳೊಂದಿಗೆ ವಾಣಿಜ್ಯ ಸಂಬಂಧಗಳನ್ನು ಸ್ಥಾಪಿಸಲು ಮತ್ತು ವಿಕಾಸಗೊಳಿಸಲು ಅನೇಕ ದೇಶಗಳು ಹೆಚ್ಚು ಹೆಚ್ಚು ಆಸಕ್ತಿಯನ್ನು ತೋರಿಸುತ್ತಿರುವುದು ಸಹಜವೇ ಹೊರತಾಗಿ ಆಕಸ್ಮಿಕವೇನಲ್ಲ, 'ಸಿಎಂಇಎ' ಮತ್ತು ಯುಗೋಸ್ಲಾವಿಯಾ ಸಮಾಜವಾದಿ ಫೆಡರಲ್ ಗಣರಾಜ್ಯ ಈಗ ಹಲವು ವರ್ಷಗಳಿಂದ ಯಶಸ್ವಿಯಾಗಿ ಸಹಕರಿಸುತ್ತಿವೆ. 'ಸಿಎಂಇಎ' ಸಹಿಹಾಕಿರುವ ಒಪ್ಪಂದಗಳಿಗನುಸಾರವಾಗಿ, ಅದರ ಸದಸ್ಯ ರಾಷ್ಟ್ರಗಳು ಫಿನ್ಲೆಂಡ್, ಇರಾಕ್ ಮತ್ತು ಮೆಕ್ಸಿಕೋಗಳೊಂದಿಗೆ ಸಹಕರಿಸುತ್ತಿವೆ. ಲಾವೋಸ್, ಅಂಗೋಲ' ಆಫ್ಘಾನಿಸ್ತಾನ, ಯೆಮೆನ್ ಜನತಾ ಪ್ರಜಾಪ್ರಭುತ್ವ ಗಣರಾಜ್ಯ. ಮೊಜಾಂಬಿಕ್, ಎಥಿಯೋಪಿಯ ಮತ್ತು ಇತರ ವಿಕಾಸಶೀಲ ದೇಶಗಳೊಂದಿಗೆ ಅವು ಬಹುಮುಖವಾದ ಸಂಬಂಧಗಳನ್ನು ಬಲಗೊಳಿಸುತ್ತಿವೆ. 1983ರ ಅಕ್ಟೋಬರ್‌ನಲ್ಲಿ ಬರ್ಲಿನ್‌ನಲ್ಲಿ ಜರುಗಿದ 37ನೇ 'ಸಿಎಂಇಎ' ಸಮಾವೇಶದಲ್ಲಿ, ಆಫ್ರಿಕ, ಏಶಿಯ ಮತ್ತು ಲ್ಯಾಟಿನ್ ಅಮೆರಿಕದ ಏಳು ರಾಷ್ಟ್ರಗಳ ಪ್ರತಿನಿಧಿಗಳ ಜೊತೆಗೆ, ಮೊದಲಬಾರಿಗೆ ನಿಕರಾಗುವಾದ ಪ್ರತಿನಿಧಿಗಳೂ ಭಾಗವಹಿಸಿದ್ದರು.

ವಿಭಿನ್ನ ಸಾಮಾಜಿಕ ವ್ಯವಸ್ಥೆಗಳನ್ನು ಹೊಂದಿರುವ ದೇಶಗಳ ನಡುವೆ ಶಾಂತಿಯುತ ಸಹ ಬಾಳ್ವೆಯ ಸೂತ್ರಗಳಿಗೆ ತಮ್ಮ ಪ್ರಾಮಾಣಿಕ ನಿಷ್ಠೆಯನ್ನು ದೃಢಗೊಳಿಸಿ, 'ಸಿಎಂಇಎ. ದೇಶಗಳು ಯಾವುದೇ ತಾರತಮ್ಯವಿಲ್ಲದೆ, ಸಮಾನತೆ ಮತ್ತು ಪರಸ್ಪರ ಅನುಕೂಲತೆಯ ಆಧಾರದ ಮೇಲೆ ಈಗಾಗಲೇ ಮಾಡಿಕೊಂಡಿರುವ ಒಪ್ಪಂದಗಳನ್ನು ಪಾಲಿಸುತ್ತ ಬಂಡವಾಳಶಾಹಿ ದೇಶಗಳೊಂದಿಗೆ ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಸುಸ್ಥಿರವಾದ ಸಂಬಂಧಗಳನ್ನು ಬೆಳೆಸುತ್ತಿವೆ. ಸೌಮನಸ್ಯದ ವರ್ಷಗಳಲ್ಲಿ ಅಂಥ ಸಂಬಂಧಗಳು ಗಣನೀಯವಾಗಿ ಬೆಳೆದುವು, ರಚನಾತ್ಮಕವಾದ ಅಂತರರಾಷ್ಟ್ರೀಯ ಸಹಕಾರವನ್ನು ಸ್ಥಾಪಿಸಲು ಮತ್ತು ಪರಸ್ಪರ ಅನುಕೂಲಕರವಾದ ಸಂಬಂಧಗಳನ್ನು ಆರಂಭಿಸಲು ನೆರವಾದುವು. ಅವು ಶಾಶ್ವತ ಶಾಂತಿ ಮತ್ತು ಸಾಮಾಜಿಕ ಪ್ರಗತಿಯ ಹಿತಗಳಿಗೆ ನೆರವಾಗಿವೆ ಮತ್ತು ನೆರವಾಗುತ್ತಿವೆ.

ಅದೇ ಸಮಯದಲ್ಲಿ, ಸಮಾಜವಾದಿ ದೇಶಗಳೊಂದಿಗೆ ಆರ್ಥಿಕ ಸಂಬಂಧಗಳನ್ನು ಅವುಗಳ ಮೇಲೆ ರಾಜಕೀಯ ಒತ್ತಾಯವನ್ನು ತರುವ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಾಮ್ರಾಜ್ಯಶಾಹಿ ವಲಯಗಳವರು ತಮ್ಮ ಪ್ರಯತ್ನಗಳನ್ನು ಹೆಚ್ಚಿಸುತ್ತಿರುವುದನ್ನು 'ಸಿಎಂಇಎ' ದೇಶಗಳು ಮತ್ತೆ ಕಾಣುತ್ತಿವೆ. ಉದಾಹರಣೆಗೆ, ಪೋಲೆಂಡ್ ಪಶ್ಚಿಮ ರಾಷ್ಟ್ರಗಳಿಗೆ ಕೊಡಬೇಕಾಗಿರುವ ವಿಪರೀತ ಸಾಲಗಳು ಮತ್ತು ಉಪಕರಣಗಳು ಹಾಗೂ ಕಚ್ಚಾ ಮೂಲಗಳಿಗಾಗಿ ಪಶ್ಚಿಮ ರಾಷ್ಟ್ರಗಳ ಆಮದಿನ ಮೇಲೆ ಅದರ ಆರ್ಥಿಕ ಅವಲಂಬನೆಯನ್ನು ಉಪಯೋಗಿಸಿಕೊಂಡು

ಅಮೇರಿಕಾ ಮತ್ತು ಇತರ ಕೆಲವು 'ನ್ಯಾಟೋ' ದೇಶಗಳ ಆಳುವ ವಲಯಗಳವರು 1980ರ ದಶಕದ ಪ್ರಾರಂಭದಲ್ಲಿ ಪೋಲಿಷ್ ಜನತಾ ಗಣರಾಜ್ಯದ ಮೇಲೆ ಆರ್ಥಿಕ ಮತ್ತು ವಿತ್ತೀಯ ದಿಗ್ಬಂಧನವನ್ನು ಹಾಕಿದರು. ಹಾಗೆ ಮಾಡುವುದರ ಮೂಲಕವಾಗಿ, ಅವರು ಪೋಲಿಷ್ ಜನತೆಗೆ ಅವರ ದೇಶವು ಏನು ಮಾಡಬೇಕು, ಏನು ಮಾಡಬಾರದು ಎಂದು ಆಜ್ಞಾಪಿಸಲು ಪ್ರಯತ್ನಿಸಿ ದರು. ಹಂದಾಮೀ ಅಂದಾಜುಗಳ ಪ್ರಕಾರ ಪಾಶ್ಚಾತ್ಯ ದೇಶಗಳ ಈ "ದಿಗ್ಬಂಧನ"ದಿಂದ ಪೋಲೆಂಡಿಗೆ ಆಗಿರುವ ನಷ್ಟ ಈಗಾಗಲೇ 12,500 ಮಿಲಿಯ ಡಾಲರುಗಳಷ್ಟಾಗಿವೆ. ಆದರೂ ಅವರಿಗೆ ಸಮಾಜವಾದಿ ಪೋಲೆಂಡನ್ನು ಬಗ್ಗಿಸಲಾಗಿಲ್ಲ. ಕಠಿಣವಾದ ಆರ್ಥಿಕ ಮುಗ್ಗಟ್ಟಿನ ಸಮ ಯದಲ್ಲಿ ಪೋಲೆಂಡ್ ತನ್ನ ಮಿತ್ರ ಹಾಗೂ ಸೋದರ ರಾಷ್ಟ್ರಗಳ, ಮುಖ್ಯವಾಗಿ ಸೋವಿಯೆತ್ ಒಕ್ಕೂಟದ ವ್ಯಾಪಕವಾದ ನೆರವಿನ ಮೇಲೆ ಅವಲಂಬಿತವಾಯಿತು.

ಅಂಥ ಸಂಗತಿಗಳಿಂದ ಸರಿಯಾದ ತೀರ್ಮಾನಗಳಿಗೆ ಬಂದು, 'ಸಿಎಂಇಎ' ದೇಶಗಳ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಾರ್ಟಿಗಳು ವಿದೇಶೀ ಆರ್ಥಿಕ ಸಂಬಂಧಗಳ ವಿಚಾರದಲ್ಲಿ ಸುವ್ಯವಸ್ಥಿತವಾದ ಮತ್ತು ವಾಸ್ತವವಾದ ನೀತಿಯನ್ನು ಅನುಸರಿಸುವ ಅಗತ್ಯವನ್ನು ಒತ್ತಿ ಹೇಳಿವೆ. ಸಾಮ್ರಾಜ್ಯಶಾಹಿ ವಲಯಗಳ ಬೆದರಿಕೆಯ ತಂತ್ರಗಳಿಂದ ಮತ್ತು ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿ ಅಥವಾ ಬಂಡವಾಳಶಾಹಿ ಜಾಗತಿಕ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ದೀರ್ಘಾವಧಿಯ ಬಿಕ್ಕಟ್ಟಿನ ಆಂದೋಳನಗಳ ವಿನಾಶಕಾರಿ ಪರಿಣಾಮಗಳಿಂದ ಕಾಪಾಡಿಕೊಳ್ಳಲು ಈ ಬಗೆಯ ನೀತಿಯೊಂದೇ ಮಾರ್ಗ.

'ಸಿಎಂಇಎ' ಸದಸ್ಯ ರಾಷ್ಟ್ರಗಳ ಆರ್ಥಿಕ ಶೃಂಗ ಸಮ್ಮೇಳನವು ಕೈಗೊಂಡ ತೀರ್ಮಾನಗ ಳನ್ನು ಕಾರ್ಯಗತಮಾಡುವುದರಿಂದ. ಸಮಾಜವಾದಿ ದೇಶಗಳಿಗೆ ತಮ್ಮ ಆರ್ಥಿಕ ಪ್ರಾಬಲ್ಯ ಮತ್ತು ಭದ್ರತೆಯನ್ನು ಬಲಗೊಳಿಸಿಕೊಳ್ಳುವುದಕ್ಕೆ, ಮತ್ತು ಅಂತರರಾಷ್ಟ್ರೀಯ ಸಾಮ್ರಾಜ್ಯ ಶಾಹಿ ವತಿಯ ಯಾವುದೇ ಬಗೆಯಲ್ಲಿ ಅವುಗಳ ರಾಷ್ಟ್ರೀಯ ಆರ್ಥಿಕಗಳನ್ನು ಅಸ್ಥಿರಗೊಳಿ ಸಲು ಬರುವ ಒತ್ತಾಯಗಳನ್ನು ಎದುರಿಸುವುದಕ್ಕೆ ನಿಸ್ಸಂದೇಹವಾಗಿ ಸಹಾಯಕವಾಗಿರುವುದು. ಸಮ್ಮೇಳನದಲ್ಲಿ ಅನುಮೋದಿಸಲಾದ "ಶಾಂತಿ ಮತ್ತು ಅಂತರರಾಷ್ಟ್ರೀಯ ಆರ್ಥಿಕ ಸಹಕಾರ ವನ್ನು ಕಾಪಾಡುವ" ಘೋಷಣೆಯು, ರಾಜಕೀಯ ಒತ್ತಾಯ ತರುವುದಕ್ಕಾಗಿ ಆರ್ಥಿಕ ಸಂಬಂ ಧಗಳನ್ನು ಒಂದು ಸಾಧನವಾಗಿ ಉಪಯೋಗಿಸಿಕೊಳ್ಳುವುದು ಸಾರ್ವತ್ರಿಕವಾಗಿ ಅಂಗೀಕೃತವಾ ಗಿರುವ ಅಂತರರಾಷ್ಟ್ರೀಯ ನಿಯಮ, ವಿಶ್ವಸಂಸ್ಥೆಯ ಪ್ರಣಾಳಿಕೆ ಮತ್ತು ಯೂರೋಪಿನಲ್ಲಿ ಭದ್ರತೆ ಹಾಗೂ ಸಹಕಾರಕ್ಕಾಗಿ ನಡೆದ ಸಮ್ಮೇಳನದಲ್ಲಿ ಅಂಗೀಕೃತವಾದ ಅಂತಿಮ ದಸ್ತಾವೇಜಿನ ಉಲ್ಲಂಘನೆಯಾಗಿರುವುದಷ್ಟೇ ಅಲ್ಲದೆ, ತುಂಬಾ ಕೆಟ್ಟದಾದ ನೀತಿಯಾಗಿರುತ್ತದೆ, ಎಂಬುದಾಗಿ ಸರಿಯಾಗಿಯೇ ಹೇಳಿದೆ. ಅಂಥ ಒಂದು ನೀತಿಯಿಂದ ಸಮಾಜವಾದಿ ಸಮುದಾಯದ ದೇಶಗಳು ತಮ್ಮ ಪಥವನ್ನು ಬದಲಿಸುವಂತೆ ಮಾಡಲು ಸಾಧ್ಯವಿಲ್ಲ. ತಮ್ಮ ಆರ್ಥಿಕಾಭಿವೃದ್ಧಿ ಯೋಜನೆ ಗಳನ್ನು ವಿಫಲಗೊಳಿಸಲು ವಿರೋಧಿಗಳು ನಡೆಸುತ್ತಿರುವ ಪ್ರಯತ್ನಗಳ ಇದಿರಿನಲ್ಲಿ 'ಸಿಎಂಇಎ' ದೇಶಗಳು ಕಸುವಿನಿಂದ ತಮ್ಮ ಆಂತರಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತಿವೆ. ಪರಸ್ಪರ ನೆರವನ್ನು ವಿಸ್ತರಿಸುತ್ತಿವೆ ಮತ್ತು ಪಾಶ್ಚಿಮಾತ್ಯ ದೇಶಗಳು ಮತ್ತು ಉದ್ಯಮಗಳೊಂದಿಗೆ ಸಮಾನವಾದ ಮತ್ತು ಪರಸ್ಪರ ಅನುಕೂಲಕರವಾದ ಸಹಕಾರವನ್ನು ಮುಂದುವರಿಸುತ್ತಿವೆ.

ಅಮೆರಿಕಾದ ಆಡಳಿತವು ಅಡ್ಡಿಮಾಡಲು ಪ್ರಯತ್ನಿಸಿ ವಿಫಲಗೊಂಡ, ದೊಡ್ಡ ಪ್ರಮಾಣದ ಇಂಧನಾನಿಲ ಕೊಳವೆ ಹಾಸುವ ಯೋಜನೆಯನ್ನು ಅತ್ಯಲ್ಪ ಕಾಲಾವಧಿಯಲ್ಲಿ ಕಾರ್ಯಗತ ಮಾಡಿದ್ದು, ಅದಕ್ಕೆ ಒಂದು ಉದಾಹರಣೆಯಾಗಿದೆ.

ಆರ್ಥಿಕ ಸಂಬಂಧಗಳನ್ನು ಸಮಾಜವಾದಿ ದೇಶಗಳೊಂದಿಗೆ ಸಾಮಾಜಿಕ ವ್ಯವಸ್ಥೆಯನ್ನು ಮತ್ತು ತತ್ವಬದ್ಧವಾದ ನೀತಿಯನ್ನು ಬದಲಿಸಲು ಒಂದು ಸಾಧನವಾಗಿ ಉಪಯೋಗಿಸಿಕೊಳ್ಳುವ ಯಾವುದೇ ಪ್ರಯತ್ನವೂ ವಿಫಲಗೊಳ್ಳುವುದು ಖಚಿತ.

ಐತಿಹಾಸಿಕ ಅನುಭವದಿಂದ ಸರಿಯಾದ ಪಾಠಗಳನ್ನು ಕಲಿಯದೇ ಹೋಗಿರುವವರಿಗೆ 1980ರ ದಶಕವು ಹೊಸ ಪಾಠವನ್ನು ಕಳಿಸಿಕೊಟ್ಟಿದೆ. ●

# ಸಮಾಜವಾದ ಮತ್ತು ಶಾಂತಿಗಾಗಿ ಹೋರಾಟ

## ಅಂತರರಾಷ್ಟ್ರೀಯ ಉದ್ರಿಕ್ತತೆಯನ್ನು ಹೆಚ್ಚಿಸುತ್ತಿರುವವರು ಯಾರು ?

1970 ರ ದಶಕದ ಸೌಮನಸ್ಯದ ಕಾಲದಲ್ಲಿ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ವಿಶೇಷವಾಗಿ ಕಾಣಿಸಿಕೊಂಡ ಜಾಗತಿಕ ಸಮಾಜವಾದದ ಬೆಳೆಯುತ್ತಿದ್ದ ಗೌರವ ಮತ್ತು ಬಲ ಸಂವರ್ಧನೆಯು ಪ್ರಪಂಚದಾದ್ಯಂತ ವೇಗಗೊಂಡ ಸಾಮಾಜಿಕ ಪ್ರಗತಿಯಿಂದ ಅಭೇದ್ಯವಾದುದಾಗಿದೆ. ಯೂರೋಪು ಖಂಡದ ಗ್ರೀಸ್, ಸ್ಪೇನ್ ಮತ್ತು ಪೋರ್ಚುಗಲ್‌ಗಳಲ್ಲಿ ಫಾಸಿಸ್ಟ್ ಸರ್ವಾಧಿಕಾರಗಳ ಪತನ, ಆಫ್ರಿಕಾದಲ್ಲಿ ಕೊನೆಯ ವಸಾಹತು ಸಾಮ್ರಾಜ್ಯದ ಅಂತ್ಯ, ಏಶಿಯ ಮತ್ತು ಲ್ಯಾಟಿನ್ ಅಮೆರಿಕಾಗಳಲ್ಲಿ ರಾಷ್ಟ್ರೀಯ ವಿಮೋಚನಾ ಚಳವಳಿಗಳ ಬೆಳವಣಿಗೆ, ಇವುಗಳಲ್ಲಿ ಅದನ್ನು ಕಾಣಬಹುದಾಗಿದೆ. ಮುಂದುವರಿದ ಬಂಡವಾಳಶಾಹಿ ದೇಶಗಳನ್ನು ಒಳಗೊಂಡು, ಪ್ರಪಂಚದಾದ್ಯಂತ ದುಡಿಯುವ ಜನ ಸಮೂಹಗಳ ಮಧ್ಯೆ ಸಮಾಜವಾದಿ ವಿಚಾರಗಳಲ್ಲಿ ಮತ್ತು ನಿಜವಾದ ಸಮಾಜವಾದದಲ್ಲಿ ಆಸಕ್ತಿಯು ಸಾಕಷ್ಟು ಬೆಳೆದಿದೆ. ಈ ಪ್ರವೃತ್ತಿಯು ಅತ್ಯಂತ ಪ್ರತಿಗಾಮಿ ಸಾಮ್ರಾಜ್ಯಶಾಹಿ ವಲಯಗಳಲ್ಲಿ ಗಾಬರಿ ಹಾಗೂ ಹೆದರಿಕೆಯನ್ನುಂಟು ಮಾಡುತ್ತಿದೆ. ಇತಿಹಾಸದ ಪುರೋಗಾಮಿ ಗತಿಯನ್ನು ಅವರು ಯಾವತ್ತೂ ತಮ್ಮ ಸಂಕುಚಿತ ವರ್ಗ ಹಿತಾಸಕ್ತಿಗಳಿಗೆ ನೇರವಾದ ಭೀತಿಯಾಗಿ ಪರಿಗಣಿಸಿದ್ದಾರೆ. ಅವರು ಪ್ರತಿಗಾಮಿಯ ಅನಿವಾರ್ಯ ಪರಾಜಯಗಳನ್ನು "ಜಾಗತಿಕ ಕಮ್ಯೂನಿಸಂನ ವಿಶ್ವಾಸಘಾತುಕ ಸಂಚು" ಎಂಬ, ಒಂದಲ್ಲ ಒಂದು ಬಗೆಯ "ಮಿತವಾದಿಗಳು" ಜಾಗತಿಕ ಕಮ್ಯೂನಿಸಂನೊಂದಿಗೆ "ಶಾಮೀಲಾದುದರ" ಪರಿಣಾಮ ಎಂಬ ಕಟ್ಟುಕತೆಗಳಿಂದ ವಿವರಿಸುತ್ತಾರೆ.

ಸಾಮಾಜಿಕ ಬೆಳವಣಿಗೆಯನ್ನು ಸ್ಥಗಿತಗೊಳಿಸಲು, ಬಂಡವಾಳಶಾಹಿ ಮತ್ತು ವಿಕಾಸಶೀಲ ದೇಶಗಳ ಜನತೆಯನ್ನು ಸಮಾಜವಾದಿ ಜಗತ್ತಿನಿಂದ ಪ್ರಭಾವಿತವಾಗುವುದರಿಂದ ದೂರವಿರಿಸಲು ಮತ್ತು ಕೊನೆಯದಾಗಿ, ಒಂದು ಬಗೆಯ ಸಾಮಾಜಿಕ-ಐತಿಹಾಸಿಕ ಪ್ರತೀಕಾರ ತೆಗೆದುಕೊಳ್ಳಲು, ಸಾಮ್ರಾಜ್ಯಶಾಹಿ ರಾಜಕಾರಣಿಗಳು ಮತ್ತು ಸಿದ್ಧಾಂತಿಗಳು ನಡೆಸುತ್ತಿರುವ ಪ್ರಯತ್ನವು ಅಂತರರಾಷ್ಟ್ರೀಯ ಪರಿಸ್ಥಿತಿಯು ಉಲ್ಬಣಗೊಳ್ಳುವುದಕ್ಕೆ ಮತ್ತು ಪ್ರಪಂಚದಲ್ಲಿ ಶಕ್ತಿಗಳ ಸಂತುಲನವನ್ನು ತಮ್ಮ ಕಡೆಗೆ ವಾಲಿಸಿಕೊಳ್ಳಲು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ

ಪ್ರಯತ್ನಕ್ಕೆ ಮುಖ್ಯವಾದ ಕಾರಣಗಳಾಗಿವೆ. ಸೋವಿಯೆತ್ ಒಕ್ಕೂಟ ಮತ್ತು ಅಮೆರಿಕ, ವಾರ್ಸಾ ಕೌಲು ಸಂಘಟನೆ ಮತ್ತು 'ನ್ಯಾಟೊ'ಗಳ ನಡುವೆ ಈಗ ಹೆಚ್ಚು ಕಡಿಮೆ ಇರುವ ಮಿಲಿಟರಿ ಸಂತುಲನವನ್ನು ವ್ಯತ್ಯಾಸಗೊಳಿಸಲು ಮಾಡುತ್ತಿರುವ ಯತ್ನಗಳಲ್ಲಿ ಇವನ್ನು ಕಾಣಬಹುದಾಗಿದೆ.

ಸೌಮನಸ್ಯದ ವರ್ಷಗಳನ್ನು ಸಮಾಜವಾದವು ಪಶ್ಚಿಮ ರಾಷ್ಟ್ರಗಳ ಜಾಗರೂಕತೆಯನ್ನು ನಿಷ್ಕ್ರಿಯಗೊಳಿಸಲು ಉಪಯೋಗಿಸಿಕೊಂಡಿತು, ಅಂತರರಾಷ್ಟ್ರೀಯ ಪರಿಸ್ಥಿತಿಯು ಹದಗೆಟ್ಟಿರುದಕ್ಕೆ "ಕಮ್ಯೂನಿಸ್ಟ್ ವಿಸ್ತಾರಣಾವಾದ"ವೇ ಕಾರಣ ಎಂಬುದಾಗಿ ಪ್ರಪಂಚದ ಜನರಿಗೆ ಮನವರಿಕೆ ಮಾಡಲು ಕಮ್ಯೂನಿಸ್ಟ್ ವಿರೋಧಿಗಳು ಪ್ರಯತ್ನಿಸುತ್ತಿದ್ದಾರೆ.

ಈ ವಿಚಾರವನ್ನು ಸಮರ್ಥಿಸಿಕೊಳ್ಳಲು ಆಫ್ಘಾನಿಸ್ತಾನಕ್ಕೆ ಸೋವಿಯೆತ್ ಪಡೆಗಳ ಪ್ರವೇಶವನ್ನು ಪದೇ ಪದೇ ಪ್ರಸ್ತಾಪಿಸುತ್ತಾರೆ. ಆಫ್ಘಾನಿಸ್ತಾನ ಜನವಾದಿ ಗಣರಾಜ್ಯಕ್ಕೆ, ಅಲ್ಲಿನ ಸರಕಾರದ ಕೋರಿಕೆಯ ಮೇರೆಗೆ ಸೋವಿಯೆತ್ ಒಕ್ಕೂಟವು ಸೀಮಿತ ಪ್ರಮಾಣದಲ್ಲಿ ತನ್ನ ಸೇನೆಯನ್ನು ಕಳಿಸಿಕೊಟ್ಟಿದೆ ಎಂಬುದನ್ನು ಗಮನಿಸುವುದು ಅಗತ್ಯ. ದೇಶದ ಅಂತರಿಕ ವ್ಯವಹಾರಗಳಲ್ಲಿ ಮೊದಲು ಪರೋಕ್ಷವಾಗಿ, ನಂತರ ಪ್ರತ್ಯಕ್ಷವಾಗಿ ಅಮೇರಿಕ ಮತ್ತು ಇತರ ಕೆಲವು ರಾಷ್ಟ್ರಗಳು ತೀವ್ರವಾಗಿ ಹಸ್ತಕ್ಷೇಪ ನಡೆಸುತ್ತಿದ್ದುದರಿಂದ ಆಫ್ಘನ್ ಸರಕಾರವು ವಿಧಿಯಿಲ್ಲದೆ ಸೋವಿಯೆತ್ ಒಕ್ಕೂಟದ ನೆರವನ್ನು ಕೋರಿತು. ಸಾಮ್ರಾಜ್ಯಶಾಹಿಗಳು ಮತ್ತು ಅಂತರರಾಷ್ಟ್ರೀಯ ಪ್ರತಿಗಾಮಿಗಳು ಆಫ್ಘಾನಿಸ್ತಾನದ ವಿರುದ್ಧ ನಿಜವಾದ ಯುದ್ಧ ನಡೆಸುತ್ತಿದ್ದಾರೆ, ಆದರೆ ಅದು ಅಘೋಷಿತವಾದ ಯುದ್ಧವಾಗಿದೆ ಅಷ್ಟೆ.



ಅಮೆರಿಕಾ ತನ್ನ ವಿದೇಶಾಂಗ ನೀತಿಯಲ್ಲಿ ಸೌಮನಸ್ಯ ನೀತಿಯನ್ನು ಎಂದೋ ಕೈಬಿಟ್ಟು ಸಮಾಜವಾದದೊಂದಿಗೆ ಎದುರಾಳಿತನದ ಧೋರಣೆಗೆ ಪ್ರಾಶಸ್ತ್ಯ ನೀಡಿತು. ಸಮಾಜವಾದಿ ವ್ಯವಸ್ಥೆಯನ್ನು "ಶಿಥಿಲ"ಗೊಳಿಸುವುದಕ್ಕೆ ಸೌಮನಸ್ಯವನ್ನು ಉಪಯೋಗಿಸಿಕೊಳ್ಳಲು, ನಿಜವಾಗಿ ಹೇಳಬೇಕೆಂದರೆ, ಸಾಮ್ರಾಜ್ಯಶಾಹಿ ರಹಸ್ಯ ಸಂಸ್ಥೆಗಳ ಬೆಂಬಲ ಮತ್ತು ಹಣದಿಂದ ಪ್ರೇರಿತಗೊಂಡ ಭಿನ್ನಮತೀಯರು ಮತ್ತು ಅವರ ತಂಡಗಳ ನೆರವಿನಿಂದ ಒಳಗಿನಿಂದಲೇ ಸಮಾಜವಾದವನ್ನು ಬುಡಮೇಲು ಮಾಡಲು ಕಮ್ಯೂನಿಸ್ಟ್ ವಿರೋಧಿ ತಂತ್ರಜ್ಞರ ಹೆಬ್ಬಯಕೆಯ ಯೋಜನೆಗಳು ವಿಫಲಗೊಂಡುದೇ, ನೀತಿಯಲ್ಲಿನ ಆ ಬದಲಾವಣೆಗೆ ಕಾರಣವಾಗಿತ್ತು. ಆದರೆ, ವಸ್ತು ಸ್ಥಿತಿ ಬೇರೆಯೇ ಆಗಿತ್ತು, ಭಿನ್ನಮತೀಯರು ಎನಿಸಿಕೊಂಡವರು ನಿಜವಾದ ರಾಷ್ಟ್ರದ್ರೋಹಿಗಳಾಗಿದ್ದು ಸಮಾಜವಾದಿ ದೇಶಗಳಲ್ಲಿನ ಜನತೆಯಲ್ಲಿ ಬೆಂಬಲವೇ ಇಲ್ಲದವರಾಗಿದ್ದರು. ಮಾನವ ಹಕ್ಕುಗಳ "ಕಾಳಜಿ"ಯ ನೆಪದಲ್ಲಿ ಸಮಾಜವಾದಿ ದೇಶಗಳ ಅಂತರಿಕ ವ್ಯವಹಾರಗಳಲ್ಲಿ ವ್ಯಾಪಕವಾಗಿ ಹಸ್ತಕ್ಷೇಪ ಮಾಡುವ ಪ್ರಯತ್ನಗಳನ್ನು ದೃಢವಾಗಿ ಹಿಮ್ಮೆಟ್ಟಿಸಲಾಗಿದೆ. ಈ ಅನುಭವದಿಂದ ಸರಿಯಾದ ಪಾಠಗಳನ್ನು ಕಲಿಯುವುದಕ್ಕೆ ಬದಲಾಗಿ, ಸೌಮನಸ್ಯವನ್ನು ಸ್ವಾರ್ಥಕ್ಕಾಗಿ, ನೀಚ ಸಂಕುಚಿತ ಅರ್ಥದಿಂದ ಉಪಯೋಗಿಸುವುದನ್ನು ತ್ಯಜಿಸುವುದಕ್ಕೆ ಪ್ರತಿಯಾಗಿ, ಅಮೆರಿಕಾದ ಆಡಳಿತ ವಲಯಗಳವರು ಸಮಾಜವಾದಿ ದೇಶಗಳ ಮೇಲೆ ಒತ್ತಾಯವನ್ನು ಇನ್ನಷ್ಟು ಹೆಚ್ಚಿಸಲು ಮತ್ತು ಶಸ್ತ್ರಾಸ್ತ್ರ ಪೈಪೋಟಿಯನ್ನು ವರ್ಧಿಸಲು ನೋಡುತ್ತಿದ್ದಾರೆ. ನಿಜವಾಗಿ ಹೇಳಬೇಕೆಂದರೆ ಶೀತ ಯುದ್ಧದ ನೀತಿಯು ಹೊಸ ಆವತರಣಿಕೆಯೊಂದನ್ನು ಚಾಲ್ತಿಗೆ

ತಂದಿದ್ದಾರೆ, ಅಮೇರಿಕಾದ ಅತ್ಯಂತ ಉಗ್ರಗಾಮಿ ಸಾಮ್ರಾಜ್ಯಶಾಹಿ ವಲಯಗಳವರು ಆದರ ನೆರವಿನಿಂದ ಒಂದು ಸಾಮಾಜಿಕ ವ್ಯವಸ್ಥೆಯಾಗಿ ಸಮಾಜವಾದವನ್ನು ತೊಡೆದು ಹಾಕಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ಗುರಿಯನ್ನು ಸಾಧಿಸಲು ಅವರು ನ್ಯೂಕ್ಲಿಯರ್ ಯುದ್ಧವನ್ನು ನಡೆಸುವುದರಿಂದ ಹಿಡಿದು ಏನೂ ಮಾಡಲು ಸಿದ್ಧವಾಗಿದ್ದಾರೆ.

ಜೇಮ್ಸ್ ಇ. ಕಾರ್ಟರ್ ಅಮೇರಿಕಾದ ಅಧ್ಯಕ್ಷರಾಗಿದ್ದ ಕಾಲದಲ್ಲಿ ಸೌಮನಸ್ಯದ ನೀತಿಯು ಸೋವಿಯೆತ್ ಒಕ್ಕೂಟದೊಂದಿಗೆ ಎದುರಾಳಿತನಕ್ಕೆ ತಿರುಗಲಾರಂಭಿಸಿತು. ಅವರ ನಂತರ ಅಧಿಕಾರಕ್ಕೆ ಬಂದ ರೋನಾಲ್ಡ್ ರೀಗನ್ ಸಮಾಜವಾದದ ಮೇಲೆ ಮಿಲಿಟರಿ ಶ್ರೇಷ್ಠತೆಯನ್ನು ಸಾಧಿಸುವ ಗುರಿಯುಳ್ಳ ಸಾಹಸಕಾರಿ ನೀತಿಯನ್ನು ಘೋಷಿಸಿ, ಅದನ್ನು ದೃಢವಾದಿ ಕಾರ್ಯ ಗತ ಮಾಡುವುದರಲ್ಲಿ ಹಿಂದಿನವರೆಲ್ಲರಿಗಿಂತಲೂ ಉಗ್ರವಾಗಿದ್ದಾರೆ. ಅವರು ಕಮ್ಯೂನಿಸುನ ವಿರುದ್ಧ ಹೊಸ ಧರ್ಮ ಯುದ್ಧವನ್ನು ಸಾರಿದ್ದಾರೆ ಮತ್ತು ತಮ್ಮ ಆಡಳಿತೆಯಲ್ಲಿ ಅವರು ಅದನ್ನು ರಾಜ್ಯ ನೀತಿಯ ಮಟ್ಟಕ್ಕೇರಿಸಿದ್ದಾರೆ.

ಅಧಿಕಾರವನ್ನು ವಹಿಸಿಕೊಂಡ ಒಡನೆಯೇ ಅಧ್ಯಕ್ಷ ರೀಗನ್ ರವರು ಕಮ್ಯೂನಿಸಂ ಪ್ರಪಂಚದ ಮೇಲೆ ಆಧಿಪತ್ಯ ನಡೆಸುವ ಗುರಿಯುಳ್ಳ ಒಂದು ಸಿದ್ಧಾಂತವಾಗಿದೆ ಎಂಬ ಹಳೆಯ ಅಪಾದನೆಯನ್ನೇ ಮಾಡಿದರು. ಒಡನೆಯೇ ಸಾಮ್ರಾಜ್ಯಶಾಹಿ ಪ್ರಚಾರ ಯಂತ್ರವು ಈ ಹಳೆಯ ಹಾಡನ್ನೇ ಎತ್ತಿಕೊಂಡು ಪತ್ರಿಕೆಗಳಲ್ಲಿ, ಟಿ. ವಿ. ಕಾರ್ಯಕ್ರಮಗಳಲ್ಲಿ, ರೇಡಿಯೋ ಪ್ರಸಾರಗಳಲ್ಲಿ, ಮತ್ತಿತರ ಮಾಧ್ಯಮಗಳಲ್ಲಿ ಅಪಪ್ರಚಾರವನ್ನಾರಂಭಿಸಿತು.

ಇಂದೂ ಕೂಡ, ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ತಮ್ಮ ಆದರ್ಶಗಳ ಯಶಸ್ವಿಗೆ, ಸಮಾಜವಾದದ ಪ್ರಗತಿಯಲ್ಲಿ ಮತ್ತು ಎಲ್ಲ ವರ್ಗ ಭೇದಗಳನ್ನು ನಿವಾರಿಸುವುದನ್ನು ಸಾಧ್ಯ ಮಾಡಿಸುವ, ಪ್ರತಿಯೊರ್ವ ವ್ಯಕ್ತಿಯ ಸಾಮರಸ್ಯ ವಿಕಾಸಕ್ಕೆ ಅತ್ಯಂತ ಅನುಕೂಲಕರವಾದ ಪರಿ ಸ್ಥಿತಿಗಳನ್ನು ನಿರ್ಮಿಸುವ ಕಮ್ಯೂನಿಸ್ಟ್ ಸಮಾಜದ ಸಂಘಟನೆಯತ್ತ ಮುನ್ನಡೆಯಲ್ಲಿ ಭರವಸೆ ಇರಿಸಿಕೊಂಡಿದ್ದಾರೆ. ಅಂಥ ಭರವಸೆಗಳು ನಾನಾ ಖಂಡಗಳ ಹಲವು ದೇಶಗಳಲ್ಲಿ ಸ್ಥಾಪಿತವಾದಿ ರುವ ಹೊಸ ಸಾಮಾಜಿಕ ವ್ಯವಸ್ಥೆಯನ್ನು ನಿರಂತರವಾಗಿ ಉತ್ತಮಗೊಳಿಸುವುದರ ಮೇಲೆ ಆಧಾರಿತವಾಗಿವೆ. ಒಟ್ಟಾರೆ ಹೇಳಬೇಕೆಂದರೆ, ನಿಕಟವಾಗಿ ಮತ್ತು ಫಲಪ್ರದವಾಗಿ ಸಹಕರಿಸು ತ್ತಿರುವ ಸಮಾಜವಾದಿ ದೇಶಗಳು ಅಭಿವೃದ್ಧಿಯ ಉನ್ನತ ಸ್ತರಗಳಿಗೆ ಯಶಸ್ವಿಯಾಗಿ ಮುನ್ನಡೆ ಯಲು ಸಾಕಷ್ಟು ಸಾಮರ್ಥ್ಯವನ್ನು ಹೊಂದಿವೆ. ಅವುಗಳ ಪ್ರಗತಿಗೆ ಈ ಭೂಮಂಡಲದ ಮೇಲಿಂದ ಬಂಡವಾಳಶಾಹಿ ವ್ಯವಸ್ಥೆಯು ನಿರ್ನಾಮಗೊಳ್ಳಬೇಕಾಗೇನಿಲ್ಲ. ಇನ್ನು ಅಂತರ ರಾಷ್ಟ್ರೀಯ ಪರಿಸ್ಥಿತಿಯ ಮಟ್ಟಿಗೆ ಹೇಳಬೇಕೆಂದರೆ, ಯುದ್ಧದ ಭೀತಿಯನ್ನು ತಪ್ಪಿಸುವುದು, ಶಸ್ತ್ರಾಸ್ತ್ರ ಪೈಪೋಟಿಗೆ ವಿನಿಯೋಗವಾಗುತ್ತಿರುವ ಹಣವನ್ನು ಶಾಂತಿಯುತ ನಿರ್ಮಾಣ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುದು ಮತ್ತು ಶಾಶ್ವತವಾದ ಶಾಂತಿಯನ್ನು ಸ್ಥಾಪಿಸುವುದು ಅಗತ್ಯವಾಗಿದೆ.

ಕಮ್ಯೂನಿಸ್ಟ್ ವಿರೋಧಿಗಳ ಅಪಾನೆಗಳಿಗೆ ಪ್ರತಿಯಾಗಿ, ಸಮಾಜವಾದಿ ದೇಶ ಗಳಿಗೆ ಸೈದ್ಧಾಂತಿಕವಾಗಿಯಾಗಲಿ ಅಥವಾ ಆಚರಣೆಯಲ್ಲಾಗಲಿ, ಯಾವುದೇ ಇತರ ದೇಶದ ಮೇಲಾಗಲಿ, ಜನತೆಯ ಮೇಲಾಗಲಿ, ತಮ್ಮ ಜೀವನ ವಿಧಾನವನ್ನು ಮತ್ತು ಸಾಮಾ

ಜಿಕ ಸಂಘಟನೆಯು ತಮ್ಮ ಆದರ್ಶಗಳನ್ನು ಹೊರಿಸಲು ಇಚ್ಛಿಯಿಲ್ಲ. ತಮ್ಮ ಸಾಮಾಜಿಕ ವ್ಯವಸ್ಥೆಯು ಉತ್ತಮವಾದ್ದು, ಅನುಕೂಲಕರವಾದದ್ದು ಎಂಬುದರ ಬಗ್ಗೆ ಅಪಾರವಾದ ವಿಶ್ವಾಸವಿದ್ದರೂ, ಅವು ಅದನ್ನು ಇತರರ ಮೇಲೆ ಹೊರಿಸಲು ಇಚ್ಛಿಸುವುದಿಲ್ಲ.

ಪ್ರಪಂಚದ ಎಲ್ಲ ಪುರೋಗಾಮಿ ಶಕ್ತಿಗಳೊಂದಿಗೆ ಕೂಡಿಕೊಂಡು ಸಮಾಜವಾದಿ ದೇಶಗಳು ಸಾಮ್ರಾಜ್ಯಶಾಹಿಗಳ ಮೇಲೆ ಹೊರಿಸಲು ನಿಜವಾಗಿ ಪ್ರಯತ್ನಿಸುತ್ತಿರುವ ಏಕೈಕ ವಿಷಯವೆಂದರೆ ಜನತೆಯು ನಡುವೆ ಶಾಂತಿ ಸ್ಥಾಪನೆ. ಪ್ರಪಂಚದ ಪ್ರಥಮ ಸಮಾಜವಾದಿ ರಾಷ್ಟ್ರವು ಅಸ್ತಿತ್ವಕ್ಕೆ ಬಂದಂದಿನಿಂದಲೂ ಕ್ರಮಿಸಿರುವ ಪಥವು ಶಾಂತಿಗಾಗಿ ಶ್ರಮಿಸುವುದರೊಂದಿಗೆ ಅಭೇದ್ಯವಾಗಿ ಸಂಬಂಧಿಸಿದೆ. ಎಳೆಯ ಸೋವಿಯೆತ್ ರಾಜ್ಯವು ಅಸ್ತಿತ್ವಕ್ಕೆ ಬಂದಾಗ ಮಾಡಿದ ಮೊದಲ ಅತಿ ಮುಖ್ಯವಾದ ಕಾರ್ಯ ಯುದ್ಧವನ್ನು ಹಿಂತೆಗೆದುಕೊಳ್ಳುವುದಾಗಿತ್ತು. ಸೋವಿಯೆತ್ ಸರಕಾರವು ಸ್ಥಾಪನೆಯಾದ ಮೊದಲಿನಲ್ಲಿ ವ್ಲದೀಮಿರ್ ಇಲ್ಯಿಚ್ ಲೆನಿನ್‌ರವರು ಅಮೆರಿಕಾದ ಕಾರ್ಮಿಕರ ಬೆಂಬಲವನ್ನಪೇಕ್ಷಿಸಿ ಹೆಮ್ಮೆಯಿಂದ, ನಿರೀಕ್ಷೆಯಿಂದ ಹೀಗೆ ಬರೆದಿದ್ದರು: "...ಸಾಮ್ರಾಜ್ಯಶಾಹಿಗಳಿಂದ ಛಿದ್ರಗೊಂಡು, ಸೂರೆಗೊಂಡಿದ್ದಾಗ್ಯೂ, ಸೋವಿಯೆತ್ ಸಮಾಜವಾದಿ ಗಣರಾಜ್ಯವು ಸಾಮ್ರಾಜ್ಯಶಾಹಿ ಯುದ್ಧದಿಂದ ಹೊರಗೆ ಬಂದಿತು ಮತ್ತು ಇಡೀ ಜಗತ್ತಿನ ಕಣ್ಣಿಗೆ ಬೀಳುವಂತೆ ಶಾಂತಿಯ, ಸಮಾಜವಾದದ ಪತಾಕೆಯನ್ನು ಎತ್ತಿ ಹಿಡಿಯಿತು."

ಇಂದು, ಶಾಂತಿ ಮತ್ತು ಸಮಾಜವಾದದ ಪತಾಕೆಯಡಿಯಲ್ಲಿ ಸಮಾಜವಾದಿ ರಾಜ್ಯಗಳ ಕುಟುಂಬವೊಂದು ಅಣಿನೆರೆದಿದೆ. ಹಿಂದೆಂದೂ ಕಾಣದಿದ್ದಷ್ಟು ದೀರ್ಘಕಾಲ ಯುರೋಪಿನಲ್ಲಿ ಶಾಂತಿಯನ್ನು ಕಾಪಾಡುವುದರಲ್ಲಿ, ಜಾಗತಿಕ ಯುದ್ಧದ ಜ್ವಾಲೆಯಿಂದ ಭೂಮಂಡಲವನ್ನು ಕಾಪಾಡುವುದರಲ್ಲಿ ಮತ್ತು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಯುದ್ಧಗಳನ್ನು ಸಂಪೂರ್ಣವಾಗಿ ತ್ಯಜಿಸುವ ನಿಜವಾದ ಸಾಧ್ಯತೆಯನ್ನುಂಟುಮಾಡುವುದರಲ್ಲಿ, ಸಮಾಜವಾದಿ ದೇಶಗಳ ಸಂಯುಕ್ತ ಪ್ರಯತ್ನಗಳು ಮೂಲವಾದ ಪಾತ್ರವನ್ನು ವಹಿಸುತ್ತಿವೆ.

## ವಾರ್ಸಾ ಕೌಲು ಸಂಘಟನೆಯ ಸ್ಥಾಪನೆ ಮತ್ತು ಕಾರ್ಯಗಳು

ಸಮಾಜವಾದಿ ದೇಶಗಳ ರಕ್ಷಣಾತ್ಮಕ ಸ್ವಭಾವದ ಮಿಲಿಟರಿ ಮತ್ತು ರಾಜಕೀಯ ಮೈತ್ರಿ ಕೂಟವಾಗಿರುವ ವಾರ್ಸಾ ಕೌಲು ಸಂಘಟನೆಯ ಉದಯ ಮತ್ತು ವಿಕಾಸದ ಐತಿಹಾಸಿಕ ಮುಖ್ಯಾಂಶವು ಜಾಗತಿಕ ಶಾಂತಿಯನ್ನು ಸಾಧಿಸುವುದಕ್ಕೆ ಮತ್ತು ಬಲಗೊಳಿಸುವುದಕ್ಕೆ ಇರುವ ಖಚಿತವಾದ ಕಾಳಜಿಯಾಗಿದೆ. 'ನ್ಯಾಟೋ' ಕೂಟ ಸ್ಥಾಪನೆಗೊಂಡ ಆರು ವರ್ಷದ ನಂತರ, 1955 ರ ಮೇ 14 ರಂದು ವಾರ್ಸಾದಲ್ಲಿ ಹಲವು ಪೂರ್ವ ಯುರೋಪಿನ ರಾಷ್ಟ್ರಗಳು ಮೈತ್ರಿ, ಸಹಕಾರ ಮತ್ತು ಪರಸ್ಪರ ನೆರವಿನ ಬಹುಪಕ್ಷೀಯ ಕೌಲು ಒಂದಕ್ಕೆ ಸಹಿ ಹಾಕಿದುವು. 'ನ್ಯಾಟೋ'ದ ದುರಾಕ್ರಮಣಕಾರಿ ಮತ್ತು ಸಮಾಜವಾದಿ ವಿರೋಧಿ ನೀತಿಗಳನ್ನು

* ವಿ. ಐ. ಲೆನಿನ್, ಸಂಕಲಿತ ಕೃತಿಗಳು, ಸಂ. 28, ಪುಟ, 65.

ಎದುರಿಸಲು ಈ ಕೌಲನ್ನು ಮಾಡಿಕೊಳ್ಳಲಾಯಿತು. ಉದಾಹರಣೆಗೆ, ಜರ್ಮನಿಯ ಪುನರ್ ಸೇನೀಕರಣವನ್ನು ನಿಷೇಧಿಸಿದ್ದ ಪೋಟ್ಸ್‌ಡಾಮ್ ಒಪ್ಪಂದಗಳ ಮೂಲ ತತ್ವಗಳಲ್ಲೊಂದನ್ನು ಮುರಿದು ಪಶ್ಚಿಮ ಜರ್ಮನಿಯನ್ನು 'ನ್ಯಾಟೋ' ಕೂಟದಲ್ಲಿ ಸೇರಿಸಿಕೊಳ್ಳಲಾದಿತ್ತು.

ಸೋವಿಯೆತ್ ಒಕ್ಕೂಟವು ಸಂಬಂಧಪಟ್ಟ ಇತರ ದೇಶಗಳೊಂದಿಗೆ, 1954ರ ಮಾರ್ಚ್ ತಿಂಗಳ 31ರಂದು, 'ನ್ಯಾಟೋ'ದಲ್ಲಿ ಸೋವಿಯೆತ್ ಒಕ್ಕೂಟದ ಭಾಗವಹಿಸುವಿಕೆಯನ್ನು ಕುರಿತು ಚರ್ಚಿಸಬೇಕೆಂದು ಸಲಹೆ ಮಾಡಿತು. ಹಾಗೇನಾದರೂ ಆಗಿದ್ದಲ್ಲಿ, 'ನ್ಯಾಟೋ'ದ ಮೂಲ ಪ್ರವರ್ತಕರು ಎಷ್ಟೇ "ಶಾಂತಿ ಮಂತ್ರ"ವನ್ನು ಪಠಿಸಿ ತಮ್ಮ ನಿಜವಾದ ಉದ್ದೇಶವನ್ನು ಮರೆ ಮಾಚಿಕೊಳ್ಳುತ್ತಿದ್ದರೂ, ಅವರ ಸೋವಿಯೆತ್ ವಿರೋಧಿ ಮತ್ತು ಸಮಾಜವಾದಿ ವಿರೋಧಿ ಪ್ರವೃತ್ತಿಗೆ ಕಂಟಕ ಉಂಟಾಗುತ್ತಿತ್ತು. ಆದರೆ, ಅವರು ಸೋವಿಯೆತ್ ಸಲಹೆಯನ್ನು ತಿರಸ್ಕರಿಸಿದರು. ಅದರಿಂದ 'ನ್ಯಾಟೋ'ದ ನಿಜವಾದ ಬಣ್ಣ ಸ್ಪಷ್ಟವಾಗಿ ಬಯಲಾಯಿತು.

ಈ ಸನ್ನಿವೇಶದಲ್ಲಿ ಸೋವಿಯೆತ್ ಒಕ್ಕೂಟ ಮತ್ತು ಅದರ ಮಿತ್ರ ರಾಷ್ಟ್ರಗಳು ಸಮಾಜವಾದದ ರಕ್ಷಣೆಯ ದೃಷ್ಟಿಯಿಂದ ವಾರ್ಸಾ ಕೌಲು ಸಂಘಟನೆಯನ್ನು ಸ್ಥಾಪಿಸಿಕೊಳ್ಳುವುದು ಅನಿವಾರ್ಯವಾದ, ಯಥಾರ್ಥವಾದ ಕ್ರಮವಾಗಿತ್ತು. ವಾರ್ಸಾ ಕೌಲು ಸಂಘಟನೆಯ ಸ್ವಭಾವವನ್ನು ಕೌಲಿನಲ್ಲಿ ಸುಸ್ಪಷ್ಟವಾಗಿ ವಿವರಿಸಲಾಯಿತು. ಅದರಲ್ಲಿ, ಅಖಿಲ ಯುರೋಪಿನ ಸಾಮೂಹಿಕ ಭದ್ರತೆಯನ್ನು ಕುರಿತ ಒಪ್ಪಂದವೊಂದಕ್ಕೆ ಸಹಿಯಾದ ಕೂಡಲೇ ವಾರ್ಸಾ ಕೌಲು ನಿಷ್ಕ್ರಿಯಗೊಳ್ಳುವುದೆಂದು ವಿಶೇಷವಾಗಿ ಹೇಳಲಾಯಿತು. ಈ ಉದ್ದೇಶದಿಂದಲೇ, 1960ರ ದಶಕದ ನಡುವಿನಲ್ಲಿ ವಾರ್ಸಾ ಕೌಲಿನ ಸದಸ್ಯ ರಾಷ್ಟ್ರಗಳು ಭದ್ರತೆ ಮತ್ತು ಸಹಕಾರಕ್ಕಾಗಿ ಯುರೋಪಿನ ರಾಷ್ಟ್ರಗಳ ಸಮ್ಮೇಳನವೊಂದನ್ನು ಕರೆಯುವ ಯೋಜನೆಯೊಂದನ್ನು ಮಂಡಿಸಿತು.

ವಾರ್ಸಾ ಕೌಲಿನ ರಕ್ಷಣಾತ್ಮಕ, ಮಿಲಿಟರಿ ಮತ್ತು ರಾಜಕೀಯ ಮೈತ್ರಿಯ ಚೌಕಟ್ಟಿನೊಳಗೆ ಬಲ್ಗೇರಿಯ ಜನವಾದಿ ಗಣರಾಜ್ಯ, ಚೆಕೋಸ್ಲೋವಾಕ್ ಸಮಾಜವಾದಿ ಗಣರಾಜ್ಯ, ಜರ್ಮನ್ ಜನವಾದಿ ಗಣರಾಜ್ಯ, ಹಂಗೆರಿ ಜನತಾ ಗಣರಾಜ್ಯ, ಪೋಲಿಷ್ ಜನತಾ ಗಣರಾಜ್ಯ ರುಮೇನಿಯ ಸಮಾಜವಾದಿ ಗಣರಾಜ್ಯ ಮತ್ತು ಸೋವಿಯೆತ್ ಸಮಾಜವಾದಿ ಗಣರಾಜ್ಯಗಳ ಒಕ್ಕೂಟ, ಇವು ನಿಕಟವಾಗಿ ಮತ್ತು ಫಲಪ್ರದವಾಗಿ ಸಹಕರಿಸುತ್ತಿವೆ.

ಇತರ ಕ್ಷೇತ್ರಗಳಲ್ಲಿನಂತೆಯೇ, ಮಿಲಿಟರಿ ಸಹಕಾರದಲ್ಲೂ ವಾರ್ಸಾ ಕೌಲು ಸಂಘಟನೆಯು ಸಮಾಜವಾದಿ ಅಂತರರಾಷ್ಟ್ರೀಯ ಸಂಬಂಧಗಳ ಸ್ವಭಾವಕ್ಕನುಸಾರವಾಗಿ ಪ್ರಜಾಸತ್ತಾತ್ಮಕವಾಗಿ, ಸಾಮೂಹಿಕವಾಗಿ ಕಾರ್ಯ ನಡೆಸುತ್ತಿದೆ.

ಸದಸ್ಯರ ಭಾಗವಹಿಸುವಿಕೆ ಅಥವಾ ಸ್ವಯಮೇಚ್ಛೆಯ ಅಂಗೀಕಾರವಿಲ್ಲದೆ ಯಾವ ತೀರ್ಮಾನವನ್ನೂ ಕೈಗೊಳ್ಳಲಾಗದು ಎಂಬ ವಿಧಿಯನ್ನು ಸೇರಿಸಿ, ವಾರ್ಸಾ ಕೌಲಿನ ಪ್ರತಿಯೊಂದು ಸದಸ್ಯ ರಾಷ್ಟ್ರದ ಸಾರ್ವಭೌಮತ್ವವನ್ನು ಭರವಸೆಗೊಳಿಸಲಾಗಿದೆ.

ವಾರ್ಸಾ ಕೌಲಿನ ಸದಸ್ಯ ರಾಷ್ಟ್ರಗಳ ನಡುವೆ ಸಹಕಾರಕ್ಕೆ ಸಮಾಜವಾದಿ ಅಂತರರಾಷ್ಟ್ರೀಯತೆಯ ಸೂತ್ರಗಳು ವಿಶ್ವಾಸಾರ್ಹವಾದ ಸೈದ್ಧಾಂತಿಕ ಮತ್ತು ರಾಜಕೀಯ ಬುನಾದಿಯಾ

ಗಿವೆ. ವಾರ್ಸಾ ಕೌಲಿಂ ಸಂಘಟನೆಯ ಅತ್ಯುನ್ನತ ಅಂಗವಾಗಿರುವ ರಾಜಕೀಯ ಸಲಹಾ ಸಮಿತಿಯು ಸುಮಾರು 30 ವರ್ಷಗಳಿಂದಲೂ ಅಧಿಕಾರಯುತವಾದ ಸಾಮೂಹಿಕ ಅಂಗವಾಗಿದೆ ಮತ್ತು ಅದರ ಕಾರ್ಯವು ಸಮಾಜವಾದಿ ದೇಶಗಳಿಗೆ ಸಮಾಜವಾದ ಮತ್ತು ಕಮ್ಯೂನಿಸಂನ ನಿರ್ಮಾಣಕ್ಕೆ ಅನುಕೂಲವಾದ ಪರಿಸ್ಥಿತಿಗಳನ್ನು ಭರವಸೆಗೊಳಿಸುವಂಥ ಸಂಯುಕ್ತ ನೀತಿಯನ್ನು ನಿರೂಪಿಸಿ, ಜಾರಿಗೆ ತರುವುದಾಗಿದೆ.

"ನ್ಯಾಟೋ"ದ ದುರಾಕ್ರಮಣಕಾರಿ ಯುದ್ಧ ಸಿದ್ಧತೆಗಳ ಎದುರಿನಲ್ಲಿ, ಸಮಾಜವಾದಿ ಮಿತ್ರ ರಾಷ್ಟ್ರಗಳ ರಚನಾತ್ಮಕ ಅಂತರರಾಷ್ಟ್ರೀಯ ಧೋರಣೆಯನ್ನು ನಿರೂಪಿಸುವುದಕ್ಕೆ ಅವುಗಳ ನಡುವೆ ಸಹಕಾರವನ್ನು ಬಲಗೊಳಿಸುವುದಕ್ಕೆ, 1983 ರ ಜನವರಿಯಲ್ಲಿ ಪ್ರಾಗ್‌ನಲ್ಲಿ ಜರುಗಿದ ರಾಜಕೀಯ ಸಲಹಾ ಸಮಿತಿಯ ಸಮ್ಮೇಳನವು ಮಹತ್ತರವಾದ ಕಾಣಿಕೆ ಸಲ್ಲಿಸಿತು. ವಾರ್ಸಾ ಕೌಲಿನ ಸದಸ್ಯ ರಾಷ್ಟ್ರಗಳು ಮತ್ತು ಉತ್ತರ ಅಟ್ಲಾಂಟಿಕ್ ಕೂಟ (ನ್ಯಾಟೋ)ದ ಸದಸ್ಯ ರಾಷ್ಟ್ರಗಳು, ಪರಸ್ಪರ ಮಿಲಿಟರಿ ಬಲ ಪ್ರಯೋಗವನ್ನು ತ್ಯಜಿಸುವುದನ್ನು ಮತ್ತು ಶಾಂತಿಯುತ ಸಂಬಂಧಗಳನ್ನು ಬೆಳೆಸಿಕೊಳ್ಳುವುದನ್ನು ಕುರಿತು ಕೌಲು ಒಂದನ್ನು ಮಾಡಿಕೊಳ್ಳ ಬೇಕೆಂದು ಸಮಾಜವಾದಿ ರಾಷ್ಟ್ರಗಳು ಸೂಚಿಸಿದುವು. ಆದರೆ ಈ ಸಲಹೆಗೆ, ಸೌಮನಸ್ಯದ ಗಳಿಕೆಗಳನ್ನು ನಾಶಗೊಳಿಸಲು ಹೊರಟಿದ್ದ ವಾಷಿಂಗ್ಟನ್‌ನ ಪ್ರಚೋದನೆಗೆ ಬಲಿಯಾಗಿದ್ದ 'ನ್ಯಾಟೋ' ದೇಶಗಳ ನಾಯಕರಿಂದ ಅನುಕೂಲವಾದ ಪ್ರತಿಕ್ರಿಯೆ ಬರಲೇ ಇಲ್ಲ. ಅದೇ ಬಗೆ ಯಲ್ಲಿಯೇ ಪಶ್ಚಿಮ ರಾಷ್ಟ್ರಗಳ ನಾಯಕರುಗಳು, 1983 ರ ಜುಲೈನಲ್ಲಿ ಮಾಸ್ಕೋದಲ್ಲಿ ಜರು ಗಿದ ಬಲ್ಗೇರಿಯ, ಚೆಕೋಸ್ಲೋವಾಕಿಯ, ಜರ್ಮನ್ ಜನವಾದಿ ಗಣರಾಜ್ಯ, ಹಂಗೆರಿ, ಪೋಲೆಂಡ್, ರುಮೇನಿಯ ಮತ್ತು ಸೋವಿಯೆತ್ ಒಕ್ಕೂಟಗಳ ಪಾರ್ಟಿ ಮತ್ತು ಸರಕಾರದ ನಾಯಕರುಗಳ ಸಭೆಯು ಯಾವುದೇ ಬಗೆಯಲ್ಲಿಯೂ ಸಮಾಜವಾದಿ ದೇಶಗಳು ತಮ್ಮ ಮೇಲೆ ಮಿಲಿಟರಿ ಶ್ರೇಷ್ಠತೆಯನ್ನು ಸಾಧಿಸಿಕೊಳ್ಳಲು ಅಥವಾ ಸಮಾಜವಾದ ಮತ್ತು ಸಾಮ್ರಾಜ್ಯಶಾಹಿ ಗಳ ಮಧ್ಯೆ ಈಗಿರುವ ಮಿಲಿಟರಿ ಸಮತೋಲನವನ್ನು ಬದಲಿಸಲು ಅವಕಾಶ ನೀಡುವುದಿಲ್ಲ ಎಂಬುದಾಗಿ ನೀಡಿದ ಹೇಳಿಕೆಯನ್ನೂ ಗಂಭೀರವಾಗಿ ಪರಿಗಣಿಸಲಿಲ್ಲ.

ಪ್ರಾಗ್‌ನ ರಾಜಕೀಯ ಘೋಷಣೆ ಮತ್ತು 1983 ರ ಜೂನ್ 28 ರ ಮಾಸ್ಕೋ ಸಂಯುಕ್ತ ಪ್ರಕಟಣೆಯಲ್ಲಿನ ಅಭಿಪ್ರಾಯಗಳನ್ನು ಆ ನಂತರದ ಘಟನೆಗಳು ಪೂರ್ಣವಾಗಿ ದೃಢ ಗೊಳಿಸಿವೆ. ಸೋವಿಯೆತ್ ಒಕ್ಕೂಟ ಮತ್ತು ಅದರ ಮಿತ್ರ ರಾಷ್ಟ್ರಗಳ ಮೇಲೆ ದಾಳಿ ನಡೆ ಸಲು ಪಶ್ಚಿಮ ಯೂರೋಪಿನ ಅನೇಕ 'ನ್ಯಾಟೋ' ರಾಷ್ಟ್ರಗಳಲ್ಲಿ ಅಮೆರಿಕಾದ ಹೊಸ ಮಧ್ಯಂತರ ಪ್ರಥಮ ಪ್ರಹಾರದ ನ್ಯೂಕ್ಲಿಯರ್ ಕ್ಷಿಪಣಿಗಳನ್ನು ನಿಯುಕ್ತಿಗೊಳಿಸಲಾರಂಭಿಸಿದ ನಂತರ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. 'ನ್ಯಾಟೋ'ದ ಈ ನೀತಿಯಿಂದಾಗಿ, ಯೂರೋಪಿ ನಲ್ಲಿ ನ್ಯೂಕ್ಲಿಯರ್ ಅಸ್ತ್ರಗಳನ್ನು ತಗ್ಗಿಸುವುದಕ್ಕಾಗಿ ಜಿನೀವಾದಲ್ಲಿ ನಡೆಯುತ್ತಿದ್ದ ಮಾತುಕತೆ ಗಳು ಮುರಿದು ಬಿದ್ದುವು.

ಸೋವಿಯೆತ್ ಒಕ್ಕೂಟ ಮತ್ತು ವಾರ್ಸಾ ಕೌಲಿನ ಇತರ ಸದಸ್ಯ ರಾಷ್ಟ್ರಗಳು ಅದಕ್ಕೆ ಪ್ರತಿಯಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕಾದಿ ಬಂದಿತು. ಅವು ಜರ್ಮನ್ ಜನವಾದಿ ಗಣ ರಾಜ್ಯ ಮತ್ತು ಚೆಕೋಸ್ಲೋವಾಕಿಯಾಗಳಲ್ಲಿ ಅಧಿಕ ವ್ಯಾಪ್ತಿಯುಳ್ಳ ಸಮರ ತಾಂತ್ರಿಕ ಕ್ಷಿಪಣಿ ಗಳನ್ನು ನಿಯುಕ್ತಿಗೊಳಿಸಬೇಕಾಯಿತು,

ಸಾಮ್ರಾಜ್ಯಶಾಹಿಗಳ ತಪ್ಪಿನಿಂದಾಗಿ ತೀವ್ರವಾಗಿ ಉಲ್ಬಣಗೊಂಡಿರುವ ಇಂದಿನ ಪರಿಸ್ಥಿತಿಯಲ್ಲಿಯೂ ಕೂಡ, ವಾರ್ಸಾ ಕೌಲಿನ ಸದಸ್ಯ ರಾಷ್ಟ್ರಗಳು ಎರಡು ಜಾಗತಿಕ ವ್ಯವಸ್ಥೆಗಳ ನಡುವಣ ಸಂಬಂಧಗಳ ಸಮಸ್ಯೆಗಳ ಬಗ್ಗೆ ರಚನಾತ್ಮಕವಾದ ಧೋರಣೆಯನ್ನು ತೋರಿಸುತ್ತಿವೆ. ಅವು ಇಂದಿನ ಘಟನೆಗಳ ಸರಣಿಯನ್ನು ಬದಲಿಸಲಾಗದಂಥದ್ದು ಎಂದು ಪರಿಗಣಿಸುವುದಿಲ್ಲ. ಶಾಂತಿಯನ್ನು ಕಾಪಾಡುವ ಮತ್ತು ಬಲಗೊಳಿಸುವ ಮೂಲ ಪ್ರಶ್ನೆಗಳನ್ನು ಕುರಿತು ರಾಷ್ಟ್ರಗಳ ನಡುವೆ ಹೊಣೆಗಾರಿಕೆ ಮತ್ತು ವಾಸ್ತವತೆಯ ಭಾವನೆಯಿಂದ ಕೂಡಿದ ಗಂಭೀರವಾದ ಮತ್ತು ಸಮಾನವಾದ ಮಾತುಕತೆಗಳು ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಸೌಮನಸ್ಯ ಸ್ಥಿತಿಗೆ ಮರಳಲು ಅಗತ್ಯವಿದೆ ಎಂದು ಅವು ಭಾವಿಸುತ್ತವೆ.

ಈ ವಿಶ್ವಾಸವನ್ನು ಸೋವಿಯೆತ್ ಕಮ್ಯೂನಿಸ್ಟ್ ಪಾರ್ಟಿ ಮತ್ತು ಸೋದರ ರಾಷ್ಟ್ರಗಳ ನಾಯಕರುಗಳ ಎಲ್ಲ ಹೇಳಿಕೆಗಳು ಮತ್ತು ವಿದೇಶಾಂಗ ನೀತಿಯ ಪ್ರಯತ್ನಗಳು ಇವುಗಳಲ್ಲಿ ಕಾಣಬಹುದಾಗಿದೆ. ತಮ್ಮ ಹೇಳಿಕೆಗಳಲ್ಲಿ ಕೊನ್‌ಸ್ತಾಂತಿನ್ ಯು. ಚೆರ್ನೆಂಕೋರವರು ಪ್ರಪಂಚದ ರಾಜಕಾರಣದಲ್ಲಿ ಈಗಿರುವ ಉದ್ರಿಕ್ತತೆಯನ್ನು ಸಡಿಲಗೊಳಿಸಲು, ಶಸ್ತ್ರಾಸ್ತ್ರ ಸ್ಪರ್ಧೆಯನ್ನು ತಡೆಯಲು ಮತ್ತು ಎಲ್ಲ ದೇಶಗಳು ಮತ್ತು ಜನತೆಗೆ ಅಂತರರಾಷ್ಟ್ರೀಯ ಭದ್ರತೆಯನ್ನು ನಂಬಿಕಾರ್ಹವಾದ ರೀತಿಯಲ್ಲಿ ಭರವಸೆಗೊಳಿಸಲು ನಿರ್ದಿಷ್ಟವಾದ ವಿಧಾನಗಳನ್ನು ವಿವರಿಸಿದ್ದಾರೆ. ಈ ವಿಚಾರಗಳು ಬುಡಾಪೆಸ್ಟ್‌ನಲ್ಲಿ ಜರುಗಿದ ವಾರ್ಸಾ ಕೌಲಿನ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರುಗಳ ಸಮಿತಿಯ ಸಭೆಯಲ್ಲಿ ಅಂಗೀಕರಿಸಿದ ದಸ್ತಾವೇಜುಗಳಲ್ಲಿ ಅಭಿವ್ಯಕ್ತಿಯಾಗಿವೆ. ಆ ಸಭೆಯಲ್ಲಿ ಅನುಮೋದಿಸಲಾದ ಪ್ರಕಟನೆಯಲ್ಲಿ ಖಚಿತವಾಗಿ ಹೀಗೆ ಹೇಳಲಾಗಿದೆ. "ಇಂದಿನ ಪರಿಸ್ಥಿತಿಯಲ್ಲಿ ಯೂರೋಪಿನಲ್ಲಿ ಶಾಂತಿ ಮತ್ತು ಭದ್ರತೆಗೆ, ಈ ಭೂಭಾಗದಲ್ಲಿ ಹೊಸ ನ್ಯೂಕ್ಲಿಯರ್ ಅಸ್ತ್ರಗಳ ಶೇಖರಣೆಯನ್ನು ಅಂತ್ಯಗೊಳಿಸುವುದು ಜರೂರು ಅವಶ್ಯಕತೆಯಾಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ, ಸಭೆಯಲ್ಲಿ ಭಾಗವಹಿಸಿರುವ ರಾಷ್ಟ್ರಗಳು ಅಮೆರಿಕಾದ ಮಧ್ಯಮ ವ್ಯಾಪ್ತಿಯ ನ್ಯೂಕ್ಲಿಯರ್ ಕ್ಷಿಪಣಿಗಳ ನಿಯುಕ್ತಿಯನ್ನು ನಿಲ್ಲಿಸಬೇಕೆಂದು ಒತ್ತಾಯಪಡಿಸುತ್ತವೆ ಮತ್ತು ಈಗಾಗಲೇ ನಿಯುಕ್ತಿಗೊಳಿಸಿರುವ ಕ್ಷಿಪಣಿಗಳನ್ನು ಹಿಂತೆಗೆದುಕೊಳ್ಳುವ ಕ್ರಮಗಳನ್ನು ತೆಗೆದುಕೊಂಡಲ್ಲಿ, ಅದಕ್ಕೆ ವಿರುದ್ಧವಾಗಿ ತೆಗೆದುಕೊಂಡಿರುವ ಕ್ರಮಗಳನ್ನು ಒಡನೆಯೇ ರದ್ದುಗೊಳಿಸುವುದಾಗಿಯೂ ಘೋಷಿಸುತ್ತವೆ. ಅದು ಯೂರೋಪನ್ನು ಮಧ್ಯಂತರ ಹಾಗೂ ಸಮರ ತಾಂತ್ರಿಕ ನ್ಯೂಕ್ಲಿಯರ್ ಅಸ್ತ್ರಗಳಿಂದ ಮುಕ್ತವಾಗಿಸುವುದಕ್ಕೆ ಸಂಬಂಧಪಟ್ಟ ಒಪ್ಪಂದಗಳ ಸಾಧನೆಯ ದೃಷ್ಟಿಯಿಂದ ಮಾತುಕತೆಗಳನ್ನು ಪುನರಾರಂಭಿಸಲು ಆಧಾರವನ್ನೊದಗಿಸುತ್ತದೆ. ಸುಧಾನಗಳ ಮಾರ್ಗಕ್ಕೆ ಮರಳಲು ಇರುವ ಯಾವೊಂದು ಅವಕಾಶವನ್ನೂ, ಸಂದರ್ಭವನ್ನೂ ಕಳೆದುಕೊಳ್ಳಕೂಡದು."

ನ್ಯೂಕ್ಲಿಯರ್ ಶಕ್ತಿಯನ್ನು ಹೊಂದಿರುವ ಎಲ್ಲ ರಾಷ್ಟ್ರಗಳೂ ಅವನ್ನು ಉಪಯೋಗಿಸುವುದರಲ್ಲಿ ತಾವು ಮೊದಲಿಗರಾಗುವುದಿಲ್ಲ ಎಂಬುದಾಗಿ ಆಶ್ವಾಸನೆ ನೀಡುವ ಜರೂರು ಅವಶ್ಯಕತೆಯನ್ನು ವಾರ್ಸಾ ಕೌಲಿನ ಸದಸ್ಯ ರಾಷ್ಟ್ರಗಳು ಒತ್ತಿ ಹೇಳಿವೆ. ಯೂರೋಪನ್ನು ರಾಸಾಯನಿಕ ಅಸ್ತ್ರಗಳಿಂದ ಮುಕ್ತಗೊಳಿಸುವ ಮತ್ತು ಮಿಲಿಟರಿ ವೆಚ್ಚವನ್ನು ತಗ್ಗಿಸುವ ಪ್ರಶ್ನೆಯನ್ನು ಕುರಿತು ಒಡನೆಯೇ ಮಾತುಕತೆಗಳನ್ನು ನಡೆಸಬೇಕೆಂದು ಅವು ಹೇಳಿವೆ. ನ್ಯೂಕ್ಲಿಯರ್ ಅಸ್ತ್ರದ

ಪ್ರಯೋಗಗಳ ಸಂಪೂರ್ಣ ಮತ್ತು ಸಾರ್ವತ್ರಿಕ ನಿಷೇಧ, ಬಾಹ್ಯಾಂತರಿಕ್ಷದ ಮಿಲಿಟರೀಕರಣವನ್ನು, ಬಾಹ್ಯಾಂತರಿಕ್ಷದಲ್ಲಿ ಬಲಪ್ರಯೋಗವನ್ನು ಮತ್ತು ಬಾಹ್ಯಾಂತರಿಕ್ಷದಿಂದ ಭೂಮಿಯ ಮೇಲೆ ಬಲ ಪ್ರಯೋಗವನ್ನು ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ನಿಲ್ಲಿಸುವುದು, ಮತ್ತು ವಿಶ್ವವ್ಯಾಪಿಯಾಗಿ ರಾಸಾಯನಿಕ ಅಸ್ತ್ರಗಳನ್ನು ನಿಷೇಧಿಸುವುದು ಮತ್ತು ತೊಡೆದು ಹಾಕುವುದು, ಇವೇ ಮೊದಲಾದ ಮುಖ್ಯವಾದ ಪ್ರಶ್ನೆಗಳನ್ನು ಸಾಧ್ಯವಾದಷ್ಟು ಬೇಗ ವ್ಯಾವಹಾರಿಕವಾದ ರೀತಿಯಲ್ಲಿ ಪರಿಶೀಲಿಸಿ, ಬಗೆಹರಿಸಲು ಮಾತುಕತೆಗಳು ಪ್ರಾರಂಭವಾಗಬೇಕೆಂದು ಅವು ಅನೇಕ ಸಲ, ಅತ್ಯುನ್ನತ ಮತ್ತು ಅತ್ಯಂತ ಅಧಿಕಾರಯುತ ಮಟ್ಟದಲ್ಲಿ ಸೂಚಿಸಿವೆ.

ನ್ಯೂಕ್ಲಿಯರ್ ಯುದ್ಧದ ಭೀತಿಯನ್ನು ತಗ್ಗಿಸುವ ಮತ್ತು ನಿವಾರಿಸುವ, ಶಸ್ತ್ರಾಸ್ತ್ರ ಪೈಪೋಟಿಯನ್ನು ನಿಲ್ಲಿಸುವ, ನಿರಾಯುಧೀಕರಣ ಮತ್ತು ಅಂತರರಾಷ್ಟ್ರೀಯ ಭದ್ರತೆಯ ಸಂರಕ್ಷಿತತೆಯನ್ನು ಸಾಧಿಸುವ ಗುರಿಯುಳ್ಳ ಇತರ ದೇಶಗಳ ಸಲಹೆಗಳನ್ನು ಜಾಗರೂಕತೆಯಿಂದ ಪರಿಶೀಲಿಸಲು ಮತ್ತು ಅಂಥ ಸಲಹೆಗಳ ಬಗ್ಗೆ ಸಂಬಂಧಪಟ್ಟ ಎಲ್ಲ ದೇಶಗಳೊಂದಿಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲು ತಮ್ಮ ಸಿದ್ಧತೆಯನ್ನು ವಾರ್ಸಾ ಕೌಲು ರಾಷ್ಟ್ರಗಳು ಅನೇಕ ಬಾರಿ ವ್ಯಕ್ತಗೊಳಿಸಿವೆ.

## ಸಮಾಜವಾದ ಶಾಶ್ವತವಾದ ಶಾಂತಿಯನ್ನು ಬಯಸುತ್ತದೆ

ಈಗ ಸಮಾಜವಾದಿ ಜಗತ್ತು ಮೂರು ಖಂಡಗಳಲ್ಲಿನ ದೇಶಗಳನ್ನು ಆವರಿಸಿಕೊಂಡಿದೆ. ಜಾಗತಿಕ ರಾಜಕೀಯವನ್ನು ಒಳಗೊಂಡಂತೆ, ಅವುಗಳ ಅನುಭವ ಮತ್ತು ಪರಂಪರೆಗಳನ್ನು ಸಮಾಜವಾದಿ ದಿಶೆಯಲ್ಲಿ ಅಡಿಯಿರಿಸಿರುವ ಅನೇಕ ದೇಶಗಳು ಸೃಜನಾತ್ಮಕವಾಗಿ ಅನ್ವಯಿಸುತ್ತಿವೆ. ಅವು ಶಾಶ್ವತವಾದ ಮತ್ತು ನ್ಯಾಯುವಾದ ಶಾಂತಿ ಮತ್ತು ಸಾಮಾಜಿಕ ಪ್ರಗತಿಯ ಹಿತ ದೃಷ್ಟಿಯಿಂದ ಸಮಾನವಾದ ಅಂತರರಾಷ್ಟ್ರೀಯ ಸಹಕಾರದ ಸೂತ್ರಗಳನ್ನು ಒಳಗೊಂಡಿವೆ

ಯುರೋಪಿನಲ್ಲಿ ಭದ್ರತೆ ಮತ್ತು ಸಹಕಾರವನ್ನು ಕುರಿತ ಸಮ್ಮೇಳನಕ್ಕೆ ಸಿದ್ಧತೆಯ ಹಿಂದಿರುವ ಇತಿಹಾಸವು ಈ ವಿಷಯದಲ್ಲಿ ಗಮನಾರ್ಹವಾದುದಾಗಿದೆ. ಅನೇಕ ಪಶ್ಚಿಮ ರಾಷ್ಟ್ರಗಳ ರಾಜಕಾರಣಿಗಳು ಸಂಶಯದ ಧೋರಣೆಯನ್ನು ತಳೆದರೂ ಮತ್ತು ನಾನಾ ಕಮ್ಯೂನಿಸ್ಟ್ ವಿರೋಧಿ ವಲಯಗಳು ಅದಕ್ಕೆ ಬಹಿರಂಗವಾದ ವಿರೋಧವನ್ನು ವ್ಯಕ್ತಗೊಳಿಸಿದರೂ ಲೆಕ್ಕಿಸದೆ ವಾರ್ಸಾ ಕೌಲಿನ ರಾಷ್ಟ್ರಗಳು ಸಮ್ಮೇಳನವನ್ನು ನಡೆಸಲು ಹತ್ತು ವರ್ಷಗಳಿಗೂ ಹೆಚ್ಚು ಕಾಲ ಶ್ರಮಿಸಿದುವು.

ಯುರೋಪಿನಲ್ಲಿ ಭದ್ರತೆ ಮತ್ತು ಸಹಕಾರ ಕುರಿತ ಹೆಲ್ಸಿಂಕಿ ಸಮ್ಮೇಳನವು ರಾಜಕೀಯ ಸೌಮನಸ್ಯದ ಪಥದಲ್ಲಿ ಒಂದು ಅತಿ ಮುಖ್ಯವಾದ ಹೆಗ್ಗುರುತಾಯಿತು. ಅದು ಯುರೋಪಿನ ಜನತೆಯ ಮೇಲಷ್ಟೇ ಅಲ್ಲದೆ ಇತರ ಎಲ್ಲ ಜನತೆಯ ಮೇಲೂ ಪ್ರಭಾವ ಬೀರಿತು. ಈಗ ಸೌಮನಸ್ಯ ಪ್ರಕ್ರಿಯೆಯು ಗಂಭೀರವಾದ ಅಡಚಣೆಗಳನ್ನು ಎದುರಿಸುತ್ತಿರುವುದರಿಂದ, ಸರ್ವಕಾರವಾಗಿ, ವ್ಯಾವಹಾರಿಕವಾಗಿ ನಿಜವಾದ ತೊಂದರೆಗಳೇನೆಂಬುದನ್ನು ಮತ್ತು ಸೌಮ

ಸಸ್ಯ ಹಾಗೂ "ಹೆಲ್ಸಿಂಕಿ ಭಾವನೆ"ಗೆ ಬಂದಿರುವ ವಿಪತ್ತನ್ನು, ರಾಷ್ಟ್ರಗಳ ಮಧ್ಯೆ ನಿಜವಾದ ಸಮಾನ ಹಾಗೂ ಪರಸ್ಪರ ಅನುಕೂಲಕರ ಸಂಬಂಧಗಳನ್ನು ಸ್ಥಾಪಿಸುವ ಸಮಗ್ರ ಪ್ರಕ್ರಿಯೆಯನ್ನು ಕುರಿತು ಪರಿಶೀಲಿಸುವುದು ಅಗತ್ಯ.

ಈ ಪ್ರಶ್ನೆಯನ್ನು ವಾಸ್ತವಿಕವಾಗಿ ಪರಿಶೀಲಿಸಿದಲ್ಲಿ, ಸಮಾಜವಾದದ ಉದಯ "ಆಕಸ್ಮಿಕ" ಮತ್ತು ಐತಿಹಾಸಿಕವಾಗಿ "ಅಸಮರ್ಥನೀಯ", "ಅಸಹಜ" ಎಂಬ ಸಂಪೂರ್ಣವಾಗಿ ವಾಗಿ ಮಿಥ್ಯವಾದ ಕಲ್ಪನೆಗೆ ಅಮೆರಿಕ ಮತ್ತು ಇತರ ಕೆಲವು 'ನ್ಯಾಟೋ' ರಾಷ್ಟ್ರಗಳ ಅತ್ಯಂತ ಉಗ್ರಗಾಮಿ ವಲಯಗಳವರು ದೃಢವಾಗಿ ಅಂಟಿಕೊಂಡಿರುವುದೇ ಅದಕ್ಕೆ ಕಾರಣ ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ. ಅದು ಸಾಮ್ರಾಜ್ಯಶಾಹಿ ಬೂರ್ಜ್ವಾಸಿ ಮತ್ತು ಮುಖ್ಯವಾಗಿ ಅದರ ಅತ್ಯಂತ ಪ್ರತಿಗಾಮಿ ವಲಯಗಳ ಸಂಕುಚಿತ ವರ್ಗ ಧೋರಣೆಯನ್ನು ತೋರಿಸುತ್ತದೆ. ಆಧುನಿಕ ಬಂಡವಾಳಶಾಹಿಯ ಐತಿಹಾಸಿಕ ಅವನತಿಯ ವಿಚಾರಕ್ಕೆ ಅವರಿಗೆ ಹೊಂದಿಕೊಳ್ಳುವುದು ಸಾಧ್ಯವಾಗಿಲ್ಲ. ಅದರಿಂದಾಗಿಯೇ ಅವರು ಮುಂದುವರಿದ ಸಾಮಾಜಿಕ ವ್ಯವಸ್ಥೆಯಾಗಿರುವ ಸಮಾಜವಾದದೊಂದಿಗೆ ಶಾಂತಿಯುತ ಪೈಪೋಟಿಗೆ ಹೆದರುತ್ತಾರೆ. ಆದ್ದರಿಂದಾಗಿಯೇ ಅವರು ಶಾಂತಿಯ ಗುರಿಗೆ ಅಪಾಯಕಾರಿಯಾದ ಪಥದಲ್ಲಿ ಹೊರಟಿದ್ದಾರೆ. ನೇರವಾಗಿ ಮಿಲಿಟರಿ ಬಲವನ್ನು ಪ್ರಯೋಗಿಸಿ ಸಮಾಜವಾದವನ್ನು ತೊಡೆದು ಹಾಕುವ ಅಥವಾ ಸಮಾಜವಾದಿ ರಾಷ್ಟ್ರಗಳು ತಮ್ಮ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಬದಲಿಸಿ, ಬಂಡವಾಳಶಾಹಿ ವ್ಯವಸ್ಥೆಯ "ಮೌಲ್ಯ"ಗಳನ್ನು ಅಂಗೀಕರಿಸುವಂತೆ ಬಲಾತ್ಕಾರ ಮಾಡುವ ದಾರಿ ಹಿಡಿದಿದ್ದಾರೆ.

1977 ಮತ್ತು 1978ರಲ್ಲಿ ಬೆಲ್‌ಗ್ರೇಡ್‌ನಲ್ಲಿ ಜರುಗಿದ ಯೂರೋಪಿನ ಭದ್ರತೆ ಮತ್ತು ಸಹಕಾರವನ್ನು ಕುರಿತ ಹೆಲ್ಸಿಂಕಿ ಸಮ್ಮೇಳನದಲ್ಲಿ ಭಾಗವಹಿಸಿದ್ದ ದೇಶಗಳ ಪ್ರತಿನಿಧಿಗಳ ಸಭೆಯಲ್ಲಿ, ಅನೇಕ ಪಶ್ಚಿಮ ರಾಷ್ಟ್ರಗಳು, ಮುಖ್ಯವಾಗಿ ಅಮೆರಿಕದ ನಾಯಕರುಗಳು ಸಭೆಯಲ್ಲಿ ಸೌಮನಸ್ಯ ಪ್ರಕ್ರಿಯೆಯನ್ನು ಕುರಿತು ಚರ್ಚಿಸುವುದಕ್ಕೆ ಬದಲಾಗಿ, ಅದನ್ನು ಸಮಾಜವಾದಿ ದೇಶಗಳು ಮಾನವ ಹಕ್ಕುಗಳನ್ನು "ಉಲ್ಲಂಘಿಸುತ್ತಿವೆ"ಎಂಬ ಅಪಾದನೆಯನ್ನು ವಿಚಾರಣೆ ಮಾಡುವ "ಒಂದು ಪಂಚಾಯಿತ್ತಿ"ಯಾಗಿ ಪರಿವರ್ತಿಸಲು ಪ್ರಯತ್ನಿಸಿದರು. ಈ ಪ್ರಯತ್ನಗಳ ಫಲವಾಗಿ ಬೆಲ್‌ಗ್ರೇಡ್ ಸಭೆಯು ತುಂಬಾ ಸಂಕ್ಷೇಪವಾದ ಅಂತಿಮ ಪ್ರಕಟನೆಯನ್ನು ನೀಡಿದಾಗ್ಯೂ, ಅದು ಸೌಮನಸ್ಯಕ್ಕೆ ಬದ್ಧವಾಗಿರುವ ಮತ್ತು 1975ರ ಆಗಸ್ಟ್ 1ರ ಹೆಲ್ಸಿಂಕಿ ಅಂತಿಮ ದಸ್ತೈವೇಜಿನ ಆಧಾರದ ಮೇಲೆ ಸಹಕಾರವನ್ನು ವಿಕಾಸಗೊಳಿಸಲು ಸಿದ್ಧತೆಯ, ಅತಿ ಮುಖ್ಯವಾದ ವಿಷಯವನ್ನು ದೃಢಪಡಿಸಿತು.

ಬೆಲ್‌ಗ್ರೇಡ್ ಸಭೆಯ ನಂತರ ಸಮಾಜವಾದಿದೇಶಗಳವರು ಹಾಗೂ ಅನೇಕ ಬಂಡವಾಳಶಾಹಿ ದೇಶಗಳ ವಾಸ್ತವಿಕ ಮನೋಭಾವದ ವಲಯಗಳವರು,ಸಭೆಯ ಅನುಭವವು ಅನೇಕ ಪಾಶ್ಚಾತ್ಯ ರಾಜಕಾರಣಿಗಳಿಗೆ ಸಮಾಜವಾದಿ ದೇಶಗಳೊಂದಿಗೆ ಸಂಬಂಧಗಳನ್ನು ಒಳಗೊಂಡಂತೆ ಯೂರೋಪಿನ ನೀತಿಯನ್ನು ಹೇಗೆ ಕಾರ್ಯಗತ ಮಾಡಬೇಕೆಂಬುದರ ಬಗ್ಗೆ ಗಂಭೀರವಾದ ಪಾಠ ಕಲಿಸುವುದೆಂಬ ಆಶಾಭಾವನೆಯನ್ನು ವ್ಯಕ್ತಗೊಳಿಸಿದರು. ಹೆಲ್ಸಿಂಕಿ ಪ್ರಕ್ರಿಯೆಯ ಮುಂದಿನ ಘಟ್ಟವಾದ, ಮ್ಯಾಡ್ರಿಡ್ ಸಭೆಯಲ್ಲಿ ಸಮಾಜವಾದಿ ದೇಶಗಳು ಹೆಲ್ಸಿಂಕಿ ಅಂತಿಮ ದಸ್ತೈವೇಜಿನ

ಸೂತ್ರಗಳ ಆಧಾರದ ಮೇಲೆ ರಚನಾತ್ಮಕವಾದ ಮತ್ತು ಯಶಸ್ವಿಯಾದ ಫಲಿತಾಂಶಗಳನ್ನು ಪಡೆಯಲು ತುಂಬಾ ಪ್ರಯತ್ನಿಸಿದುವು. ಮ್ಯಾಡ್ರಿಡ್ ಒಪ್ಪಂದಕ್ಕನುಸಾರವಾಗಿ ಸ್ಟಾಕ್‌ಹೋಂನಲ್ಲಿ ಜರುಗಿದ ಯುರೋಪಿನಲ್ಲಿ ವಿಶ್ವಾಸ ಮತ್ತು ಭದ್ರತೆಯ ನಿರ್ಮಾಣದ ಕ್ರಮಗಳು ಹಾಗೂ ನಿರಾಯುಧೀಕರಣ ಕುರಿತ ಸಮ್ಮೇಳನದಲ್ಲಿಯೂ ವಾರ್ಸಾ ಕೌಲಿನ ಸದಸ್ಯ ರಾಷ್ಟ್ರಗಳು ರಚನಾತ್ಮಕ ಧೋರಣೆಯನ್ನು ಅನುಸರಿಸಿದುವು. ಸಮ್ಮೇಳನದಲ್ಲಿ ಅವು ಯುರೋಪಿನಲ್ಲಿ ಯುದ್ಧದ ಅಪಾಯವನ್ನು ನಿವಾರಿಸುವ ಮತ್ತು ನಿಜವಾದ ನಿರಾಯುಧೀಕರಣಕ್ಕೆ ಮಾರ್ಗ ತೆರೆಯುವ ಗುರಿಯುಳ್ಳ ಸಲಹೆಗಳನ್ನು ಮಂಡಿಸಿದುವು. ಯುರೋಪಿನಲ್ಲಿ ರಾಜಕೀಯ ವಾತಾವರಣವನ್ನು ಸುಧಾರಿಸುವುದರತ್ತ ಧೋರಣೆಯು ಸಮಾಜವಾದಿ ದೇಶಗಳ ರಚನಾತ್ಮಕವಾದ ಮತ್ತು ಸಹನೆಯ ನೀತಿಗೆ ಪೂರ್ಣವಾಗಿ ಅನುಗುಣವಾಗಿದೆ. ಮಧ್ಯ ಯುರೋಪಿನಲ್ಲಿ ಸೈನ್ಯ ಮತ್ತು ಶಸ್ತ್ರಾಸ್ತ್ರಗಳನ್ನು ತಗ್ಗಿಸುವ ವಿಯೆನ್ನಾ ಮಾತುಕತೆಗಳಲ್ಲೂ ಈ ನೀತಿಯು ವ್ಯಕ್ತಗೊಂಡಿತು.

ಬಾಲ್ಕನ್ ದ್ವೀಪ ಕಲ್ಪದಲ್ಲಿ ಸಮಾಜವಾದಿ ದೇಶಗಳ ತುಂಡವೇ ಇದೆ. ಅದು ಪ್ರಪಂಚದಲ್ಲಿ ದೊಡ್ಡದಾದ ಮತ್ತು ಮುಖ್ಯವಾದ ಪ್ರದೇಶ. ಅಲ್ಲಿ ಅನೇಕ ರಾಷ್ಟ್ರಗಳು. ನಾಗರೀಕತೆಗಳು. ಸಂಸ್ಕೃತಿಗಳು ಮತ್ತು ಸಾಮಾಜಿಕ ವ್ಯವಸ್ಥೆಗಳು ಶತಮಾನಗಳ ಕಾಲದಿಂದ ಸಹಬಾಳ್ವೆ ನಡೆಸುತ್ತಿವೆ. ಅವು ಪರಸ್ಪರ ಪ್ರಭಾವ ಬೀರುತ್ತಿದ್ದರೂ, ಅನೇಕ ವಿವಾದಗಳ ಮತ್ತು ಬಗೆಹರಿಯದ ಸಮಸ್ಯೆಗಳ ಕ್ಷೇತ್ರವಾಗಿಯೇ ಇದೆ. ಹಾಗಿದ್ದರೂ, ಇಂದು ಬಾಲ್ಕನ್ ಪ್ರದೇಶವು ಯುರೋಪಿನ "ಆಸ್ಫೋಟಕ" ವಲಯವಾಗಿಲ್ಲ ಎಂದು ವಿಶ್ವಾಸದಿಂದ ಹೇಳಬಹುದಾಗಿದೆ. ಆ ಭೂಭಾಗದಲ್ಲಿ ಸಂಭವಿಸಿರುವ ಬದಲಾವಣೆಗಳಿಗೆ, ಆ ವಲಯದಲ್ಲಿ ಶಾಂತಿ ಮತ್ತು ಸಹಕಾರವನ್ನು ಬಲಗೊಳಿಸುವುದಕ್ಕಾಗಿ ಶ್ರಮಿಸುತ್ತಿರುವ ಸಮಾಜವಾದಿ ಬಲ್ಗೇರಿಯ ಮತ್ತು ಇತರ ಸೋದರ ರಾಷ್ಟ್ರಗಳ ಪ್ರಯತ್ನಗಳ ಫಲಿತಾಂಶವೇ ಬಹುಮಟ್ಟಿಗೆ ಕಾರಣವಾಗಿದೆ. ಬಲ್ಗೇರಿಯಾ ಕಮ್ಯೂನಿಸ್ಟ್ ಪಾರ್ಟಿಯ 12 ನೇ ಮಹಾಸಭೆಯು ಬಾಲ್ಕನ್ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಪ್ರಯತ್ನಗಳನ್ನು ಮತ್ತಷ್ಟು ಸುಧಾರಿಸುವುದಕ್ಕೆ ವಿಧಾನವನ್ನು ನಿರೂಪಿಸಿತು. ಮುಖ್ಯವಾದಿ ಬಲ್ಗೇರಿಯ ನೆರೆಯ ರಾಷ್ಟ್ರಗಳೊಂದಿಗೆ ಒಳ್ಳೆಯ ನೆರೆಹೊರೆ ಸಂಬಂಧ. ಪ್ರಾದೇಶಿಕ ಸಮಗ್ರತೆ, ಇನ್ನೊಂದು ದೇಶದ ಮೇಲೆ ಹಗೆತನ ತೋರುವಂಥ ಉದ್ದೇಶಗಳಿಗೆ ಮತ್ತು ಚಟುವಟಿಕೆಗಳಿಗೆ ತಮ್ಮ ಪ್ರದೇಶಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಎಡೆಕೊಡದಿರುವುದು, ಈ ಸೂತ್ರಗಳನ್ನೊಳಗೊಂಡ ಒಪ್ಪಂದಗಳಿಗೆ ಸಹಿಹಾಕಲು ತನ್ನ ಸಿದ್ಧತೆಯನ್ನು ಪ್ರಕಟಿಸಿತು. ಈ ದ್ವೀಪಕಲ್ಪದ ಶಾಂತಿ ಮತ್ತು ಭದ್ರತೆಗೆ ಮುಖ್ಯಾಂಶವಾಗಿರುವ ಆರ್ಥಿಕ, ಪ್ರವಾಸೋದ್ಯಮ, ವಿಜ್ಞಾನ ಸಂಸ್ಕೃತಿ, ಶಿಕ್ಷಣ ಮತ್ತು ಕ್ರೀಡೆಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳ ವಿಕಾಸಕ್ಕೆ ಬೇಕಾದ ಕ್ರಮಗಳನ್ನು ಆ ಕಾರ್ಯಕ್ರಮವು ಸೂಚಿಸಿದೆ. ಬಾಲ್ಕನ್ ದ್ವೀಪ ಕಲ್ಪವು ಯುರೋಪು, ಏಶಿಯ ಮತ್ತು ಆಫ್ರಿಕಾ ಖಂಡಗಳ ನಡುಗಟ್ಟಿನಲ್ಲಿರುವುದರಿಂದ, ಬಲ್ಗೇರಿಯಾದ ಸರಕಾರವು ಆ ದೇಶಗಳ ಹಿತದೃಷ್ಟಿಯಿಂದ ಈ ಪ್ರದೇಶದಲ್ಲಿ ಸಾರಿಗೆ ಮತ್ತು ಸಂಪರ್ಕಗಳನ್ನು ವಿಕಾಸಗೊಳಿಸಲು ಕರೆ ನೀಡಿದೆ. ಸಮಾಜವಾದಿ ದೇಶಗಳು ಮಾಡಿರುವ ಎಲ್ಲ ಸಲಹೆಗಳಂತೆಯೇ, ಬಲ್ಗೇರಿಯಾದ ಉಪಕ್ರಮಗಳೂ ಮುಚ್ಚುಮರೆಯಿಲ್ಲದ್ದಾಗಿವೆ ಮತ್ತು ಪರಸ್ಪರ ಆಸಕ್ತಿಕರವಾದ ವಿಶಿಷ್ಟ ಕ್ಷೇತ್ರಗಳಲ್ಲಿ ಒಪ್ಪಂದಗಳನ್ನು ಮಾಡಿಕೊಳ್ಳುವ ಸಾಧ್ಯತೆಯ ಆಧಾರದ ಮೇಲೆ ಚರ್ಚಿಸಲು ಅದರ ಸಿದ್ಧತೆಗೆ ದ್ಯೋತಕವಾಗಿದೆ. ಈ ಉಪಕ್ರಮಗಳನ್ನು ಕುರಿತು ಚರ್ಚಿಸುವ ದೃಷ್ಟಿ

ಯಿಂದ 1984ರಲ್ಲಿ ಬಾಲ್ಕನ್ ದೇಶಗಳ ನಡುವೆ ಬಹುಮುಖ ರಾಜಕೀಯ ಸಂಪರ್ಕಗಳಿಗಾಗಿ ಕೈಗೊಂಡ ಕ್ರಮವು ಪ್ರಪಂಚದ ಈ ಭಾಗದಲ್ಲಿ ಸಮಾಜವಾದಿ ಮುತ್ಸದ್ದಿತನವು ಹೊಂದಿರುವ ಅಪಾರವಾದ ಗೌರವಕ್ಕೆ ಸಾಕ್ಷಿಯಾಗಿದೆ.

ಏಶಿಯಾದ ಮಟ್ಟಿಗಾದರೋ, ಸಮಾಜವಾದದ ಪ್ರಭಾವದಿಂದ ಅಲ್ಲಿ ಈಗಾಗಲೇ ಕೈಗೊಂಡಿರುವ ಕ್ರಮಗಳು, ಭೂಮಂಡಲದ ಈ ವಿಶಾಲವಾದ ಪ್ರದೇಶದಲ್ಲಿ ಶಾಂತಿ ಮತ್ತು ಸಹಕಾರದತ್ತ ನಂಬಿಕಾರ್ಹವಾದ ಪಥವನ್ನು ಸೂಚಿಸುತ್ತಿದೆ ಎಂದು ಖಚಿತವಾಗಿ ಹೇಳಬಹುದಾಗಿದೆ.

ಇಂಡೋಚೀಣ ಅನೇಕ ದಶಕಗಳ ಕಾಲ ಭೀಕರ ಯುದ್ಧದ ಬೀಡಾಗಿತ್ತು. 1970ರ ದಶಕದ ನಡುವಿನಿಂದ ದೀರ್ಘ ಕಾಲದಿಂದ ಸಂಕಷ್ಟಗಳಿಗೀಡಾಗಿದ್ದ ಪ್ರಪಂಚದ ಈ ಭೂಭಾಗದಲ್ಲಿ ಐತಿಹಾಸಿಕ ಬದಲಾವಣೆಗಳಾಗುತ್ತಿವೆ. ಸಾಮ್ರಾಜ್ಯಶಾಹಿ ದುರಾಕ್ರಮಣವನ್ನು ಪರಾಜಯಗೊಳಿಸಿದ ವಿಯೆಟ್ನಾಮೀ ಜನರು ಏಕೀಕೃತ ಸಮಾಜವಾದಿ ಗಣರಾಜ್ಯದ ಚೌಕಟ್ಟಿನಲ್ಲಿ ಒಂದುಗೂಡಿದ್ದಾರೆ. ಲಾವೋಸ್ ಜನತಾ ಜನವಾದಿ ಗಣರಾಜ್ಯ ನವಜೀವನ ನಿರ್ಮಾಣದ ಪಥದಲ್ಲಿ ದೃಢವಾದ ಹೆಜ್ಜೆ ಇರಿಸಿದೆ. ಕಂಪೂಚಿಯಾದ ಜನರು ಮೊದಲು ಸಾಮ್ರಾಜ್ಯಶಾಹಿಗಳ ಶೃಂಖಲೆಯನ್ನು, ಆನಂತರ ಪ್ರಜಾಪ್ರಭುತ್ವ ವಿರೋಧಿ ಆಡಳಿತೆಯನ್ನು ಕಿತ್ತೊಗೆದಿದ್ದಾರೆ. ಅದರ ಸುಮಾರು 70 ಮಿಲಿಯ ಜನರು ತಮ್ಮ ಭವಿಷ್ಯಕ್ಕೆ ಸಮಾಜವಾದವನ್ನು ಆರಿಸಿಕೊಂಡಿದ್ದಾರೆ. ಸಾಮಾಜಿಕ ನ್ಯಾಯ ಮತ್ತು ತಮ್ಮ ಅತ್ಯುತ್ಕೃಷ್ಟ ರಾಷ್ಟ್ರೀಯ ಪರಂಪರೆಗಳನ್ನು ವಿಕಾಸಗೊಳಿಸಿಕೊಳ್ಳುವ ಪಥವನ್ನು ಅನುಸರಿಸಿದ್ದಾರೆ. ಶಾಂತಿಗಾಗಿ, ಶಾಂತಿಯುತ ದುಡಿಮೆಗಾಗಿ, ಸಾಮಾಜಿಕ ವ್ಯವಸ್ಥೆಗಳ ಪರಿಗಣನೆಯಿಲ್ಲದೆ ತಮ್ಮ ಪ್ರದೇಶದ ಹಾಗೂ ಜಗತ್ತಿನ ಎಲ್ಲ ಇತರ ದೇಶಗಳೊಂದಿಗೆ ಫಲಪ್ರದವಾದ ಸಹಕಾರವನ್ನು ಬೆಳೆಸಲು ಶ್ರಮಿಸುತ್ತಿದ್ದಾರೆ.

ನವ ಸಮಾಜದ ನಿರ್ಮಾಣಕ್ಕೆ ಶಾಂತಿ ಅತ್ಯಗತ್ಯ. 1984ರಲ್ಲಿ ಜರುಗಿದ ಲಾವೋಸ್ ವಿಯೆಟ್ನಾಮ್ ಮತ್ತು ಕಂಪೂಚಿಯಾಗಳ ವಿದೇಶಾಂಗ ಸಚಿವರುಗಳ ಸಮ್ಮೇಳನವು (ಅಂಥ ಸಮ್ಮೇಳನಗಳು ಕ್ರಮವಾಗಿ ಆಗಾಗ ಜರುಗುತ್ತಿವೆ) ವಿವಾದಾತ್ಮಕವಾದ ಪ್ರಶ್ನೆಗಳನ್ನು ಬಗೆಹರಿಸಲು ಅಗತ್ಯವಿರುವ ಸಂಯುಕ್ತ ಕ್ರಮಗಳನ್ನು ಕುರಿತು "ಆಸಿಯಾನ್" ದೇಶಗಳೊಂದಿಗೆ ಚರ್ಚಿಸಲು ತನ್ನ ಸಿದ್ಧತೆಯನ್ನು ಮತ್ತೊಮ್ಮೆ ವ್ಯಕ್ತಗೊಳಿಸಿತು. ಸಮ್ಮೇಳನದಲ್ಲಿ ಭಾಗವಹಿಸಿದ್ದ ಸಚಿವರುಗಳು ಆಗ್ನೇಯ ಏಶಿಯಾದ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಪ್ರಾದೇಶಿಕ ಅಥವಾ ಅಂತರರಾಷ್ಟ್ರೀಯ ಸಮ್ಮೇಳನವೊಂದನ್ನು ನಡೆಸಬೇಕೆಂದು ಮತ್ತೊಮ್ಮೆ ಸೂಚಿಸಿದವು. ಕಂಪೂಚಿಯಾ ಜನತಾ ಗಣರಾಜ್ಯದಲ್ಲಿ ಉಂಟಾಗಿರುವ ಭದ್ರತೆ ಮತ್ತು ಸ್ಥಿರತೆಯಿಂದಾಗಿ 1984ರ ಬೇಸಿಗೆಯಲ್ಲಿ ಮೂರನೇ ಒಂದು ಭಾಗದಷ್ಟು ವಿಯೆಟ್ನಾಮೀ ಸೈನ್ಯವನ್ನು ಹಿಂತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು.

ಏಶಿಯಾದ ಹಾಗೂ ಇಡೀ ಜಗತ್ತಿನ ಜನರು ಹೆಚ್ಚುತ್ತಿರುವ ಪ್ರಮಾಣದಲ್ಲಿ ಏಶಿಯಾದಲ್ಲಿ ಶಸ್ತ್ರಾಸ್ತ್ರ ಪೈಪೋಟಿಯನ್ನು ಹರಡಲು ಅಮೆರಿಕಾದ ನಾಯಕತ್ವವು ನಡೆಸುತ್ತಿರುವ ಪ್ರಯತ್ನಗಳಿಂದ ಸಹಜವಾಗಿಯೇ ಗಾಬರಿಗೊಂಡಿದ್ದಾರೆ, ಜಪಾನ್ ಮತ್ತು ಚೀಣಾಗಳನ್ನು, ಈ ಪ್ರದೇಶದಲ್ಲಿ ತನ್ನ ಯುದ್ಧ ಸಿದ್ಧತೆಗಳಲ್ಲಿ ಎಳೆಯಲು ಅಮೆರಿಕಾ ತೀವ್ರವಾದ ಪ್ರಯತ್ನಗಳನ್ನು ಮಾಡು

ತ್ತಿದೆ. "ಸೋವಿಯೆತ್ ಮಿಲಿಟರಿ ಭೀತಿ"ಯನ್ನು ಕುರಿತ ಮಿಥ್ಯ ಆರೋಪಗಳ ತೆರೆಮರೆಯಲ್ಲಿ, ವಾಷಿಂಗ್ಟನ್‌ನ ಸಾಮ್ರಾಜ್ಯಶಾಹಿ ಸಮರ ತಂತ್ರಜ್ಞರು ಅಮೆರಿಕಾದ ಆರ್ಥಿಕ ಮತ್ತು ಮಿಲಿಟರಿ ಪ್ರಭಾವಕ್ಕೆ ಹಲವು ಏಶಿಯಾದ ದೇಶಗಳನ್ನು ಬಲಿಯಾಗಿಸಲು ಮತ್ತು ತನ್ಮೂಲಕ ಪೆಸಿಫಿಕ್‌ನ ವಿಸ್ತಾರವಾದ ಪ್ರದೇಶದಲ್ಲಿ ಅಮೆರಿಕಾದ ಅಧಿನಾಯಕತ್ವವನ್ನು ಸ್ಥಾಪಿಸಲು ಮಾರ್ಗವನ್ನು ಸುಗಮಗೊಳಿಸುವುದಕ್ಕೆ ನೋಡುತ್ತಿದ್ದಾರೆ. ಪ್ರಪಂಚದ ಮೇಲೆ ಅಧಿಪತ್ಯ ನಡೆಸುವ ಆಶೆಯನ್ನಿರಿಸಿಕೊಂಡಿರುವ ಈ ಹೊಸ ಸಾಮ್ರಾಜ್ಯಶಾಹಿ ಸಮರ ತಂತ್ರಜ್ಞರು, ಹಾಗೆ ಮಾಡಿದಲ್ಲಿ, ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶದಲ್ಲಿ ನೈಸರ್ಗಿಕ ಮತ್ತು ಮಾನವ ಬಲದ ಸಂಪನ್ಮೂಲಗಳನ್ನು ವ್ಯಾಪಕವಾಗಿ ಶೋಷಣೆ ಮಾಡಲು ಮತ್ತು ಏಶಿಯಾದ ಜನತೆಯ ಮೇಲೆ ತಮ್ಮ ಅಧಿಕಾರವನ್ನು ಹೊರಿಸಲು ಸಾಧ್ಯವಾಗುವುದೆಂದು ಲೆಖ್ಖ ಹಾಕಿದ್ದಾರೆ.

ಇವು ಕನಸಿನ ಲೆಖ್ಖಾಚಾರಗಳೇನಲ್ಲ. ಉದಾಹರಣೆಗೆ, ಅಧ್ಯಕ್ಷ ರೀಗನ್ ಚೀಣಾ ಜನತಾ ಗಣರಾಜ್ಯಕ್ಕೆ ಭೇಟಿ ನೀಡಿದ್ದಾಗ, ಚೀಣೀ ಜನತೆಯನ್ನೂ ಒಳಗೊಂಡು ಪ್ರಪಂಚದ ಎಲ್ಲ ಜನತೆಯೂ ಯಾವ ತತ್ವಗಳನ್ನು ಮತ್ತು ಮೌಲ್ಯಗಳನ್ನು ಅನುಸರಿಸಬೇಕೆಂದು ಆ ರಾಷ್ಟ್ರದ ನಾಯಕರುಗಳಿಗೆ ಉಪದೇಶ ಮಾಡಿದರು. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಗಮನಿಸುವುದು ಅಗತ್ಯ. ಅಮೆರಿಕಾದೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರುವ ಟೈವಾನ್‌ನ ರಾಜಕಾರಣಿಗಳು, ಮುಂದಿನ ದಶಕಗಳಲ್ಲಿ ಚೀಣಾ ಜನತಾ ಗಣರಾಜ್ಯದಲ್ಲಿ ತೀವ್ರವಾದ ಬದಲಾವಣೆಗಳಾಗಿ, ಪರಿಸ್ಥಿತಿ ಬೇರೆಯಾಗುವಂಥ ಸಂಭವಗಳಿವೆ ಎಂಬ ಆಶಯ ವ್ಯಕ್ತಗೊಳಿಸಿರುವುದರಲ್ಲಿ ಆಕಸ್ಮಿಕವೇನಿಲ್ಲ ಎಂದು ತೋರುತ್ತದೆ. ಸಾಮಾಜಿಕ-ರಾಜಕೀಯ ಬದಲಾವಣೆಗಳು ಯಾವ ಬಗೆಯಲ್ಲಿ ಸಂಭವಿಸುವುವು ಎಂದು ಅಂತರರಾಷ್ಟ್ರೀಯ ಪ್ರತಿಗಾಮಿಗಳು ಕಲ್ಪಿಸಿಕೊಂಡಿದ್ದಾರೆ ಎಂಬುದರಲ್ಲಿ ಸಂದೇಹವೇ ಇಲ್ಲ. ಅವರು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಅವರ ಕನಿಷ್ಠ ಕಾರ್ಯಕ್ರಮ ಸ್ಪಷ್ಟವಾಗಿಯೇ ಇದೆ. ಅದು ಸಮಾಜವಾದಿ ದೇಶಗಳೊಂದಿಗೆ ಚೀಣಾದ ಸಹಜ ಸಂಬಂಧಗಳನ್ನು ಮತ್ತಷ್ಟು ಹದಗೆಡಿಸಿ, ವಿರಸ ಉಂಟು ಮಾಡುವುದಾಗಿದೆ. ಕುಖ್ಯಾತವಾದ "ಸಾಂಸ್ಕೃತಿಕ ಕ್ರಾಂತಿ"ಯ ಕಾಲದಲ್ಲಿ ಮತ್ತು ಮತ್ತು ಅನಂತರ ಸಮಾಜವಾದಿ ವಿಯೆತ್ನಾಮ್‌ನ ಮೇಲೆ ದುರಾಕ್ರಮಣ ಚರ್ಯೆಗಳು ನಡೆದ ಕಾಲದಲ್ಲಿ ಈ ವಿರಸ ಸುಸ್ಪಷ್ಟವಾಗಿ ವ್ಯಕ್ತಗೊಂಡಿತು. ಇನ್ನು ಅವರು ತಮ್ಮ ಗರಿಷ್ಠ ಕಾರ್ಯಕ್ರಮವನ್ನು ಕಾರ್ಯಗತ ಮಾಡುವುದಕ್ಕೂ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಅದು ಏಶಿಯದಲ್ಲಿ ಅಂತರರಾಷ್ಟ್ರೀಯ ಉದ್ರಿಕ್ತತೆಯನ್ನು ಹೆಚ್ಚಿಸುವುದು ಮತ್ತು ಶಸ್ತ್ರಾಸ್ತ್ರ ಪೈಪೋಟಿಯನ್ನು ಹರಡುವುದು ಆಗಿದೆ, ಅಂತರರಾಷ್ಟ್ರೀಯ ಪ್ರತಿಗಾಮಿಗಳು ತಮ್ಮ ಸೋವಿಯೆತ್ ವಿರೋಧಿ ಮತ್ತು ಸಮಾಜವಾದಿ ವಿರೋಧಿ ಹುಂಚಿಕೆಗಳಲ್ಲಿ ಮತ್ತು ಚರ್ಯೆಗಳಲ್ಲಿ ಚೀಣಾವನ್ನು ಸಂಪೂರ್ಣವಾಗಿ ಎಳೆಯಲು, ಚೀಣಾದಲ್ಲಿ ಸಮಾಜವಾದದ ಅಭಿವೃದ್ಧಿಯು ಎಂದಿಗೂ ಆಗದಂತೆ ಮಾಡಲು ಮತ್ತು ಅದನ್ನು ಸಂಪೂರ್ಣವಾಗಿ ಸಾಮ್ರಾಜ್ಯಶಾಹಿಯ ನೆಲೆಯಾಗಿರುವಂತೆ ಮತ್ತು ತಮ್ಮ ಭೌಗೋಲಿಕ ಮಿಲಿಟರಿ ದುಸ್ಸಾಹಸಗಳಿಗೆ ಬೆಂಬಲ ಒದಗಿಸುವಂತೆ ಮಾಡಲು ನೋಡುತ್ತಿದ್ದಾರೆ.

ಆದ್ದರಿಂದಾಗಿಯೇ, ಏಶಿಯದ ಎಲ್ಲ ದೇಶಗಳ ನಡುವೆಯೂ ವಿಶ್ವಾಸವನ್ನು ಮೂಡಿಸುವ ಶಾಂತಿ ಮತ್ತು ಎಲ್ಲ ಏಶಿಯ ಜನತೆ ಹಾಗೂ ದೇಶಗಳ ನಡುವೆ ಸಮಾನವಾದ ಪರಸ್ಪರ ಉಪ

ಯುಕ್ತವಾದ ಸಹಕಾರವನ್ನು ಬಲಗೊಳಿಸಲು ಗಂರಿಯುಳ್ಳ ಸೋವಿಯೆತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳ ರಚನಾತ್ಮಕ ಸಲಹೆಗಳು ವಿಶಿಷ್ಟವಾಗಿ ಸುಸಂಗತವಾಗಿವೆ.

ಮಧ್ಯ ಅಮೆರಿಕ ಮತ್ತು ಕೆರೆಬ್ಬಿಯನ್‌ನ ಪರಿಸ್ಥಿತಿಗೆ ಸಂಬಂಧಿಸಿದಂತೆ, ಮಧ್ಯಅಮೆರಿಕಾದ ಬಿಕ್ಕಟ್ಟನ್ನು ನಿವಾರಿಸಲು ಶಾಂತಿಯುತ ವಿಧಾನಗಳನ್ನು ಅರಸಬೇಕೆಂದು ಸಮಾಜವಾದಿ ದೇಶಗಳು ಸೂಚಿಸಿವೆ. ಕ್ಯೂಬಾದ ಕಮ್ಯೂನಿಸ್ಟ್ ಪಾರ್ಟಿ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿಯೂ, ಕ್ಯೂಬಾದ ರಾಜ್ಯ ಮಂಡಲಿಯ ಅಧ್ಯಕ್ಷರೂ ಮತ್ತು ಸಚಿವ ಸಂಪುಟದ ಅಧ್ಯಕ್ಷರೂ ಆದ ಫಿಡೆಲ್ ಕ್ಯಾಸ್ಟ್ರೋರವರು ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಹೇಳಿಕೆಗಳನ್ನು ನೀಡಿದ್ದಾರೆ. ಲ್ಯಾಟಿನ್ ಅಮೆರಿಕಾದ ದೇಶಗಳ ವ್ಯವಹಾರಗಳಲ್ಲಿ ತೀವ್ರವಾದ ಹಸ್ತಕ್ಷೇಪವನ್ನು ಮತ್ತು ಅವುಗಳ ಸಾರ್ವಭೌಮತ್ವದ ಮೇಲೆ ಅತಿಕ್ರಮಣವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯು ಸಮಾಜವಾದಿ ಕ್ಯೂಬಾ ಹಾಗೂ ಸೋವಿಯೆತ್ ಒಕ್ಕೂಟವು ಅಸ್ತಿತ್ವಕ್ಕೆ ಬರುವುದಕ್ಕೆ ಬಹಳ ಹಿಂದೆಯೇ ಪ್ರಾರಂಭಿಸಿತ್ತು ಎಂಬುದನ್ನು ಅವರು ರುಜುವಾತುಗೊಳಿಸಿದ್ದಾರೆ. ಪಶ್ಚಿಮ ಗೋಲಾರ್ಧದಲ್ಲಿ, ಮುಖ್ಯವಾಗಿ ಲ್ಯಾಟಿನ್ ಅಮೆರಿಕ ಮತ್ತು ಕೆರಿಬ್ಬಿಯನ್‌ಗಳಲ್ಲಿ ತನ್ನ ನವ ವಸಾಹತು ನೀತಿಯನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ವಾಷಿಂಗ್ಟನ್, ಸೋವಿಯೆತ್ ಒಕ್ಕೂಟ ಮತ್ತು ಕ್ಯೂಬಾಗಳು "ಕ್ರಾಂತಿಯನ್ನು ರಫ್ತು ಮಾಡುತ್ತಿವೆ" ಎಂಬ ನಿರಾಧಾರವಾದ ಅಪಾದನೆಯನ್ನು ಮಾಡುತ್ತಿದೆ.

ಸಮಾಜವಾದವು ಎಲ್ಲಿ ಅಸ್ತಿತ್ವಕ್ಕೆ ಬಂದು ನೆಲೆಯೂರಿದರೂ. ಅಲ್ಲಿ ಅದು ಹಿಂದಿಗಿಂತಲೂ ಹೆಚ್ಚು ನ್ಯಾಯವಾದ ಮತ್ತು ಸುಸ್ಥಿರವಾದ ಅಂತರರಾಷ್ಟ್ರೀಯ ಸಂಬಂಧಗಳಿಗೆ ಪರಿಸ್ಥಿತಿಯನ್ನು ನಿರ್ಮಿಸುತ್ತದೆ. ಆಗ್ನೇಯ ಏಶಿಯಾದಲ್ಲಿ, ಅಫ್ರಿಕಾದಲ್ಲಿ, ಕೆರೆಬ್ಬಿಯನ್‌ನಲ್ಲಿಮತ್ತು ಪ್ರಪಂಚದ ಇತರ ಪ್ರದೇಶಗಳಲ್ಲಿ ಪರಿಸ್ಥಿತಿಯನ್ನು ಹದಗೆಡಿಸುತ್ತಿರುವುದು ಸಮಾಜವಾದವಲ್ಲ ಆದರೆ ಜನತೆಯ ಸಾಮಾಜಿಕ ವಿಮೋಚನೆಯನ್ನು ತಡೆಯಲೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉಗ್ರವಾದ ಪ್ರಯತ್ನಗಳನ್ನು ನಡೆಸುತ್ತಿರುವ ಸಮಾಜವಾದದ ವಿರೋಧಿಗಳಾಗಿದ್ದಾರೆ,

## "ಸಮಾಜವಾದದ ಬಿಕ್ಕಟ್ಟು" ಕುರಿತ ಕಟ್ಟುಕತೆಗಳು ಯಾರಿಗೆ ಬೇಕು ?

ದುಡಿಯುವ ಜನರ ಮೂಲ ಹಿತಾಸಕ್ತಿಗಳನ್ನು ಅತಿಕ್ರಮಿಸದೆ ಮತ್ತು ಇನ್ನೂ ಹೆಚ್ಚು ತೀವ್ರವಾದ ವರ್ಗ ಸಂಘರ್ಷಗಳು ಮತ್ತು ಸಮಸ್ಯೆಗಳನ್ನು ಉಂಟುಮಾಡದೆ ಖಾಸಗಿ ಒಡೆತನದ ಪ್ರಾಧಾನ್ಯತೆಯ ಮೇಲೆ ಆಧಾರಿತವಾಗಿರುವ ರಾಜ್ಯ ಗುತ್ತೇದಾರಿ ಬಂಡವಾಳಶಾಹಿ ವ್ಯವಸ್ಥೆಗೆ ಅಭಿವೃದ್ಧಿಯ ಯಾವುದೇ ಪ್ರಾಮುಖ್ಯವಾದ ಸಮಸ್ಯೆಯನ್ನೂ ಬಗೆಹರಿಸಲಾಗದು ಎಂಬುದರ ಬಗ್ಗೆ ಪ್ರತಿನಿತ್ಯ ಪತ್ರಿಕೆಗಳು ಮತ್ತು ಟೆಲಿವಿಷನ್ ಮಾಧ್ಯಮಗಳವರು ಹಾಗೂ ನಾನಾ ಪ್ರವೃತ್ತಿಯ ಸಾರ್ವಜನಿಕ ಮತ್ತು ರಾಜಕೀಯ ನಾಯಕರುಗಳು ಅನೇಕ ಅಂಕಿಅಂಶಗಳನ್ನೂ, ಸಾಕ್ಷ್ಯಾಧಾರಗಳನ್ನೂ ಒದಗಿಸುತ್ತಿರುತ್ತಾರೆ. ಇದಕ್ಕೆ ಉತ್ತರ ರೂಪವಾಗಿ, ಕೆಲವು ಪಾಶ್ಚಾತ್ಯ ದೇಶಗಳ ವಿದ್ವಾಂಸರುಗಳು ಯಾವುದೋ ಅಸಂಬದ್ಧವಾಗಿ ಆರಿಸಿಕೊಂಡ ಕೆಲವು

ಅಂಶಗಳನ್ನು ಉಪಯೋಗಿಸಿಕೊಂಡು ಬಂಡವಾಳಶಾಹಿ ವ್ಯವಸ್ಥೆಯಷ್ಟೇ ಅಲ್ಲದೆ ಸಮಾಜವಾದವೂ ಬಿಕ್ಕಟ್ಟನ್ನು ಅನುಭವಿಸುತ್ತಿದೆ ಎಂದು ಹೇಳುತ್ತಾರೆ. ಆ ಮೂಲಕವಾಗಿ ಅವರು "ಮುಕ್ತ ಉದ್ಯಮ ಸಮಾಜ"ದ ಇಂದಿನ ದೋಷಗಳ ಬಗ್ಗೆ ಸದಭಿಪ್ರಾಯವನ್ನು ಮೂಡಿಸಲು, ಸಮಾಜವಾದವು ಅದಕ್ಕಿಂತ ಅಷ್ಟೇನು ಉತ್ತಮವಾದುದಲ್ಲ ಎಂಬ ಭಾವನೆ ಉಂಟು ಮಾಡಿ, ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಬದಲಿಸುವ ಆಶೆಯನ್ನು ಜನರು ಕೈಬಿಟ್ಟು, ಇರುವುದಕ್ಕೆ ಹೊಂದಿಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಪ್ರತಿಯೊಂದು ಸಮಾಜವಾದಿ ದೇಶದಲ್ಲಿಯೂ ಅಂಥಾ ಸಂಭಿಕ್ಷವಾದ ಪರಿಸ್ಥಿತಿ ಇಲ್ಲದಿದ್ದರೂ ಪಾಶ್ಚಾತ್ಯ ದೇಶಗಳವರು ನೀಡುವಂಥ ನಿರಾಶಾದಾಯಕವಾದ ಪ್ರತೀಕ್ಷೆಗಳಿಗೆ ಏನಾದರೂ ಆಧಾರವಿದೆಯೋ ಎಂದು ತಿಳಿದುಕೊಳ್ಳಲು ನಾವು ಸಮಾಜವಾದಿ ಜಗತ್ತಿನಲ್ಲಿರುವ ವಾಸ್ತವ ಪರಿಸ್ಥಿತಿಯನ್ನು ಗಮನಿಸೋಣ. ಮೊದಲು ಅಭಿವೃದ್ಧಿಗೆ ಸೂಚಕವಾಗಿರುವ ರಾಷ್ಟ್ರೀಯ ವರಮಾನದ ಬೆಳವಣಿಗೆಯ ಪ್ರಮಾಣವನ್ನು ನೋಡೋಣ, 1981 ಮತ್ತು 1983ರ ನಡುವಣ ಕಾಲಾವಧಿಯಲ್ಲಿ ಸಮಾಜವಾದಿ ದೇಶಗಳು ಬಂಡವಾಳಶಾಹಿ ದೇಶಗಳ ಬೆಳವಣಿಗೆಯ ಪ್ರಮಾಣದ ಸೂಚ್ಯಂಕಕ್ಕಿಂತ ಸುಮಾರು ಶೇ 100ರಷ್ಟು ಮುನ್ನಡೆಯಲ್ಲಿದ್ದವು, ಅದೇ ಕಾಲದಲ್ಲಿ ಕೈಗಾರಿಕಾ ಉತ್ಪನ್ನಗಳ ಬೆಳವಣಿಗೆಯ ಪ್ರಮಾಣವು ಸಮಾಜವಾದಿ ದೇಶಗಳಲ್ಲಿ ಶೇ 4.3ರಷ್ಟಾಗಿದ್ದರೆ, ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಅದು ಶೇ. 0,2ರಷ್ಟು ಕೆಳಗಿಳಿದಿತ್ತು. 1983ರಲ್ಲಿ ಬಂಡವಾಳಶಾಹಿ ದೇಶಗಳು ಕೈಗಾರಿಕಾ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ಸಫಲಗೊಂಡಾಗಲೂ ಕೂಡ ಅದರ ಪ್ರಮಾಣವು ಶೇ 2.5ರಷ್ಟಾಗಿತ್ತು, ಆದರೆ ಆ ವರ್ಷದಲ್ಲಿ ಸಮಾಜವಾದಿ ದೇಶಗಳ ಉತ್ಪಾದನಾ ಪ್ರಮಾಣವು ಅದರ ಎರಡರಷ್ಟಾಗಿತ್ತು. ಪರಿಸ್ಥಿತಿ ಹಾಗಿರುವಾಗ ಬಿಕ್ಕಟ್ಟನ್ನು ಅನುಭವಿಸುತ್ತಿರುವವರು ಯಾರು ?

1980ರ ದಶಕದಲ್ಲಿ ನಿಜವಾದ ಸಮಾಜವಾದವನ್ನು ಟೀಕಿಸುತ್ತಿರುವವರು ಸೋವಿಯೆತ್ ಒಕ್ಕೂಟ ಮತ್ತು ಅದರ ಮಿತ್ರ ರಾಷ್ಟ್ರಗಳು ಎದುರಿಸುತ್ತಿರುವ ಎಲ್ಲ ತೊಂದರೆಗಳಿಗೂ ಸಮಾಜವಾದಿ ವ್ಯವಸ್ಥೆ ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಚಾರಗಳ ದೋಷಗಳೇ ಕಾರಣ ಎಂದು ಹೇಳಲು ಪಟ್ಟುಬಿಡದೆ ಪ್ರಯತ್ನಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಪೋಲೆಂಡಿನ ಪರಿಸ್ಥಿತಿಯನ್ನು ಕುರಿತು ಅವರು ಅದಕ್ಕೆ ಉದಾಹರಣೆ ಕೊಡುತ್ತಾರೆ.

1980ರ ದಶಕದ ಪ್ರಾರಂಭದಲ್ಲಿ ಪೋಲಿಷ್ ಜನತೆ ತುಂಬಾ ಕ್ಲಿಷ್ಟವಾದ ಪರಿಸ್ಥಿತಿಯನ್ನು ಎದುರಿಸಿದರು ಎಂಬುದು ನಿಜ. ಹಿಂದಿನ ನಾಯಕತ್ವವು ಮಾಡಿದ ತಪ್ಪುಗಳನ್ನು ಸಮಾಜವಾದಿ ವಿರೋಧಿ ಶಕ್ತಿಗಳು, ಹೊರಗಿನಿಂದ ಬೆಂಬಲ ಪಡೆದು ಉಪಯೋಗಿಸಿಕೊಂಡವು. ಈ ಶಕ್ತಿಗಳು ತಮ್ಮ ವಿಚಾರವನ್ನು ಇಡೀ ಜಗತ್ತಿನಲ್ಲಿ ಹರಡತೊಡಗಿದವು. ಅವು ಅತಿ ಮುಖ್ಯವಾದ ಎರಡು ಅಂಶಗಳನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿ, ಪೋಲೆಂಡಿನಲ್ಲಿ ಬಿಕ್ಕಟ್ಟಿಗೆ ಕಾರಣ ವೈಯಕ್ತಿಕವಾಗಿ ಆದ ತಪ್ಪುಗಳಲ್ಲ, ಸಮಾಜವಾದಿ ವ್ಯವಸ್ಥೆಯ ದೋಷವೇ ಎಂದು ಹೇಳತೊಡಗಿದವು. ಮೊದಲನೆಯದಾಗಿ, ಪೋಲೆಂಡಿನಲ್ಲಿ ಬಿಕ್ಕಟ್ಟು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತಲೆದೋರುವ ಬಿಕ್ಕಟ್ಟಿಗಿಂತ ಸಂಪೂರ್ಣವಾಗಿ ಭಿನ್ನವಾದುದಾಗಿತ್ತು. ಏನೆಲ್ಲ ದೋಷ ಪ್ರವೃತ್ತಿಗಳಿದ್ದಾಗ್ಯೂ, ಅದು ನಿರುದ್ಯೋಗಕ್ಕೆಡೆಕೊಡಲಿಲ್ಲ ಮತ್ತು ದೇಶದ ನಾಯಕತ್ವವು ಬಿಕ್ಕಟ್ಟನ್ನು ದಂಡಿಯುವ

ಜನತೆಯ ಹೊಟ್ಟೆಯ ಮೇಲೆ ಹೊಡೆದು ನಿವಾರಿಸಲು ಪ್ರಯತ್ನಿಸಲಿಲ್ಲ. ಅದಕ್ಕೆ ಪ್ರತಿಯಾಗಿ, ನಾಯಕತ್ವವು ಜನತೆಯ ಬೆಳೆಯುತ್ತಿದ್ದ ಬೇಡಿಕೆಗಳನ್ನು ಪೂರೈಸುವುದಕ್ಕೆ ಪ್ರಯತ್ನಿಸಿತು.

ಎರಡನೆಯದಾಗಿ, ಪೋಲಿಷ್ ನಾಯಕ ವೊಜೇಕ್ ಜಾರುಜೆಲ್‌ಸ್ಕಿಯವರು ಹೇಳಿರುವಂತೆ ದೇಶದಲ್ಲಿ ಪರಿಸ್ಥಿತಿಯು ಕೆಡುವುದಕ್ಕೆ ಕಾರಣ ಸಮಾಜವಾದವಲ್ಲ, ಆದರೆ ಸಮಾಜವಾದವನ್ನು ಸಮರ್ಪಕವಾದ ರೀತಿಯಲ್ಲಿ ಕಾರ್ಯಗತ ಮಾಡದೇ ಹೋದುದಾಗಿತ್ತು. ಪೋಲಿಷ್ ದುಡಿಯುವ ಜನತೆ ಮತ್ತು ಪೋಲಿಷ್ ಯುನೈಟೆಡ್ ವರ್ಕರ್ಸ್ ಪಾರ್ಟಿಯು ಪೋಲೆಂಡಿನ ಕಠಿಣ ಪರಿಸ್ಥಿತಿಗೆ ಕಾರಣಗಳನ್ನು ನೀಡಿವೆ. ಅವುಗಳಲ್ಲಿ ಮುಖ್ಯವಾದುದು ಸಮಾಜವಾದದ ವಿಕಾಸದ ಮೂಲ ನಿಯಮಗಳು ಮತ್ತು ಮಾರ್ಕ್ಸ್‌ವಾದಿ-ಲೆನಿನ್‌ವಾದ ಸೂತ್ರಗಳ ಅನುಸರಣೆಯನ್ನು ಕಡೆಗಣಿಸಿದ್ದಾಗಿದೆ. ಪೋಲಿಷ್ ಬಿಕ್ಕಟ್ಟಿಗೆ ಕಾರಣಗಳನ್ನು ಕುರಿತು ವಿಚಾರ ಮಾಡಿದ ಸಮಾಜವಾದಿ ದೇಶಗಳ ಕಮ್ಯೂನಿಸ್ಟ್ ಪಾರ್ಟಿಗಳು ಅದೇ ಅಭಿಪ್ರಾಯಕ್ಕೆ ಬಂದಿವೆ. ಉದಾಹರಣೆಗೆ, ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ 26ನೇ ಮಹಾಸಭೆಗೆ ಸಮರ್ಪಿಸಿದ ಕೇಂದ್ರ ಸಮಿತಿಯ ವರದಿಯಲ್ಲಿ ಹೀಗೆ ಹೇಳಲಾಗಿದೆ: "ಪಾರ್ಟಿಯ ನಾಯಕತ್ವದ ಪಾತ್ರವನ್ನು ಬಲಗೊಳಿಸುವುದು, ಜನಸಮೂಹಗಳ ಅಪೇಕ್ಷೆಗೆ ನಿಕಟವಾಗಿ ಗಮನ ಕೊಡುವುದು ಅಧಿಕಾರಶಾಹಿ ವರ್ತನೆ ಮತ್ತು ಸ್ವೇಚ್ಛೆಯ ಎಲ್ಲ ಸೂಚನೆಗಳನ್ನು ದೃಢವಾಗಿ ನಿರ್ಮೂಲಗೊಳಿಸುವುದು, ಸಮಾಜವಾದಿ ಪ್ರಜಾಪ್ರಭುತ್ವವನ್ನು ಕ್ರಿಯಾಶೀಲವಾಗಿ ವಿಕಾಸಗೊಳಿಸುವುದು, ಮತ್ತು ವಿದೇಶಿ ಆರ್ಥಿಕ ಸಂಬಂಧಗಳ ವಿಚಾರದಲ್ಲಿ ಕೂಲಂಕಷವಾಗಿ ಪರಿಶೀಲಿಸಿದ ಮತ್ತು ವಾಸ್ತವವಾದ ನೀತಿಯನ್ನು ಅನುಸರಿಸುವುದು ಎಷ್ಟು ಮುಖ್ಯ ಎಂಬುದನ್ನು ಪೋಲೆಂಡಿನ ಘಟನೆಗಳು ಮತ್ತೊಮ್ಮೆ ತೋರಿಸಿಕೊಟ್ಟಿವೆ."

ಸಮಾಜವಾದಿ ನಿರ್ಮಾಣದ, ವಿಕಾಸದ ಸಮಸ್ಯೆಗಳು ಮತ್ತು ಕಾರ್ಯಭಾರಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವ ಬೀರಲು ಹೊರ ದೇಶಗಳ ವಿರೋಧಿ ಶಕ್ತಿಗಳು ಪ್ರಯತ್ನ ನಡೆಸದೆ ಹೋದದ್ದು ಯಾವುದೂ ಇಲ್ಲ ಎಂಬುದನ್ನು ಜಾಗತಿಕ ಸಮಾಜವಾದದ ಇತಿಹಾಸವು ರುಜುವಾತುಗೊಳಿಸುತ್ತದೆ ಅವು ಸಾಮ್ರಾಜ್ಯಶಾಹಿ ಮಿಲಿಟರಿ ಬೆದರಿಕೆ, ಆರ್ಥಿಕ ದಿಗ್ಬಂಧನಗಳು ಅಥವಾ ತಡೆಗಳ ನಿರ್ಮಾಣ, ನೇರವಾದ ಗೂಢಚರ್ಯೆ ಮತ್ತು ವಿಧ್ವಂಸ ಚರ್ಯೆಗಳು ಅಥವಾ ಸಮಾಜವಾದವನ್ನು "ಉತ್ತಮ"ಗೊಳಿಸುವುದು ಹೇಗೆ ಎಂದು ಕಪಟ ಸಲಹೆ ನೀಡುವುದು! ಹೀಗೆ ನಾನಾ ಬಗೆಯದ್ದಾಗಿವೆ. ಸಮಾಜವಾದಿ ದೇಶಗಳ ವಿಕಾಸದಲ್ಲಿ ಯಾವುದೇ ಕಷ್ಟ ಕಾಲವನ್ನೂ ಸಮಾಜವಾದದ ಶತ್ರುಗಳು ತಮ್ಮ ವಿಧ್ವಂಸಕಾರಕ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹಿಂದೆ ಹಾಗೆ ಮಾಡಿದ್ದರು ಈಗಲೂ ಅದನ್ನೇ ಮಾಡುತ್ತಿದ್ದಾರೆ. "ನ್ಯಾಟೋ" ರಾಷ್ಟ್ರಗಳಲ್ಲಿ ಮತ್ತು ಜಪಾನಿನಲ್ಲಿ ಸಮಾಜವಾದಿ ವಿರೋಧಿ ಧೋರಣೆಯನ್ನು ರಾಜ್ಯ ನೀತಿಯ ಮಟ್ಟಕ್ಕೂ ಏರಿಸಲಾಗಿದೆ. 1983ರಲ್ಲಿ ಅಮೆರಿಕಾದ ವಿಲಿಯಂಸ್‌ಬರ್ಗ್‌ನಲ್ಲಿ ಜರುಗಿದ ಪ್ರಮುಖ ಬಂಡವಾಳಶಾಹಿ ದೇಶಗಳ ಸಮ್ಮೇಳನದಲ್ಲಿ ಮೊದಲ ಬಾರಿಗೆ ಇದು ಬಹಿರಂಗವಾಗಿ ವ್ಯಕ್ತಗೊಂಡಿತು. ತಮ್ಮ ಕಾರ್ಯದಲ್ಲಿ ಬಂದ ಎಲ್ಲ ತೊಂದರೆಗಳು ಮತ್ತು ವಿಫಲತೆಗಳಿಗೂ ವಿದೇಶಿ ಶಕ್ತಿಗಳ ಚಿತಾವಣೆಯೊಂದೇ ಕಾರಣ ಎಂದು ಕಮ್ಯೂನಿಸ್ಟರು ಎಂದೂ ಹೇಳಿಲ್ಲ. ಆದರೆ, ಸಮಾಜವಾದಿ ದೇಶವೊಂದರ ಎಲ್ಲ ಬಿಕ್ಕಟ್ಟಿನ ಪ್ರವೃತ್ತಿಗಳ ಹಿಂದೆಯೂ ಸಾಮ್ರಾಜ್ಯಶಾಹಿ ಹಸ್ತಕ್ಷೇಪದ ಚಹರೆ ಇರುತ್ತದೆ ಎಂದು ಹೇಳಿದರೆ

ಉತ್ಪ್ರೇಕ್ಷೆ ಏನಾಗದು. ಸಮಾಜವಾದಿ ದೇಶಗಳಲ್ಲಿನ ಜನತೆಯು ಅನುಭವಿಸಿರುವ ತೊಂದರೆಗಳಿಗೆ ಹೆಚ್ಚು ಮಟ್ಟಿಗೆ ಸಾಮ್ರಾಜ್ಯಶಾಹಿಗಳೇ ಕಾರಣರಾಗಿದ್ದಾರೆ.

ಇನ್ನು ಸಮಾಜವಾದದ ಆಂತರಿಕ ತೊಂದರೆಗಳ ಮಟ್ಟಿಗಾದರೋ ಅವು ಇದ್ದದ್ದೆ ಹಾಗೂ ಇರುವಂಥದ್ದೆ. ಆದರೆ ಅವನ್ನು ಯಾವ ರೀತಿಯಲ್ಲೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬೇರೂರಿರುವ ದೋಷಗಳಿಗೆ ಹೋಲಿಸಲಾಗುವುದಿಲ್ಲ. ಬಹುತೇಕವಾಗಿ ಅವು ಹೊಸ ಸಮಾಜವನ್ನು ನಿರ್ಮಿಸುವಾಗ ಉದ್ಭವಿಸುವಂಥವು. ಅವು ಸಹಜವಾದುವೆ. ನಂತರದ ಕಾಲದಲ್ಲಿ ಅವನ್ನು ಯಶಸ್ವಿಯಾಗಿ ನಿವಾರಿಸಲಾಗಿವೆ. ಈಗ ಬಹುತೇಕ ಸಮಾಜವಾದಿ ರಾಷ್ಟ್ರಗಳು ಉನ್ನತ ಮಟ್ಟಗಳನ್ನು ತಲುಪಲು ಶ್ರಮಿಸುತ್ತಿವೆ. ಹೊಸ ಸಾಮಾಜಿಕ ವ್ಯವಸ್ಥೆಯ ಹೆಚ್ಚು ಪರಿಣಾಮಕಾರಿಯಾಗುತ್ತಿರುವ ಆರ್ಥಿಕ ನಿರ್ವಹಣೆಯನ್ನು ಮತ್ತು ತೀವ್ರವಾದ ಆರ್ಥಿಕಾಭಿವೃದ್ಧಿಗೆ ಪರಿವರ್ತನೆಯನ್ನು ಉತ್ತಮಗೊಳಿಸಲು ಶ್ರಮಿಸುತ್ತಿವೆ.

ಸಮಾಜವಾದಿ ಆದರ್ಶಗಳು ಆಚರಣೆಯಲ್ಲಿ ಕೈಗೂಡಿವೆ ಎಂದು ಕಮ್ಯೂನಿಸ್ಟರು ಭಾವಿಸುವುದಿಲ್ಲ. ಈಗ ನಿರ್ಮಾಣ ಮಾಡಿರುವ ಸಮಾಜವಾದವನ್ನು ಪರಿಪಕ್ವಗೊಳಿಸುವ ದೂರಗಾಮಿಯಾದ ಕಾರ್ಯ ನಡೆಯುತ್ತಿದೆ.

ಇನ್ನು ಜಾಗತಿಕ ಸಮಾಜವಾದಿ ವ್ಯವಸ್ಥೆಯಲ್ಲಿರುವ ರಾಷ್ಟ್ರಗಳ ನಡುವೆ ಸಂಬಂಧಗಳ ಮಟ್ಟಿಗಾದರೋ, ಸೋದರ ದೇಶಗಳ ಪಾರ್ಟಿಗಳು ಮತ್ತು ದೇಶಗಳ ಐಕ್ಯತೆ ಹಾಗೂ ಸಂಸಕ್ರಿಯನ್ನು ಬಲಗೊಳಿಸಲು ಮತ್ತು ಸಂಯುಕ್ತ ಪ್ರಯತ್ನಗಳ ಮೂಲಕವಾಗಿ ಎಲ್ಲ ಅಡಚಣೆಗಳನ್ನು ನಿವಾರಿಸಲು ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ ಮತ್ತು ಆಡಳಿತೆಯಲ್ಲಿರುವ ಇತರ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಾರ್ಟಿಗಳ ದೃಢ ನಿರ್ಧಾರವನ್ನು ತೋರಿಸಲು ಬೇಕಾದಷ್ಟು ಆಧಾರಗಳಿವೆ.

ಜಾಗತಿಕ ಸಮಾಜವಾದಿ ವ್ಯವಸ್ಥೆಯು ಚೈತನ್ಯಪೂರ್ಣವಾಗಿ ಮತ್ತು ಏಕಪ್ರಕಾರವಾಗಿ ವಿಕಾಸಗೊಳ್ಳುತ್ತಿರುವ ಜೀವಂತ ಶಕ್ತಿಯಾಗಿದೆ. ವಿರೋಧಿಗಳು ಒಡ್ಡುತ್ತಿರುವ ಎಲ್ಲ ತೊಂದರೆಗಳು ಮತ್ತು ಅಡಚಣೆಗಳನ್ನು ನಿವಾರಿಸಿಕೊಂಡು, ಹೋರಾಟದಲ್ಲಿ ಅದು ಬೆಳೆಯುತ್ತಿದೆ ಮತ್ತು ಬಲಗೊಳ್ಳುತ್ತಿದೆ. ಜಾಗತಿಕ ಸಮಾಜವಾದಿ ವ್ಯವಸ್ಥೆ ಮತ್ತು ಸಮಾಜವಾದಿ ಸಮುದಾಯವು ಗಳಿಸಿಕೊಂಡಿರುವ ಐತಿಹಾಸಿಕ ಅನುಭವ ಮತ್ತು ಆಧುನಿಕ ಆಚರಣೆಗಳು, ಸಮಾಜವಾದಿ ರಾಷ್ಟ್ರಗಳು ಆರಿಸಿಕೊಂಡಿರುವ ಪಥವು ನಂಬಿಕಾರ್ಹವಾದುದು ಮತ್ತು ಸರಿಯಾದುದು ಎಂಬುದನ್ನು ತೋರಿಸುತ್ತದೆ.

ಇನ್ನು ಸಮಾಜವಾದದ ವಿರುದ್ಧವಾಗಿ ಮಿಲಿಟರಿ ಬೆದರಿಕೆಗಳ ಬಗ್ಗೆ ಹೇಳಬೇಕೆಂದರೆ ಬಲ ಪ್ರಯೋಗದಿಂದ ಸಮಾಜವಾದವನ್ನು ಬಗ್ಗಿಸಲು ಬಯಸುತ್ತಿರುವವರ ಪ್ರಯತ್ನ ವಿಫಲಗೊಳ್ಳುವುದು ಖಚಿತ.

ಮೊದಲನೆಯದಾಗಿ ಸಮಾಜವಾದಿ ದೇಶಗಳ ಆರ್ಥಿಕ, ವಿಜ್ಞಾನ, ತಾಂತ್ರಿಕತೆ ಮತ್ತು ಸೇನಾ ಬಲಗಳು ಹೆಚ್ಚು ಕಡಿಮೆ ಮಿಲಿಟರಿ ಸಮತೋಲನವನ್ನು ಕಾಪಾಡಿಕೊಳ್ಳಲು ತಮ್ಮ ಸಮರ್ಥತೆಯನ್ನು ತೋರಿಸಿವೆ. ಇದು ಸಾಮ್ರಾಜ್ಯಶಾಹಿ ವಲಯಗಳ ಮೇಲೆ ಸರಿಯಾದ ಪರಿಣಾಮವನ್ನುಂಟು ಮಾಡಿದೆ. ಎರಡನೆಯದಾಗಿ, ಸಮಾಜವಾದಿ ಪಥದಲ್ಲಿ ಮುಂದುವರಿಯುತ್ತಿ

ರುವ ಜನರು ಅತ್ಯಂತ ಕಠಿಣವಾದ ಮತ್ತು ದುರ್ಭರ ... ಸ್ಥಿತಿಗಳಲ್ಲೂ ಕೂಡ ತಮ
ಹಾಸಿಕ ಸಾಧನೆಗಳನ್ನು ಕಾಪಾಡಿಕೊಳ್ಳಲು ದೃಢ ನಿಶ್ಚಯ ಮಾಡಿದ್ದಾರೆ. ನಾಜಿ
ಮತ್ತು ಮಿಲಿಟರಿಶಾಹಿ ಜಪಾನಿನ ಮೇಲೆ ಸೋವಿಯೆತ್ ಜನತೆಯ ಮಹಾನ್ ವಿ
೪೦ನೇ ವಾರ್ಷಿಕೋತ್ಸವದ ಈ ವರ್ಷದಲ್ಲಿ ಅದನ್ನು ನೆನಪಿಗೆ ತಂದುಕೊಳ್ಳುವುದು ಸೂಕ್ತ
ಸುತ್ತದೆ.

ಮೂರನೆಯದಾಗಿ, ಸಮಾಜವಾದದೊಂದಿಗೆ ಮಿಲಿಟರಿ ಸಂಘರ್ಷದ ನೀತಿಗೆ ಇಂದು
ಶಾಂತಿಪ್ರಿಯ, ಪುರೋಗಾಮಿ ಮತ್ತು ವಾಸ್ತವಿಕ ಮನೋವೃತ್ತಿಯ ಶಕ್ತಿಗಳ ಮತಿ
ಹೆಚ್ಚು ಹೆಚ್ಚು ವಿರೋಧ ಬರುತ್ತಿದೆ. ಈ ವಿರೋಧವು ಬೆಳೆಯುತ್ತ ಹೋಗುವುದು ಖಿ
ಅದೇ ಸಮಯದಲ್ಲಿ, ಈ ಭೂಮಂಡಲದ ಮೇಲೆ ಶಾಶ್ವತ ಶಾಂತಿ ಮತ್ತು ಸಾಮಾಜಿಕ ಪ್ರಗತಿ
ಹಿತದೃಷ್ಟಿಯಿಂದ ಈ ಎಲ್ಲ ಶಕ್ತಿಗಳು ಮತ್ತು ಸಮಾಜವಾದಿ ದೇಶಗಳ ನಡುವೆ ಪರಸ್ಪರ ತಿ
ವಳಿಕೆ ಮತ್ತು ಸಹಕಾರವು ವಿಸ್ತಾರಗೊಳ್ಳುತ್ತ ಹೋಗುವುದು ಮತ್ತು ಬಲಗೊಳ್ಳುವ
ಎಂಬುದರಲ್ಲಿ ಸಂದೇಹವಿಲ್ಲ. ಈ ಕಷ್ಟ ಕಾಲದಲ್ಲಿ ಆತ್ಮ ವಿಶ್ವಾಸ ಮತ್ತು ಸತ್‌ಪ್ರತೀಕ್ಷೆಗೆ
ನಮಗೆ ನಿಜವಾದ ಆಸರೆಯಾಗಿದೆ.

—●—